ಬುಧವಾರ, ಮೇ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 130 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ಎರಡು ಕಣ್ಣುಗಳಿಂದ ನೋಡಲು ಸಹಾಯ ಮಾಡುವ ಬೈನಾಕುಲರ್‌ಗಳು ಮೂಲತಃ ಸಂಕ್ಷಿಪ್ತ ರೂಪದ ಟೆಲಿಸ್ಕೋಪುಗಳೇ!

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,364 ▼	16,240 ▼	₹52,970 (ಬೆಂಗಳೂರು) ▼	₹63,200 (ಬೆಂಗಳೂರು)	77.34 ▲

ಅವಧಿ ಮುಗಿದ ನಂತರ ಖಾಲಿ ಬಿಡುವಂತಿಲ್ಲ: ಸುಪ್ರೀಂ ಕೋರ್ಟ್ ನಿರ್ದೇಶನ

'ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಿ'

ನವದೆಹಲಿ (ಪಿಟಿಐ): 'ಮೂರು ಹಂತದ ಪರಿಶೀಲನೆ ಇಲ್ಲದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಸಾಧ್ಯವಿಲ್ಲ. ಆದರೆ, ಸ್ಥಳೀಯ ಸಂಸ್ಥೆಗಳ ಅಧಿಕಾರ ಅವಧಿ ಪೂರ್ಣಗೊಂಡ ನಂತರ ನಿರ್ವಾತ ಸೃಷ್ಟಿಯಾಗಲು ಬಿಡದೇ ಚುನಾವಣೆ ನಡೆಸುವುದು ರಾಜ್ಯಗಳ ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಮಧ್ಯಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ, ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ನ್ಯಾಯಪೀಠ ಈ ವಿಷಯವನ್ನು ಸ್ಪಷ್ಟಪಡಿಸಿತು. ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಹಾಗೂ ಸಿ.ಟಿ.ರವಿಕುಮಾರ್ ಈ ಪೀಠದಲ್ಲಿದ್ದಾರೆ.

ರಾಜ್ಯದ 23,263 ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ ಎರಡು ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಮಧ್ಯಪ್ರದೇಶ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಜುಲೈ 12ಕ್ಕೆ ಮುಂದೂಡಿತು.

'ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿ ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಕೆಲ ಅರ್ಜಿಗಳ ವಿಚಾರಣೆ ಬಾಕಿ ಇದೆ. ಕೆಲ ಅರ್ಜಿಗಳಿಗೆ ಸಂಬಂಧಿಸಿ ಮಧ್ಯಂತರ ಆದೇಶಗಳನ್ನು ಹೊರಡಿಸಲಾಗಿದ್ದು, ಇವು ಚುನಾವಣೆ ಅಧಿಸೂಚನೆ ಪ್ರಕಟಿಸಲು ಅಡ್ಡಿಯಾಗಬಹುದು' ಎಂಬುದಾಗಿ ರಾಜ್ಯ ಚುನಾವಣಾ ಆಯೋಗದ ಪರ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈ ವಿಷಯವಾಗಿ ಸುಪ್ರೀಂಕೋರ್ಟ್ ನೀಡುವ ಆದೇಶ ಮತ್ತು ನಿರ್ದೇಶನಗಳನ್ನು ರಾಜ್ಯ ಚುನಾವಣಾ ಆಯೋಗ ಪಾಲಿಸಬೇಕು. ಹೈಕೋರ್ಟ್ ಅಥವಾ ಸಿವಿಲ್ ನ್ಯಾಯಾಲಯ ನೀಡುವ ಆದೇಶಗಳಿಂದ ಪ್ರಭಾವಕ್ಕೆ ಒಳಗಾಗಬಾರದು' ಎಂದು ಸೂಚಿಸಿತು.

7ನೇ ಪುಟ ನೋಡಿ

ಕೋರ್ಟ್ ಹೇಳಿದ್ದೇನು?



- ಮೂರು ಹಂತದ ಪರಿಶೀಲನೆ, ಕ್ಷೇತ್ರಗಳ ಪುನರ್‌ವಿಂಗಡಣೆ ಎಂಬುದು ನಿರಂತರ ಹಾಗೂ ಸಂಕೀರ್ಣವಾದ ಪ್ರಕ್ರಿಯೆ
- ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಲ್ಲಿ ನೂತನ ಚುನಾಯಿತ ಮಂಡಳಿ ಇರಬೇಕಾದುದು ಅಗತ್ಯ
- ಮೂರು ಹಂತದ ಪರಿಶೀಲನೆ ಪೂರ್ಣಗೊಳ್ಳುವವರೆಗೆ, ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ನೀಡಿ ಅಧಿಸೂಚನೆ ಹೊರಡಿಸಬೇಕು

'ಮೀಸಲಾತಿ ಉದ್ದೇಶ, ಸ್ವರೂಪ ಬೇರೆಯಾಗಿವೆ'

'ಸ್ಥಳೀಯ ಸಂಸ್ಥೆಗಳಲ್ಲಿ ನೀಡಲಾಗಿರುವ ಮೀಸಲಾತಿಯ ಸ್ವರೂಪ ಹಾಗೂ ಉದ್ದೇಶವೇ ಬೇರೆ, ಶಿಕ್ಷಣ ಹಾಗೂ ಉದ್ಯೋಗದಲ್ಲಿ ನೀಡಿರುವ ಮೀಸಲಾತಿಯೇ ಬೇರೆ ಎಂಬುದನ್ನು ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠ ಈಗಾಗಲೇ ವ್ಯಾಖ್ಯಾನಿಸಿದೆ.

'ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿ ಮೂರು ಹಂತದ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ನಂತರ, ಭವಿಷ್ಯದಲ್ಲಿ ನಡೆಯುವ ಚುನಾವಣೆಗಳಿಗೆ ಮೀಸಲಾತಿಯನ್ನು ಪರಿಗಣಿಸಬಹುದು. ಆದರೆ, ಸಾಂವಿಧಾನಿಕ ಹೊಣೆಗಾರಿಕೆ ದೃಷ್ಟಿಯಿಂದ ನೋಡಿದಾಗ, ಚುನಾವಣೆಗಳು ನಡೆಯಲೇಬೇಕು ಹಾಗೂ ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು' ಎಂದು ನ್ಯಾಯಪೀಠ ಹೇಳಿತು.

'ಎಲ್ಲಾ ಚುನಾವಣೆಗಳಿಗೂ ಸಿದ್ಧ'

ಬೆಂಗಳೂರು: ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸೇರಿ ಎಲ್ಲ ಚುನಾವಣೆಗಳಿಗೂ ಬಿಜೆಪಿ ಸಿದ್ಧವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಧ್ಯಪ್ರದೇಶ ರಾಜ್ಯದ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ನವದೆಹಲಿಯಲ್ಲಿ ಮಂಗಳವಾರ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

'ಕಾಂಗ್ರೆಸ್‌ನವರು ಚುನಾವಣೆಗೆ ಸಿದ್ಧರಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ನಾವು ಎಲ್ಲ ಚುನಾವಣೆಗಳಿಗೂ ಸಿದ್ಧರಿದ್ದೇವೆ. ಚುನಾವಣೆಗೆ ಹಿಂದೇಟು ಹಾಕುವುದಿಲ್ಲ. ಕಾಂಗ್ರೆಸ್ ಪಕ್ಷ ಅವರದ್ದನ್ನು ಅವರು ನೋಡಿಕೊಳ್ಳಲಿ' ಎಂದರು.

'ನಮಗೆ ಪ್ರತಿಸ್ಪರ್ಧಿಗಳಿಲ್ಲ'

'ಬಿಬಿಎಂಪಿ ಚುನಾವಣೆಯಲ್ಲಿ ನಮಗೆ ಪ್ರತಿಸ್ಪರ್ಧಿಗಳಿಲ್ಲ. ಮತ್ತೆ ಬಿಜೆಪಿಯೇ ಗೆಲ್ಲುತ್ತದೆ. ನಾವು ಯಾವುದೇ ಸಂದರ್ಭದಲ್ಲೂ ಚುನಾವಣೆಗೆ ಸಿದ್ಧರಾಗಿದ್ದೇವೆ. ಬಿಜೆಪಿಗೆ ಅಭ್ಯರ್ಥಿಗಳ ಆಯ್ಕೆಯಷ್ಟೇ ಬಾಕಿ ಇದೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

7ನೇ ಪುಟ ನೋಡಿ



ಜನತಾ ಜಲಧಾರೆ ನಗರದ ಕುರುಬರಹಳ್ಳಿ ವೃತ್ತದಲ್ಲಿ ಜೆಡಿಎಸ್ ವತಿಯಿಂದ ಮಂಗಳವಾರ ಆಯೋಜಿಸಿದ್ದ 'ಜನತಾ ಜಲಧಾರೆ' ಕಾರ್ಯಕ್ರಮದ ವೇಳೆ ಮಳೆ ಸುರಿಯಿತು. ಕಾರ್ಯಕರ್ತರು ಕೊಡೆ ಹಿಡಿದು ಕುಳಿತಿದ್ದರು –ಪ್ರಜಾವಾಣಿ ಚಿತ್ರ

ಸುದ್ದಿ 4B

ಸಮಾಲೋಚನೆ ನಡೆಸಲು ಕೇಂದ್ರಕ್ಕೆ 3 ತಿಂಗಳು ಕಾಲಾವಕಾಶ

ಅಲ್ಪಸಂಖ್ಯಾತ ಮಾನ್ಯತೆ: ಭಿನ್ನ ನಿಲುವಿಗೆ 'ಸುಪ್ರೀಂ' ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದೂಗಳ ಸಂಖ್ಯೆ ಕಡಿಮೆ ಇರುವ ರಾಜ್ಯಗಳಲ್ಲಿ ಅವರನ್ನು ಅಲ್ಪಸಂಖ್ಯಾತರು ಎಂದು ಘೋಷಿಸುವ ವಿಚಾರದಲ್ಲಿ ತನ್ನ ನಿಲುವನ್ನು ಬದಲಿಸಿದ ಕೇಂದ್ರ ಸರ್ಕಾರದ ನಡೆ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದೆ.

ಹಿಂದೂಗಳು ಹಾಗೂ ಇತರೆ ಸಮುದಾಯದವರ ಸಂಖ್ಯೆ ಕಡಿಮೆ ಇದ್ದರೆ ಆ ರಾಜ್ಯದ ವ್ಯಾಪ್ತಿಯಲ್ಲಿ ಅವರನ್ನು ಅಲ್ಪಸಂಖ್ಯಾತರು ಎಂದು ಘೋಷಿಸಬಹುದು ಎಂದು ಮಾರ್ಚ್ 27ರಂದು ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರ ಹೇಳಿತ್ತು. ಆದರೆ, ಅಲ್ಪಸಂಖ್ಯಾತರು ಎಂದು ಘೋಷಿಸಿದರೆ ದೂರಗಾಮಿ ಸಮಸ್ಯೆಗಳು ಉಂಟಾಗಬಹುದು. ಹಾಗಾಗಿ, ವ್ಯಾಪಕ ಸಮಾಲೋಚನೆ ಅಗತ್ಯ ಎಂದು ಕೇಂದ್ರ ಸೋಮವಾರ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಹೇಳಿತ್ತು.

ಬಿಜೆಪಿ ಮುಖಂಡ ಹಾಗೂ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಕೋರ್ಟ್, ಕೇಂದ್ರ ಸರ್ಕಾರವು ಈ ಬಗ್ಗೆ ಖಚಿತ ನಿರ್ಧಾರ ತೆಗೆದುಕೊಳ್ಳದ ಕಾರಣ, ಅನಿಶ್ಚಿತತೆ ಉಳಿದುಕೊಂಡಿದೆ ಎಂದು ಹೇಳಿತು.

ಹಿಂದೂಗಳ ಜನಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿ, ಸಮುದಾಯಕ್ಕೆ ಅಲ್ಪಸಂಖ್ಯಾತ ಮಾನ್ಯತೆ ನೀಡುವ ಕುರಿತಂತೆ ರಾಜ್ಯಗಳು ಹಾಗೂ ಸಂಬಂಧಪಟ್ಟವರ ಜೊತೆ ಸಮಾಲೋಚನೆ ನಡೆಸಲು ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳು ಕಾಲಾವಕಾಶ ನೀಡಲು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರ ನೇತೃತ್ವದ ಪೀಠ ನಿರ್ಧರಿಸಿತು.

ಕೇಂದ್ರ ಸರ್ಕಾರವು ಈ ಹಿಂದೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ತೆಗೆದುಕೊಂಡಿದ್ದ ನಿಲುವಿಗಿಂತ ಭಿನ್ನವಾದ ನಿಲುವು ಮತ್ತೊಂದು ಪ್ರಮಾಣಪತ್ರದಲ್ಲಿ ಇದೆ ಎಂಬ ವಿಚಾರವನ್ನು ಅರ್ಜಿದಾರರು ಗಮನಕ್ಕೆ ತಂದಿದ್ದಾರೆ ಎಂದು ಕೋರ್ಟ್ ಹೇಳಿತು. ಅಲ್ಪಸಂಖ್ಯಾತರು ಎಂದು ಘೋಷಿಸುವುದಕ್ಕೂ ಮುನ್ನ ಸಮಾಲೋಚನೆ ನಡೆಸಬೇಕಿದೆ ಎಂದು ಪ್ರಮಾಣಪತ್ರದಲ್ಲಿ ಕೇಂದ್ರ ಹೇಳಿದೆ. ಆದರೆ, ಈ ರೀತಿ ಭಿನ್ನ ನಿಲುವು ತೆಗೆದುಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ನಿರ್ಣಯ ತೆಗೆದುಕೊಳ್ಳುವುದು ಮುಖ್ಯ ಎಂದು ಪೀಠ ಹೇಳಿತು.

ಮುಂದಿನ ವಿಚಾರಣೆಯನ್ನು ಆಗಸ್ಟ್ 30ಕ್ಕೆ ನಿಗದಿಪಡಿಸಿತು.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



24 ತಾಸುಗಳಲ್ಲಿ ಪ್ರತಿಕ್ರಿಯೆಗೆ ಸುಪ್ರೀಂ ಕೋರ್ಟ್ ಸೂಚನೆ

'ಸೆಕ್ಷನ್ 124ಎ ಅಮಾನತು ಸಾಧ್ಯವೇ?'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 124ಎ (ದೇಶದ್ರೋಹ) ಅಡಿಯಲ್ಲಿ ಇರುವ ದಂಡನೆಯ ಅವಕಾಶವನ್ನು ಕಾನೂನಿನ ಮರುಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳ್ಳುವ ತನಕ ಅಮಾನತಿನಲ್ಲಿ ಇರಿಸುವುದು ಸಾಧ್ಯವೇ ಎಂಬುದನ್ನು 24 ತಾಸುಗಳೊಳಗೆ ತಿಳಿಸಬೇಕು ಎಂದು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿದೆ.

ಈ ಕಾಯ್ದೆಯ ಅಡಿಯಲ್ಲಿ ದಾಖಲಾಗಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಗತಿ ಏನು ಎಂದೂ ಕೋರ್ಟ್ ಪ್ರಶ್ನಿಸಿದೆ.

ಈ ಸೆಕ್ಷನ್ ಅನ್ನು ಮರುಪರಿಶೀಲನೆಗೆ ಒಳಪಡಿಸಲಾಗುವುದು. ಹಾಗಾಗಿ, ಈ ಸೆಕ್ಷನ್‌ನ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ನಿಲ್ಲಿಸಬೇಕು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಅನ್ನು ಕೋರಿತ್ತು.

ದೇಶದ್ರೋಹ ಕಾನೂನಿನ ದುರ್ಬಳಕೆಯಿಂದ ಜನರನ್ನು ರಕ್ಷಿಸುವುದು ಅಗತ್ಯವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು ಹೇಳಿದೆ.

'ಈಗ ಹಲವು ಕಳವಳಗಳು ಉಂಟಾಗಿವೆ. ಅದರಲ್ಲೊಂದು ದುರ್ಬಳಕೆ. ಹನುಮಾನ್ ಚಾಲೀಸಾ ಪಠಿಸಿದವರ ವಿರುದ್ಧವೂ ಈ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಅಟಾರ್ನಿ ಜನರಲ್ ನಿನ್ನೆ ಹೇಳಿದ್ದರು. ಈ ಎಲ್ಲದರಿಂದ ರಕ್ಷಣೆ ಪಡೆಯುವುದು ಹೇಗೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪೀಠವು ಪ್ರಶ್ನಿಸಿದೆ.

ಎಫ್‌ಐಆರ್ ದಾಖಲು ಮತ್ತು ತನಿಖೆಯು ರಾಜ್ಯ ಮಟ್ಟದಲ್ಲಿ ನಡೆಯುತ್ತದೆ. ದುರ್ಬಳಕೆ ಆದರೆ ಸಾಂವಿಧಾನಿಕವಾದ ಪರಿಹಾರ ಇದೆ ಎಂದು ಮೆಹ್ತಾ ಹೇಳಿದರು. ಆದರೆ, ಇದು ಪೀಠಕ್ಕೆ ಸಮಾಧಾನ ತರಲಿಲ್ಲ. 'ಎಲ್ಲರೂ ಕೋರ್ಟ್‌ಗೆ ಹೋಗಿ ಮತ್ತು ಕೆಲ ಕಾಲ ಸೆರೆಮನೆಯಲ್ಲಿ ಇರಿ ಎಂದು ನಾವು ಹೇಳಲಾಗದು. ಸೆಕ್ಷನ್‌ನ ದುರ್ಬಳಕೆ ಆಗುತ್ತಿದೆ ಎಂಬುದರತ್ತ ಸರ್ಕಾರವೇ ಬೊಟ್ಟು ಮಾಡಿರುವಾಗ, ಜನರನ್ನು ನೀವು ಹೇಗೆ ರಕ್ಷಿಸುವಿರಿ' ಎಂದು ಪೀಠವು ಮೆಹ್ತಾ ಅವರನ್ನು ಪ್ರಶ್ನಿಸಿದೆ.

ಸೆಕ್ಷನ್‌ನ ಮರುಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ, ಸೆಕ್ಷನ್ ಅನ್ನು ಅಮಾನತಿನಲ್ಲಿ ಇರಿಸುವಂತೆ ರಾಜ್ಯಗಳಿಗೆ ನಿರ್ದೇಶನ ನೀಡುವುದನ್ನು ಪರಿಶೀಲಿಸಿ ಎಂದೂ ಪೀಠವು ಹೇಳಿದೆ.

ಸರ್ಕಾರದ ನಿಲುವು ಏನೇ ಇರಲಿ, ಸೆಕ್ಷನ್‌ನ ಸಿಂಧುತ್ವದ ಪರಿಶೀಲನೆಯನ್ನು ಕೋರ್ಟ್ ಮುಂದುವರಿಸಬೇಕು ಎಂದು ಅರ್ಜಿದಾರರ ಪರವಾಗಿ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು.

ಮುಖ್ಯಾಂಶಗಳು

- 'ಈ ಸೆಕ್ಷನ್ ಅಡಿ ಬಂಧಿತರ ಹಕ್ಕುಗಳ ರಕ್ಷಣೆಗೆ ಮಾರ್ಗಸೂಚಿ ಬೇಕು'
- ವಿಚಾರಣೆ ಬುಧವಾರಕ್ಕೆ ಮುಂದೂಡಿಕೆ

ಡಿಜಿಪಿ ಹುದ್ದೆಗೆ ರವೀಂದ್ರನಾಥ್ ರಾಜೀನಾಮೆ

ಬೆಂಗಳೂರು: ರಾಜ್ಯ ಪೊಲೀಸ್ ತರಬೇತಿ ವಿಭಾಗದ ಡಿಜಿಪಿ ಡಾ.ಪಿ. ರವೀಂದ್ರನಾಥ್ ಅವರು ತಮ್ಮ ಹುದ್ದೆಗೆ ಮಂಗಳವಾರ ರಾಜೀನಾಮೆ ನೀಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಪತ್ರ ಸಲ್ಲಿಸಿದ್ದಾರೆ.



ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಆಗಿದ್ದ ರವೀಂದ್ರನಾಥ್ ಅವರನ್ನು ಪೊಲೀಸ್ ತರಬೇತಿ ವಿಭಾಗಕ್ಕೆ ಇತ್ತೀಚೆಗಷ್ಟೇ ವರ್ಗಾಯಿಸಲಾಗಿತ್ತು. ಸೋಮವಾರವಷ್ಟೇ ಅವರು ಅಧಿಕಾರ ವಹಿಸಿಕೊಂಡಿದ್ದರು.

ವಿಧಾನಸೌಧದಲ್ಲಿ ಮಂಗಳವಾರ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾದ ರವೀಂದ್ರನಾಥ್, ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

5ನೇ ಪುಟ ನೋಡಿ

ಪರಿಷತ್: ಜೂನ್ 3ರಂದು ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಏಳು ಸದಸ್ಯರ ಅವಧಿ ಜೂನ್ 14 ಕ್ಕೆ ಮುಕ್ತಾಯವಾಗಲಿದ್ದು, ಈ ಸ್ಥಾನಗಳ ಭರ್ತಿಗೆ ಜೂನ್ 3ರಂದು ಚುನಾವಣೆ ನಡೆಯಲಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ದ್ವೈವಾರ್ಷಿಕ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ಮಂಗಳವಾರ ವೇಳಾಪಟ್ಟಿ ಪ್ರಕಟಿಸಿದೆ. ಬಿಜೆಪಿಯ ಲಕ್ಷ್ಮಣ ಸವದಿ, ಲಹರ್ ಸಿಂಗ್ ಸಿರೋಯಾ, ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪೂರ, ಅಲ್ಲಂ ವೀರಭದ್ರಪ್ಪ, ವೀಣಾ ಅಚ್ಚಯ್ಯ, ಜೆಡಿಎಸ್‌ನ ಕೆ.ವಿ. ನಾರಾಯಣ ಸ್ವಾಮಿ ಮತ್ತು ಎಚ್.ಎಂ. ರಮೇಶ್ ಗೌಡ ನಿವೃತ್ತಿಯಿಂದ ತೆರವಾಗಲಿರುವ ಸ್ಥಾನಗಳಿಗೆ ಜೂನ್ 3ರಂದು ಚುನಾವಣೆ ನಡೆಯಲಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಮೇ 17 ರಂದು ಚುನಾವಣಾ ಅಧಿಸೂಚನೆ ಹೊರಡಿಸಲಾಗುತ್ತದೆ. ಮೇ 24 ನಾಮಪತ್ರ ಸಲ್ಲಿಸಲು ಕೊನೆಯ ದಿನ. 25 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಮೇ 27 ಕೊನೆಯ ದಿನ.

ಜೂನ್ 3 ರಂದು ಸಂಜೆ 5 ಗಂಟೆಯಿಂದ ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಸಂತೂರ್ ಮಾಂತ್ರಿಕ ಶಿವಕುಮಾರ್ ಶರ್ಮಾ ಇನ್ನಿಲ್ಲ

ಮುಂಬೈ (ಪಿಟಿಐ): ಖ್ಯಾತ ಸಂತೂರ್ ವಾದಕ ಮತ್ತು ಸಂಗೀತ ನಿರ್ದೇಶಕ ಪಂಡಿತ್ ಶಿವಕುಮಾರ್ ಶರ್ಮಾ (83) ಅವರು ಇಲ್ಲಿನ ಪಾಲಿಹಿಲ್ ನಿವಾಸದಲ್ಲಿ ಮಂಗಳವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

'ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದ ಅವರು ನಿಯಮಿತವಾಗಿ ಡಯಾಲಿಸಿಸ್‌ಗೆ ಒಳಗಾಗುತ್ತಿದ್ದರು. ಅವರು ಮುಂದಿನ ವಾರ ಭೋಪಾಲ್‌ನಲ್ಲಿ ಸಂಗೀತ ಕಾರ್ಯಕ್ರಮ ನೀಡಬೇಕಿತ್ತು' ಎಂದು ಶರ್ಮಾ ಅವರ ಪುತ್ರ ರಾಹುಲ್ ತಿಳಿಸಿದ್ದಾರೆ.

'ಮಂಗಳವಾರ ಬೆಳಿಗ್ಗೆ ಸ್ನಾನದ ಮನೆಯಲ್ಲಿ ಶರ್ಮಾ ಅವರು ಹೃದಯಾಘಾತಕ್ಕೊಳಗಾದರು. ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಅವರು ಮೃತಪಟ್ಟಿದ್ದರು. ನಾನು ನನ್ನ ಎರಡನೇ ತಂದೆಯನ್ನು ಕಳೆದುಕೊಂಡೆ' ಎಂದು ಶರ್ಮಾ ಅವರ ಆಪ್ತ ಸ್ನೇಹಿತ ಪಂಡಿತ್ ಜಸರಾಜ್ ಅವರ ಪುತ್ರಿ ದುರ್ಗಾ ಜಸರಾಜ್ ತಿಳಿಸಿದ್ದಾರೆ.



ಪಂ. ಶಿವಕುಮಾರ್ ಶರ್ಮಾ

'ಶರ್ಮಾ ಅವರ ಪಾರ್ಥಿವ ಶರೀರವನ್ನು ಬುಧವಾರ ಮಧ್ಯಾಹ್ನ 1ರವರೆಗೆ ಜುಹುವಿನಲ್ಲಿರುವ ಅಭಿಜಿತ್ ಕೋಆಪರೇಟಿವ್ ಹೌಸಿಂಗ್ ಸೊಸೈಟಿಯಲ್ಲಿ ಸಾರ್ವಜನಿಕರ ದರ್ಶನಕ್ಕಾಗಿ ಇರಿಸಲಾಗುವುದು, ಬಳಿಕ ವಿಲೇಪಾರ್ಲೆಯಲ್ಲಿರುವ ಪವನ್ ಹನ್ಸ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ' ಎಂದು ಅವರ ಆಪ್ತ ಕಾರ್ಯದರ್ಶಿ ದಿನೇಶ್ ಮಾಹಿತಿ ನೀಡಿದ್ದಾರೆ.

ಸ್ತಬ್ಧವಾಯಿತು ಸಂತೂರ್ ನಾದನದಿ 10

'ಸಂಪುಟ ವಿಸ್ತರಣೆ ಚರ್ಚೆ ಆಗಿಲ್ಲ'

ಬೆಂಗಳೂರು: ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಯಾರ ಜತೆಗೂ ಚರ್ಚೆ ಆಗಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನವದೆಹಲಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ನವೆಂಬರ್‌ನಲ್ಲಿ ನಡೆಯುವ ಕರ್ನಾಟಕ ಹೂಡಿಕೆದಾರರ ಸಮಾವೇಶಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಇಲಾಖೆ ಏರ್ಪಡಿಸಿರುವ ವಿವಿಧ ದೇಶಗಳ ರಾಯಭಾರಿಗಳ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿಯಲ್ಲಿ ಇಲ್ಲ. ಇಬ್ಬರೂ ಸಿಕ್ಕಿದ್ದರೆ ಈ ವಿಷಯ ಪ್ರಸ್ತಾಪಿಸುವ ಉದ್ದೇಶವಿತ್ತು ಎಂದು ಅವರು ಹೇಳಿದರು.

ಆಕಾಂಕ್ಷಿಗಳ ನಿರೀಕ್ಷೆ: ಈ ಬಾರಿ ಖಂಡಿತಾ ಸಂಪುಟ ಪುನಾರಚನೆ ಆಗಬಹುದು ಎಂಬ ವಿಶ್ವಾಸದಲ್ಲಿ ಹಲವು ಆಕಾಂಕ್ಷಿಗಳು ಕಾದು ಕುಳಿತಿದ್ದಾರೆ. ಮುಖ್ಯಮಂತ್ರಿಯವರ ದೆಹಲಿ ಭೇಟಿಯ ವೇಳೆ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆಗೆ ವರಿಷ್ಠರು ಒಪ್ಪಿಗೆ ನೀಡಬಹುದು ಎಂಬ ನಿರೀಕ್ಷೆಯಲ್ಲಿದ್ದರು. ಮಂಗಳವಾರ ಅದಕ್ಕೆ ಅವಕಾಶ ಸಿಗಲಿಲ್ಲ. ಕೆಲವು ಕೇಂದ್ರ ಸಚಿವರನ್ನು ಭೇಟಿ ಮಾಡಿ ಅಭಿವೃದ್ಧಿ ವಿಷಯಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಸಿದರು.

ಒಂದು ವೇಳೆ ಮುಖ್ಯಮಂತ್ರಿಯವರಿಗೆ ಬುಧವಾರ ನಡ್ಡಾ ಮತ್ತು ಶಾ ಅವರ ಜತೆಗೆ ಭೇಟಿಗೆ ಸಮಯ ಸಿಕ್ಕಿದ್ದರೆ, ಸಂಪುಟ ವಿಸ್ತರಣೆಯ ವಿಷಯ ಪ್ರಸ್ತಾಪಿಸುವ ಸಾಧ್ಯತೆ ಇದೆ. ಬುಧವಾರ ಸಂಜೆ ಬೆಂಗಳೂರಿಗೆ ವಾಪಸಾಗಿ ಸಚಿವ ಸಂಪುಟ ಸಭೆಗೆ ಹಾಜರಾಗಬೇಕಾಗಿತ್ತು. ಸಂಪುಟ ಸಭೆಯನ್ನು ಈಗ ಗುರುವಾರಕ್ಕೆ ಮುಂದೂಡಲಾಗಿದೆ.

ಸಮಿತಿ ರಚಿಸಿ ಒಂದೂವರೆ ವರ್ಷದ ಬಳಿಕವೂ ಆಗಿಲ್ಲ 243 ವಾರ್ಡ್‌ಗಳ ಮರುವಿಂಗಡಣೆ

ಬಿಬಿಎಂಪಿ 198 ವಾರ್ಡ್‌ಗಳಿಗೇ ಚುನಾವಣೆ?

● ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಚುನಾವಣೆ ಮುಂದೂಡುವ ಮೂಲಕ ಯಾವುದೇ ಸ್ಥಳೀಯ ಸಂಸ್ಥೆಗಳಲ್ಲೂ ನಿರ್ವಾತ ಸೃಷ್ಟಿಯಾಗಲು ಅವಕಾಶ ನೀಡಬಾರದು ಎಂದು ಸ್ಪಷ್ಟಪಡಿಸಿರುವ ಸುಪ್ರೀಂ ಕೋರ್ಟ್, ಚುನಾಯಿತ ಕೌನ್ಸಿಲ್ ಆಡಳಿತವಿಲ್ಲದ ಸ್ಥಳೀಯ ಸಂಸ್ಥೆಗಳಿಗೂ ತಕ್ಷಣವೇ ಚುನಾವಣೆ ನಡೆಸುವಂತೆ ಆಯಾ ರಾಜ್ಯಗಳ ಚುನಾವಣಾ ಆಯೋಗಗಳಿಗೆ ನಿರ್ದೇಶನ ನೀಡಿದೆ. ಆದರೆ, ಬಿಬಿಎಂಪಿಗೆ ಚುನಾವಣೆ ನಡೆಸುವ ವಿಚಾರದಲ್ಲಿ ರಾಜ್ಯ ಚುನಾವಣಾ ಆಯೋಗವೂ ಇಕ್ಕಟ್ಟಿನ ಸಂದರ್ಭವನ್ನು ಎದುರಿಸುತ್ತಿದೆ.

2020ರ ಸೆ. 10ರ ಒಳಗೆ ಬಿಬಿಎಂಪಿಗೆ ಚುನಾವಣೆ ಪೂರ್ಣಗೊಳ್ಳಬೇಕಿತ್ತು. ಆದರೆ, ಇನ್ನೂ ಚುನಾವಣೆ ನಡೆದಿಲ್ಲ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ತಕ್ಷಣವೇ ಚುನಾವಣೆ ನಡೆಸುವುದು ಅನಿವಾರ್ಯವಾದರೆ ಈ ಹಿಂದಿನಂತೆ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವ ಸಾಧ್ಯತೆ ಹೆಚ್ಚಿದೆ ಎಂದು ರಾಜ್ಯ ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಗೊಂದಲ ಏನು?: ಪ್ರಸ್ತುತ ಬಿಬಿಎಂಪಿಯಲ್ಲಿ 1976ರ ಕೆಎಂಸಿ ಕಾಯ್ದೆ ಪ್ರಕಾರ ಆಡಳಿತ ನಡೆಯುತ್ತಿಲ್ಲ. 2020ರ ಬಿಬಿಎಂಪಿ ಕಾಯ್ದೆಯನ್ನು ಸರ್ಕಾರ 2021ರ ಜನವರಿಯಿಂದ ಜಾರಿಗೊಳಿಸಿದೆ.

ಹೊಸ ಕಾಯ್ದೆ ಪ್ರಕಾರ ಸರ್ಕಾರ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿದೆ. ಆದರೆ, ಅದರ ಪ್ರಕಾರ ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಂಡಿಲ್ಲ.

ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯು 2020ರ ಅ. 14ರಂದು ಮೊದಲ ಸಲ ಅಧಿಸೂಚನೆಯನ್ನೂ ಹೊರಡಿಸಿತ್ತು. ಈ ಕುರಿತು ವರದಿ ನೀಡಲು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅದೇ ಸಂದರ್ಭದಲ್ಲಿ ಸಮಿತಿಯನ್ನೂ ರಚಿಸಿತ್ತು. 2020ರ ಬಿಬಿಎಂಪಿ ಕಾಯ್ದೆ ಜಾರಿಯಾದ ಬಳಿಕ ಸರ್ಕಾರ ವಾರ್ಡ್ ಮರುವಿಂಗಡಣಾ ಸಮಿತಿ ರಚನೆ ಬಗ್ಗೆ 2021ರ ಜ. 29ರಂದು ಪರಿಷ್ಕೃತ ಆದೇಶ ಪ್ರಕಟಿಸಿತು. 2022ರ ಜನವರಿಯಲ್ಲಿ ಸಮಿತಿಯ ಅವಧಿ ಕೊನೆಗೊಂಡಿದೆ. ಈ ಸಮಿತಿ ವಾರ್ಡ್ ಮರುವಿಂಗಡಣೆಯ ವರದಿಯನ್ನೂ ಸಲ್ಲಿಸಿಲ್ಲ. ಸಮಿತಿಯ ಅವಧಿಯನ್ನೂ ಸರ್ಕಾರ ಮುಂದುವರಿಸಿಲ್ಲ.

ಈಗ ಬಿಬಿಎಂಪಿ ಚುನಾವಣೆ ನಡೆಸುವ ಕುರಿತು ಎದುರಾಗಿರುವ ಬಿಕ್ಕಟ್ಟನ್ನು ಎದುರಿಸುವ ಬಗ್ಗೆ ಚರ್ಚಿಸಲು ರಾಜ್ಯ ಚುನಾವಣಾ ಆಯೋಗವು ಕಾನೂನು ತಜ್ಞರ ಜೊತೆ ಬುಧವಾರ ಸಭೆ ನಡೆಸಲು ನಿರ್ಧರಿಸಿದೆ.

‘ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಪಾಲಿಸುವ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲಿದ್ದೇವೆ. ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಕೌನ್ಸಿಲ್‌ಗಳ ಅವಧಿ ಮುಗಿಯುವ ಮುನ್ನವೇ ಚುನಾವಣೆ ನಡೆಸುವುದಕ್ಕೆ ಆಯೋಗ ಬದ್ಧವಾಗಿದೆ ಎಂದು ರಾಜ್ಯ ಚುನಾವಣಾ ಆಯುಕ್ತ ಬಿ.ಬಸವರಾಜು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ವಾರ್ಡ್ ಮರುವಿಂಗಡಣೆ ಪ್ರಕ್ರಿಯೆಗಳನ್ನು ಚುನಾಯಿತ ಕೌನ್ಸಿಲ್‌ನ ಅಧಿಕಾರದ ಅವಧಿ ಮುಗಿಯುವ ಒಂದು ವರ್ಷ ಮುನ್ನವೇ ಪೂರ್ಣಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನವಿದೆ. ಆಯೋಗವು ಸಾಕಷ್ಟು ಬಾರಿ ಪತ್ರ ಬರೆದರೂ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆಯನ್ನು ಸರ್ಕಾರ ನಡೆಸಿರಲಿಲ್ಲ. ಅದನ್ನು ಪ್ರಶ್ನಿಸಿ ನಾವೇ 2020ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದೆವು. ಹೈಕೋರ್ಟ್ ಆದೇಶಿಸಿದ ಬಳಿಕವಷ್ಟೇ ಸರ್ಕಾರ 198 ವಾರ್ಡ್‌ಗಳನ್ನು ಮರುವಿಂಗಡಣೆ ಮಾಡಿ 2020ರ ಜುಲೈನಲ್ಲಿ ವರದಿ ನೀಡಿತ್ತು. ಮೀಸಲಾತಿಯ ಕರಡು ಸಿದ್ಧಪಡಿಸಿತ್ತು. ಆದರೆ, ಆ ಕುರಿತು ಅಂತಿಮ ವರದಿಯನ್ನು ಸಲ್ಲಿಸಿಲ್ಲ’ ಎಂದು ಅವರು ತಿಳಿಸಿದರು.

‘ನಾವು 198 ವಾರ್ಡ್‌ಗಳಿಗೆ ಚುನಾವಣೆ ನಡೆಸಲು ಸಿದ್ಧತೆ ನಡೆಸುತ್ತಿರುವಾಗಲೇ ಸರ್ಕಾರ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ಕ್ರಮಕೈಗೊಂಡಿತು. ಆದರೆ, ಈ ಹಿಂದೆ ನಿರ್ಧರಿಸಿದಂತೆ 198 ವಾರ್ಡ್‌ಗಳನ್ನೇ ಉಳಿಸಿಕೊಂಡು ಚುನಾವಣೆ ನಡೆಸುವಂತೆ ಹೈಕೋರ್ಟ್ ಸೂಚಿಸಿತ್ತು. ಅದಕ್ಕೆ ಸರ್ಕಾರ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದಿತ್ತು. ತಡೆಯಾಜ್ಞೆ ತೆರವುಗೊಳಿಸುವಂತೆ ನಾವು ಕೋರಿದ್ದೆವು. ಚುನಾವಣೆ ನಡೆಸುವಂತೆ ಈಗ ಸ್ವತಃ ಸುಪ್ರೀಂ ಕೋರ್ಟ್ ಹೇಳಿದೆ’ ಎಂದು ಹೇಳಿದರು.

‘ಚುನಾವಣಾ ಆಯೋಗದ ತೀರ್ಮಾನವೇ ಅಂತಿಮ’

‘ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬಿಬಿಎಂಪಿ ಚುನಾವಣೆಗೆ ನಡೆಸುವ ವಿಚಾರದಲ್ಲಿ ರಾಜ್ಯ ಚುನಾವಣಾ ಆಯೋಗದ ತೀರ್ಮಾನವೇ ಅಂತಿಮ. ಇದರಲ್ಲಿ ಸರ್ಕಾರದ ಪಾತ್ರವಿಲ್ಲ. ಆಯೋಗವು ಚುನಾವಣೆ ನಡೆಸಲು ತೀರ್ಮಾನಿಸಿದರೆ ಸಹಕಾರ ನೀಡಲೇ ಬೇಕಾಗುತ್ತದೆ’ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

‘ಸುಪ್ರೀಂ ಕೋರ್ಟ್‌ನಿಂದ ಯಾವೆಲ್ಲ ಸ್ಪಷ್ಟೀಕರಣಗಳನ್ನು ಚುನಾವಣಾ ಆಯೋಗವು ಬಯಸಿತ್ತೋ ಅದೆಲ್ಲದಕ್ಕೂ ಮಂಗಳವಾರದ ಆದೇಶದಲ್ಲಿ ಸ್ಪಷ್ಟ ಉತ್ತರ ಸಿಕ್ಕಿದೆ. ಹಾಗಾಗಿ ಆಯೋಗವು ಚುನಾವಣೆಗೆ ಹೋಗುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ’ ಎಂದು ಉನ್ನತ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

‘ಕೆಆರ್‌ಎಸ್ ಅಧಿಕಾರಕ್ಕೆ ಬಂದರೆ ಹಲವರು ಜೈಲಿಗೆ’

ಪಾಂಡವಪುರ: ‘ರಾಜ್ಯದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಅಧಿಕಾರಕ್ಕೆ ಬಂದರೆ ಬಿ.ಎಸ್.ಯಡಿಯೂರಪ್ಪ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ ಹಾಗೂ ಆರಗ ಜ್ಞಾನೇಂದ್ರ ಸೇರಿದಂತೆ ಭ್ರಷ್ಟ ರಾಜಕಾರಣಿಗಳನ್ನು ಜೈಲಿಗೆ ಕಳುಹಿಸುತ್ತೇವೆ’ ಎಂದು ಕೆಆರ್‌ಎಸ್ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಪ್ರತಿಪಾದಿಸಿದರು.

‘ರಾಜ್ಯದ ಎಲ್ಲಾ ಸಂಪತ್ತು ರಾಜಕಾರಣಿಗಳ ಬಳಿ ಇದೆ. ಅವರು ತೊಲಗದ ಹೊರತು ರಾಜ್ಯಕ್ಕೆ ಮೋಕ್ಷವಿಲ್ಲ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪಾಲಿಕೆಗೆ ತಕ್ಷಣ ಚುನಾವಣೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಬಿಬಿಎಂಪಿಗೆ ತಕ್ಷಣವೇ ಚುನಾವಣೆ ನಡೆಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಒತ್ತಾಯಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆ ನಡೆಸಲು ಮನಸ್ಸಿಲ್ಲದ ಬಿಜೆಪಿಯು ಒಬಿಸಿ ಮೀಸಲಾತಿ ವಿಚಾರವನ್ನು ಮುಂದಿಟ್ಟುಕೊಂಡು ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಮುಂದೂಡಿತ್ತು ಎಂದು ದೂರಿದರು.

ಸುಪ್ರೀಂ ಕೋರ್ಟ್ ನಾಲ್ಕು ದಿನಗಳ ಹಿಂದೆ ಮುಂಬೈ ಮಹಾನಗರ ಪಾಲಿಕೆ ಮತ್ತು ಮಹಾರಾಷ್ಟ್ರ ಸ್ಥಳೀಯ ಸಂಸ್ಥೆಗಳ ಚುನಾವಣೆ ಮಾಡಲು ಸೂಚಿಸಿತ್ತು. ಮಂಗಳವಾರ ಎಲ್ಲ ರಾಜ್ಯಗಳ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದೆ. ಬಿಜೆಪಿ ಚುನಾವಣೆ ತಡೆ ಮಾಡಿದ್ದಕ್ಕೆ ಒಬಿಸಿ ವರ್ಗಕ್ಕೆ ಅನ್ಯಾಯವಾಗಿದೆ. ಒಬಿಸಿಯವರು ಈಗ ಸಾಮಾನ್ಯ ವರ್ಗದಡಿ ಸ್ಪರ್ಧಿಸಬೇಕಾಗಿದೆ ಎಂದು ಟೀಕಿಸಿದರು.

ರಾಜ್ಯ ಸರ್ಕಾರ ವಾರ್ಡ್ ಮರುವಿಂಗಡಣೆ ಮಾಡದಿದ್ದರೆ, ಕಳೆದ ಚುನಾವಣೆಯಲ್ಲಿ ಇದ್ದ ವಾರ್ಡ್‌ಗಳಿಗೇ ಚುನಾವಣೆ ನಡೆಸಬೇಕು. ಇನ್ನೂ ಒಬಿಸಿ ವರ್ಗಕ್ಕೆ ಸಾಮಾನ್ಯ ವರ್ಗದಲ್ಲಿ ಅವಕಾಶ ನೀಡಬೇಕು. ಎಲ್ಲ ರಾಜ್ಯಗಳಲ್ಲೂ ಚುನಾವಣೆ ಮಾಡಬೇಕು ಎಂದು ಸುಪ್ರೀಂಕೋರ್ಟ್ ಆದೇಶದಲ್ಲಿ ಸ್ಪಷ್ಟಪಡಿಸಿದೆ ಎಂದರು.

ಬಿಬಿಎಂಪಿ ಚುನಾವಣೆಗೆ ಜೆಡಿಎಸ್ ಸಿದ್ಧ: ಎಚ್‌ಡಿಕೆ

ಕೋಲಾರ: ‘ಬಿಬಿಎಂಪಿ ಚುನಾವಣೆ ನಡೆಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಬಿಬಿಎಂಪಿ ಚುನಾವಣೆಗೆ ಜೆಡಿಎಸ್ ಪಕ್ಷ ತಯಾರಿದೆ. ಸರ್ಕಾರ ವಿಧಾನಸಭೆ ಚುನಾವಣೆಗೆ ಮೊದಲು ಎಲೆಕ್ಷನ್ ಮಾಡುತ್ತೊ, ಆಮೇಲೆ ಮಾಡುತ್ತೊ ನೋಡೋಣ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಬಿಬಿಎಂಪಿಗೆ ಈಗಲೇ ಚುನಾವಣೆ ನಡೆದರೂ ಜೆಡಿಎಸ್ ಸಿದ್ದವಾಗಿದೆ’ ಎಂದು ಮುಳಬಾಗಿಲು ಪಟ್ಟಣದಲ್ಲಿ ಮಂಗಳವಾರ ನಡೆದ ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಹೇಳಿದರು.

‘ಕೋವಿಡ್–19 ಹೆಸರಲ್ಲಿ ಲೂಟಿ ಮಾಡಿದ ಹಣದಲ್ಲಿ ಸಚಿವರು ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಔತಣಕೂಟ ಏರ್ಪಡಿಸಿದ್ದರು. ಸಚಿವರು ಹಾಕಿದ ಅನ್ನ ತಿನ್ನಬೇಡಿ. ಅವರು ಹಾಕಿಸಿದ ಊಟ ಮಾಡಿದರೆ ಸತ್ತವರ ಆತ್ಮಗಳು ಕನಸಿನಲ್ಲಿ ಬರುತ್ತವೆ ಎಂದು ಬಿಜೆಪಿ ಶಾಸಕರೇ ಹೇಳಿದ್ದರು. ಬಿಜೆಪಿ ಸರ್ಕಾರ ಲೂಟಿಕೋರರ ಸರ್ಕಾರ’ ಎಂದು ದೂರಿದರು.

‘ಗೌಡರಿಗೆ ರೈತರೇ ದೇವರು’

‘ಹಿಂದೂ ಹಿಂದೂ ಎನ್ನುವ ಬಿಜೆಪಿಯಲ್ಲಿ ಗೆಲ್ಲುವ ತನಕ ಮಾತ್ರ ಹಿಂದೂ. ಆಮೇಲೆ ಸದಾನಂದ ಗೌಡ ಅವರು ಹಿಂದು, ಪ್ರಹ್ಲಾದ ಜೋಶಿ ಮುಂದೆ’ ಎಂದು ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಲೇವಡಿ ಮಾಡಿದರು.

‘ಡಿಕೆಶಿಗೆ ಸೋನಿಯಾ ದೇವರು. ಬೊಮ್ಮಾಯಿಗೆ ಮೋದಿ ದೇವರು. ಆದರೆ, ಕುಮಾರಸ್ವಾಮಿ, ದೇವೇಗೌಡರಿಗೆ ರೈತರೇ ದೇವರು’ ಎಂದರು.

‘₹25 ಲಕ್ಷ ಚೆಕ್ ಕೊಟ್ಟಿದ್ದರು’

ಜೆಡಿಎಸ್ ಬೆಂಗಳೂರಿನಲ್ಲಿಯ ಪ್ರಧಾನ ಕಚೇರಿ ಜೆಪಿ ಭವನ ಕಳೆದುಕೊಂಡು ಕಷ್ಟದಲ್ಲಿದ್ದಾಗ ₹25 ಲಕ್ಷ ಚೆಕ್ ಕೊಟ್ಟವರು ಮಂಜುನಾಥ್. ಚೆಕ್ ಕೊಟ್ಟು ಈಗಲೆ ಡ್ರಾ ಮಾಡಿ ಎಂದು ಹೇಳಿದ್ದರು. ಕಳೆದ ಬಾರಿ ಅವರು ಸೋತ ವಿಚಾರ ತಿಳಿದು ಬಹಳ ನೋವಾಗಿದೆ. ಒಬ್ಬ ಮನುಷ್ಯನ ಹಿನ್ನೆಲೆ ನೋಡಿ ಮತ ಕೊಡಿ ಎಂದು ದೇವೇಗೌಡ ಕೋರಿದರು.

ರಾತ್ರಿ ವೇಳೆ ಒಳಾಂಗಣಕ್ಕೆ ಸೀಮಿತ ● ನಿಯಮ ಉಲ್ಲಂಘನೆ ತಡೆಗೆ ತ್ರಿಸದಸ್ಯ ಸಮಿತಿ

ಧ್ವನಿವರ್ಧಕ ಬಳಕೆಗೆ ಅನುಮತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಬ್ದ ಮಾಲಿನ್ಯ ನಿಯಂತ್ರಣ (ನಿರ್ಬಂಧ ಮತ್ತು ನಿಯಂತ್ರಣ) ನಿಯಮ–2000 ಅನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮಂಗಳವಾರ ಸುತ್ತೋಲೆ ಹೊರಡಿಸಲಾಗಿದೆ. ಧ್ವನಿವರ್ಧಕಗಳ ಬಳಕೆ ನಿಯಂತ್ರಣಕ್ಕಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಈ ಕ್ರಮ ಕೈಗೊಂಡಿದೆ.

ಧ್ವನಿವರ್ಧಕಗಳ ಬಳಕೆಗೆ ಅನುಮತಿ ಕಡ್ಡಾಯಗೊಳಿಸಿ ಆದೇಶ ಹೊರಡಿಸುವ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯ ತೀರ್ಮಾನದಂತೆ ಈ ಸುತ್ತೋಲೆ ಹೊರಡಿಸಲಾಗಿದೆ. ಶಬ್ದ ಮಾಲಿನ್ಯ ತಡೆಗೆ 2002ರ ಆಗಸ್ಟ್ 13ರಂದು ಹೊರಡಿಸಿದ್ದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸಕ್ಷಮ ಪ್ರಾಧಿಕಾರದಿಂದ ಲಿಖಿತ ಅನುಮತಿ ಇಲ್ಲದೇ ಧ್ವನಿವರ್ಧಕ ಬಳಸುವಂತಿಲ್ಲ. ರಾತ್ರಿ 10ರಿಂದ ಬೆಳಿಗ್ಗೆ 6ರ ಅವಧಿಯಲ್ಲಿ ಒಳಾಂಗಣದಲ್ಲಿ ಮಾತ್ರ ಧ್ವನಿವರ್ಧಕ ಬಳಸಬಹುದು. ಶಬ್ದ ಮಾಲಿನ್ಯ ನಿಯಂತ್ರಣ ನಿಯಮ–2000 ಅನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ 2005ರ ಜುಲೈ 18ರಂದು ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯ ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

‘ಧ್ವನಿವರ್ಧಕ ಬಳಸುವವರು 15 ದಿನಗಳ ಒಳಗಾಗಿ ಅನುಮತಿ ಪಡೆಯಬೇಕು. ಅನುಮತಿ ಪಡೆಯದೇ ಇರುವವರು ತಾವಾಗಿಯೇ ಧ್ವನಿವರ್ಧಕ ತೆರವುಗೊಳಿಸಬೇಕು ಅಥವಾ ನಿಗದಿತ ಪ್ರಾಧಿಕಾರಗಳು ತೆರವು ಮಾಡಬೇಕು’ ಎಂದು ಸೂಚಿಸಲಾಗಿದೆ.

ಸಮಿತಿಗಳ ರಚನೆ: ಧ್ವನಿವರ್ಧಕಗಳ ಬಳಕೆ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲು ಎಲ್ಲ ಕಡೆಗಳಲ್ಲೂ ಮೂವರು ಸದಸ್ಯರ ಸಮಿತಿಗಳನ್ನು ರಚಿಸುವಂತೆ ಸೂಚಿಸಲಾಗಿದೆ. ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ), ಮಹಾನಗರ ಪಾಲಿಕೆಗಳ ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರತಿನಿಧಿ ಸಮಿತಿಯಲ್ಲಿರುತ್ತಾರೆ. ಉಳಿದ ಕಡೆಗಳಲ್ಲಿ ಡಿವೈಎಸ್‌ಪಿ, ಆಯಾ ತಾಲ್ಲೂಕಿನ ತಹಶೀಲ್ದಾರ್ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರತಿನಿಧಿ ಸಮಿತಿಯಲ್ಲಿರಬೇಕು ಎಂದು ಸೂಚನೆ ನೀಡಲಾಗಿದೆ.

‘ಆದೇಶ ಎಲ್ಲರಿಗೂ ಅನ್ವಯ’

‘ಧ್ವನಿವರ್ಧಕ ಬಳಕೆ ನಿಯಂತ್ರಣ ಆದೇಶವು ಮಸೀದಿ ಸೇರಿದಂತೆ ಎಲ್ಲರಿಗೂ ಅನ್ವಯವಾಗುತ್ತದೆ. ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿ ಧ್ವನಿವರ್ಧಕ ಬಳಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಪರಿಸರ ಸಚಿವ ಆನಂದ್ ಸಿಂಗ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘6 ಗಂಟೆಗೂ ಮುನ್ನ ಆಜಾನ್ ಕೂಗಲು ಧ್ವನಿವರ್ಧಕ ಬಳಕೆಗೆ ಅವಕಾಶ ಇರುವುದಿಲ್ಲ. ಶಬ್ದ ಮಾಲಿನ್ಯ ಪರಿಶೀಲನೆಗೆ ಉಪಕರಣ ಖರೀದಿಸಿ ಪೊಲೀಸರಿಗೆ ನೀಡಲಾಗಿದೆ. ಪೊಲೀಸರು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಜತೆಗೂಡಿ ಕ್ರಮ ಜರುಗಿಸುತ್ತಾರೆ’ ಎಂದರು.

ಶಬ್ದ ಮಾಲಿನ್ಯ ತಡೆಯುವ ವಿಷಯದಲ್ಲಿ ಸಾರ್ವಜನಿಕರು ದೂರು ನೀಡುವವರೆಗೂ ಕಾಯುವುದಿಲ್ಲ. ನಿಯಮ ಉಲ್ಲಂಘನೆ ಆಗುತ್ತಿರುವ ಕುರಿತು ಮಾಹಿತಿ ಬಂದರೆ ಸಾಕು. ಸ್ವಯಂಪ್ರೇರಿತವಾಗಿ ಪರಿಶೀಲನೆ ನಡೆಸಿ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಶಬ್ದ ಪ್ರಮಾಣದ ಮಿತಿ

(ಡೆಸಿಬಲ್‌ಗಳಲ್ಲಿ)

ವಲಯ	ಹಗಲು	ರಾತ್ರಿ
ಕೈಗಾರಿಕಾ ಪ್ರದೇಶ	75	70
ವಾಣಿಜ್ಯ ಪ್ರದೇಶ	65	60
ಜನವಸತಿ ಪ್ರದೇಶ	55	45
ನಿಶ್ಶಬ್ಧ ವಲಯ	50	40

‘ವೈವಾಹಿಕ ಅತ್ಯಾಚಾರ’: ತೀರ್ಪು ಪರಿಶೀಲಿಸಲಿರುವ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪತ್ನಿಯ ಸಮ್ಮತಿ ಇಲ್ಲದೆ ನಡೆಸುವ ಲೈಂಗಿಕತೆ ಅತ್ಯಾಚಾರಕ್ಕೆ ಸಮಾನ’ ಎಂಬ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಲಾದ ಮೇಲ್ಮನವಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಪ್ರಕರಣದ ಪ್ರತಿವಾದಿ ಸಂತ್ರಸ್ತೆಗೆ ನೋಟಿಸ್ ಜಾರಿಗೊಳಿಸಲು ಸುಪ್ರೀಂ ಕೋರ್ಟ್ ಮಂಗಳವಾರ ಆದೇಶಿಸಿದೆ.

ಈ ಕುರಿತಂತೆ ಪತಿ ಸಲ್ಲಿಸಿರುವ ಮೇಲ್ಮನವಿಯನ್ನು, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು ಮಂಗಳವಾರ ವಿಚಾರಣೆಗೆ ಕೈಗೆತ್ತಿಕೊಂಡು ಪರಿಶೀಲಿಸುವುದಾಗಿ ತಿಳಿಸಿತು.

ಮುಂದಿನ ವಿಚಾರಣೆಯನ್ನು ಜುಲೈನಲ್ಲಿ ನಡೆಸುವುದಾಗಿ ನ್ಯಾಯಪೀಠ ತಿಳಿಸಿದೆ. ವಿಚಾರಣೆ ವೇಳೆ ಸಂತ್ರಸ್ತೆಯ ಪರ ಕೇವಿಯಟ್ ಸಲ್ಲಿಸಿದ್ದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಹಾಗೂ ಅರ್ಜಿದಾರರ ಪರ ಹಿರಿಯ ವಕೀಲ ಸಿದ್ಧಾರ್ಥ್ ದವೆ ಹಾಜರಿದ್ದರು.

‘ಕಾನೂನಿನಲ್ಲಿ ಇಂತಹ ಅಸಮಾನತೆಗಳ ಅಸ್ತಿತ್ವದ ಬಗ್ಗೆ ಕಾನೂನು ರಚನೆಕಾರರು ಚಿಂತಿಸಬೇಕು. ಪತ್ನಿಯ ಶರೀರ, ಮನಸ್ಸು ಮತ್ತು ಆತ್ಮದ ಮೇಲೆ ಸವಾರಿ ನಡೆಸುವ ಪುರುಷನ ಪ್ರತಿಗಾಮಿ ಮನೋಧರ್ಮ ಕೊನೆಯಾಗಬೇಕು’ ಎಂದು ಹೈಕೋರ್ಟ್ ತೀರ್ಪಿನಲ್ಲಿ ಉಲ್ಲೇಖಿಸಿದೆ.

ವೈವಾಹಿಕ ಅತ್ಯಾಚಾರ ಅಪರಾಧವಲ್ಲ ಎನ್ನುವ ಸೆಕ್ಷನ್ 375ರ 2ನೇ ವಿನಾಯಿತಿಯ ಸಿಂಧುತ್ವವನ್ನು ಪ್ರಶ್ನಿಸಲಾಗಿರುವ ಅರ್ಜಿಗಳ ಮೇಲಿನ ತೀರ್ಪನ್ನು ಈಗಾಗಲೇ ದೆಹಲಿ ಹೈಕೋರ್ಟ್ ಕಾಯ್ದಿರಿಸಿದೆ.



ಸಂತೂರ್ ದಂತಕಥೆಗೆ ಗೌರವಪೂರ್ವಕ ನಮನಗಳು......

ನಗರದಲ್ಲಿ ಇಂದು

ಮಹಾ ಸಂಪ್ರೋಕ್ಷಣ ಮಹೋತ್ಸವ: ಅತಿಥಿಗಳು–ಸಚಿವರಾದ ಕೆ.ಸುಧಾಕರ್, ಆನಂದ್ ಸಿಂಗ್, ಶಾಸಕ ಎಸ್.ಆರ್.ವಿಶ್ವನಾಥ್, ವೈ.ವಿ. ಸುಬ್ಬಾರೆಡ್ಡಿ, ಆಯೋಜನೆ ಮತ್ತು ಸ್ಥಳ–ತಿರುಮಲ ತಿರುಪತಿ ದೇವಸ್ಥಾನ, ವೈಯಾಲಿಕಾವಲ್, ಬೆಳಿಗ್ಗೆ 9.30

ನಿಮಿಷಾಂಬ ದೇವಿ ಜಯಂತ್ಯುತ್ಸವ: ಆಯೋಜನೆ ಮತ್ತು ಸ್ಥಳ–ಸೋಮೇಶ್ವರ ಆರ್ಯ ಕ್ಷತ್ರಿಯ ಸೇವಾ ಸಂಘ, ರಂಗಸ್ವಾಮಿ ಗುಡಿ ಬೀದಿ, ಬೆಳಿಗ್ಗೆ 10ರಿಂದ

‘ಭಾರತೀಯ ಖಗೋಳ ಶಾಸ್ತ್ರದ ತತ್ವಗಳು’ ಕಾರ್ಯಾಗಾರ: ಆಯೋಜನೆ ಮತ್ತು ಸ್ಥಳ–ಜವಾಹರಲಾಲ್ ನೆಹರು ತಾರಾಲಯ, ಟಿ.ಚೌಡಯ್ಯ ರಸ್ತೆ, ಸಂಜೆ 4ರಿಂದ (ಮೇ 13ರವರೆಗೆ ನಡೆಯಲಿದೆ)

ಕನ್ನಡ ಭಾಷೆ ಕಲಿಸುವ ಶಿಕ್ಷಕರ ಶಿಬಿರ (ಬೆಳಿಗ್ಗೆ 10ರಿಂದ): ನಿರ್ದೇಶಕ–ಅಬ್ದುಲ್ ರೆಹಮಾನ್ ಪಾಷ, ಸಂಜೆ 5.15ಕ್ಕೆ ಸಮಾರೋಪ, ಅಧ್ಯಕ್ಷತೆ–ಮೌಲಾನಾ ವಹೀದುದ್ದೀನ್ ಖಾನ್ ಉಮರಿ ಮದನಿ, ಆಯೋಜನೆ–ಫೆಡರೇಷನ್ ಆಫ್ ಮುಸ್ಲಿಂ ಎಜುಕೇಷನ್ ಇನ್‌ಸ್ಟಿಟ್ಯೂಷನ್, ಸ್ಥಳ–ಇಸ್ಲಾಮಿಕ್ ಸೆಂಟರ್, ಜಾಮಿಯಾ ಮಸೀದಿ ಆವರಣ, ಯಶವಂತಪುರ

ಪ್ರಣಾಮಾಂಜಲಿ ಕಾರ್ಯಕ್ರಮ: ಸಾನ್ನಿಧ್ಯ–ಶಂಕರಭಾರತೀ ಸ್ವಾಮೀಜಿ, ಅತಿಥಿಗಳು–ಸಚಿವ ಬಿ.ಸಿ. ನಾಗೇಶ್, ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್, ಆಯೋಜನೆ–ವೇದಾಂತ ಭಾರತೀ, ಸ್ಥಳ–ಶಿಕ್ಷಕರ ಸದನ, ಕೆ.ಜಿ.ರಸ್ತೆ, ಸಂಜೆ 4.30

ರಾಷ್ಟ್ರೀಯ ತಾಂತ್ರಿಕ ದಿನ: ‘ಮಿಂಚಿನಿಂದ ರಕ್ಷಣೆ ಪಡೆಯಲು ಇತ್ತೀಚಿನ ಸುಧಾರಿತ ತಂತ್ರಜ್ಞಾನ’ ಕುರಿತು ಭಾಷಣ–ಜಿ.ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ–ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಅಂಬೇಡ್ಕರ್ ವೀದಿ, ಸಂಜೆ 5.30



ರಿತು

ಭರತನಾಟ್ಯ ರಂಗಪ್ರವೇಶ: ರಿತು, ಅತಿಥಿಗಳು–ರಾಧಾ ಶ್ರೀಧರ್, ಪ್ರಿಯಶ್ರೀ ರಾವ್, ಸುಮಾ ನಾಗೇಶ್, ವೈ.ಕೆ. ಸಂಧ್ಯಾ ಶರ್ಮ, ಆಯೋಜನೆ–ಶ್ರೀ ಲಲಿತ ಕಲಾನಿಕೇತನ ನೃತ್ಯ ಶಾಲೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6

ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಎಂಸಿಎ) ಸುವರ್ಣ ಮಹೋತ್ಸವ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಮರಣ ಸಂಚಿಕೆ ಬಿಡುಗಡೆ–ಬಿ.ಎಸ್.ಯಡಿಯೂರಪ್ಪ, ಲಾಂಛನ ಮತ್ತು ಲಕೋಟೆ ಬಿಡುಗಡೆ–ಮುರುಗೇಶ್ ನಿರಾಣಿ, ಅಧ್ಯಕ್ಷತೆ–ರಿಜ್ವಾನ್ ಅರ್ಷದ್, ಸ್ಥಳ–ತಾಜ್ ವೆಸ್ಟ್‌ಎಂಡ್, ರೇಸ್‌ಕೋರ್ಸ್ ರಸ್ತೆ, ಸಂಜೆ 6.30

‘ಕೋವಿಗೊಂದು ಕನ್ನಡಕ’ ನಾಟಕ ಪ್ರದರ್ಶನ: ಆಯೋಜನೆ–ಬೆಂಗಳೂರು ಥಿಯೇಟರ್ ಕಲೆಕ್ಟಿವ್, ಸ್ಥಳ–ರಂಗಶಂಕರ, ಸಂಜೆ 7.30

ಯತ್ನಾಳ್ ಹೇಳಿಕೆ: ಕೇಂದ್ರ ಶಿಸ್ತು ಸಮಿತಿಗೆ ವರದಿ

ಉಡುಪಿ: ‘ಮುಖ್ಯಮಂತ್ರಿ ಮಾಡಲು ₹ 2,500 ಕೇಳಿದ್ದರು’ ಎಂಬ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಯನ್ನು ಪಕ್ಷ ಗಂಭೀರವಾಗಿ ತೆಗೆದುಕೊಂಡಿದ್ದು, ಸೂಕ್ತ ಕ್ರಮಕ್ಕೆ ಕೇಂದ್ರ ಶಿಸ್ತು ಸಮಿತಿಗೆ ಕಳುಹಿಸಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದರು.

ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಬಿ ಫಾರಂ ಪಡೆದು ಶಾಸಕರಾದವರು ಪಕ್ಷಕ್ಕೆ ವಿರುದ್ಧವಾಗಿ ಹೇಳಿಕೆ ನೀಡಿದರೆ, ಕೇಂದ್ರ ಶಿಸ್ತು ಸಮಿತಿ ನೋಟಿಸ್ ನೀಡಿ ಕ್ರಮ ತೆಗೆದುಕೊಳ್ಳುತ್ತದೆ’ ಎಂದರು.

‘ಓದಿನಷ್ಟೇ ಕ್ರೀಡೆಗೂ ಪ್ರಾಧಾನ್ಯತೆ ನೀಡಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಬಡ್ಡಿ ಮತ್ತು ಕೊಕ್ಕೊ, ಗ್ರಾಮೀಣ ಕ್ರೀಡೆಗಳು. ಇವುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ವ್ಯಾಸಂಗದ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲೂ ಪಾಲ್ಗೊಳ್ಳುವಂತೆ ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು. ಓದಿನಷ್ಟೇ ಕ್ರೀಡೆಗೂ ಪ್ರಾಧಾನ್ಯತೆ ನೀಡಿದರೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಸಾಧ್ಯ’ ಎಂದು ಪಿಇಎಸ್ ವಿಶ್ವವಿದ್ಯಾಲಯ ಕುಲಾಧಿಪತಿ ಪ್ರೊ.ಎಂ.ಆರ್.ದೊರೆಸ್ವಾಮಿ ತಿಳಿಸಿದರು.

ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ವಹಣೆ ವಿಭಾಗವು ಹಮ್ಮಿಕೊಂಡಿದ್ದ ‘ಕ್ಯಾಂಪಸ್ ಚಾಲೆಂಜ್’ ಅಂತರ ವಿಭಾಗೀಯ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ವಿತರಿಸಿ ಮಂಗಳವಾರ ಮಾತನಾಡಿದರು.

ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಸಂತೋಷ್ ಬಾಬು ಹಾಗೂ ಅಂತರರಾಷ್ಟ್ರೀಯ ಹಾಕಿ ಆಟಗಾರ ಜೂಡ್ ಫೆಲಿಕ್ಸ್ ಮಾತನಾಡಿದರು. 8 ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿಜೇತರಾದ 17 ವಿದ್ಯಾರ್ಥಿಗಳಿಗೆ ಪದಕ ಹಾಗೂ ಪ್ರಮಾಣಪತ್ರ ವಿತರಿಸಲಾಯಿತು.



ಎಂ.ಆರ್.ದೊರೆಸ್ವಾಮಿ ಅವರು ‘ಸ್ಪರ್ಧಾ’ ವಾರ್ಷಿಕ ಕ್ರೀಡಾ ನಿಯತಕಾಲಿಕೆ ಬಿಡುಗಡೆ ಮಾಡಿದರು. (ಎಡದಿಂದ) ಕುಲಸಚಿವ ಕೆ.ಎಸ್.ಶ್ರೀಧರ್, ಉಪಕುಲಪತಿ ಜೆ.ಸೂರ್ಯಪ್ರಸಾದ್, ಕೆ.ಸಂತೋಷ್ ಬಾಬು, ಜೂಡ್ ಫೆಲಿಕ್ಸ್ ಹಾಗೂ ಕ್ರೀಡಾ ನಿರ್ದೇಶಕ ಎಂ.ಎಸ್.ವಿನಯ್ ಇದ್ದರು

ನಾಳೆಯಿಂದ ‘ನಿರ್ಮಾಣ್’ ಸಮ್ಮೇಳನ

ಬೆಂಗಳೂರು: ಇನ್‌ಸ್ಟ್ರಕ್ಟ್ ಸಂಸ್ಥೆಯು ಸುರಂಗ ಮತ್ತು ಭೂಗತ ನಿರ್ಮಾಣ ವಿಷಯ ಕುರಿತ ‘ನಿರ್ಮಾಣ್–2022’ ಸಮ್ಮೇಳನವನ್ನು ಮೇ 12 ಮತ್ತು 13 ರಂದು ನಗರದ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಆಯೋಜಿಸಿದೆ.

‘ಸುರಂಗ ನಿರ್ಮಾಣ ಕ್ಷೇತ್ರದಲ್ಲಿ ಇತ್ತೀಚಿನ ತಂತ್ರಜ್ಞಾನಗಳು, ಯಂತ್ರೋಪಕರಣಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ತಜ್ಞರು ಮಾಹಿತಿ ನೀಡಲಿದ್ದಾರೆ’ ಎಂದು ಸಮ್ಮೇಳನದ ಅಧ್ಯಕ್ಷ ಟಿ.ಎಸ್.ಗುರುರಾಜ್ ತಿಳಿಸಿದರು.

‘ಸಿಎಂ ಬಸವರಾಜ ಬೊಮ್ಮಾಯಿ ಅವರು 12ರಂದು ಉದ್ಘಾಟಿಸಲಿದ್ದಾರೆ. ಬಿಎಂಆರ್‌ಸಿಎಲ್ ಎಂಡಿ ಅಂಜುಂ ಪರ್ವೇಜ್ ಇರಲಿದ್ದಾರೆ.

3,343 ಟಿ.ಸಿ ನಿರ್ವಹಣೆ: ಬೆಸ್ಕಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಪರಿವರ್ತಕಗಳ(ಟಿ.ಸಿ) ನಿರ್ವಹಣೆ ಕಾರ್ಯದ ಮುಂದುವರಿದ ಅಭಿಯಾನದಲ್ಲಿ ಐದು ದಿನಗಳಲ್ಲಿ ಎಲ್ಲ 536 ಸೆಕ್ಷನ್‌ಗಳಲ್ಲಿ 3,343 ಟಿ.ಸಿಗಳ ನಿರ್ವಹಣೆ ಮಾಡಲಾಗಿದೆ ಎಂದು ಬೆಸ್ಕಾಂ ತಿಳಿಸಿದೆ.

‘ತಾಂತ್ರಿಕ ಸಮಸ್ಯೆ ಉಂಟಾಗಿರುವ ಎಲ್ಲ ಟಿಸಿಗಳಿಗೆ ಶಾಶ್ವತ ಕಾಯಕಲ್ಪ ಒದಗಿಸಲು ಬೆಸ್ಕಾಂ ಮುಂದಾಗಿತ್ತು. ಇಂಧನ ಸಚಿವ ವಿ. ಸುನಿಲ್‌ಕುಮಾರ್ ಸೂಚನೆ ಮೇರೆಗೆ ಮೇ 5 ರಂದು ಅಭಿಯಾನ ಕೈಗೊಂಡಿತ್ತು. 15 ದಿನಗಳ ಈ ಅಭಿಯಾನದಲ್ಲಿ ತಾಂತ್ರಿಕ ಸಮಸ್ಯೆ ಎದುರಿಸುತ್ತಿರುವ, ಸುರಕ್ಷಿತವಲ್ಲದ ಟಿ.ಸಿ.ಗಳ ಸ್ಥಳಾಂತರ ಮಾಡುವುದು, ಟಿ.ಸಿ ಎತ್ತರಿಸುವುದು ಸೇರಿದಂತೆ ಟಿ.ಸಿಗಳ ಸಮಗ್ರ ನಿರ್ವಹಣೆಗೆ ಕ್ರಮಕೊಳ್ಳಲಾಗಿದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ತಿಳಿಸಿದ್ದಾರೆ.

ವರದಿ ಪರಿಣಾಮ

ನಗರದಲ್ಲಿ ಸಾರ್ವಜನಿಕರು ಓಡಾಡುವ ಪ್ರದೇಶಗಳಲ್ಲಿರುವ ವಿದ್ಯುತ್ ಪರಿವರ್ತಕಗಳಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ಪ್ರಜಾವಾಣಿಯು ಏ.26ರ ಸಂಚಿಕೆಯಲ್ಲಿ ‘ವಿದ್ಯುತ್ ಪರಿವರ್ತಕ: ಈ ಪರಿ ಅಸಡ್ಡೆ ಸರಿಯೇ?’ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

ಇದೇ 16ರವರೆಗೆ ಬೋಧಿ ಸಪ್ತಾಹ

ಬೆಂಗಳೂರು: ವೈಶಾಖ ಬುದ್ಧ ಪೂರ್ಣಿಮೆ ಹಾಗೂ ಬುದ್ಧ ಜಯಂತಿ ಅಂಗವಾಗಿ ನಗರದ ಮಹಾಬೋಧಿ ಸೊಸೈಟಿಯು ಇದೇ 16ರವರೆಗೆ ‘ಬೋಧಿ ಸಪ್ತಾಹ’ದಡಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೊಸೈಟಿ ಪ್ರಧಾನ ವ್ಯವಸ್ಥಾಪಕ ವಜೀರ ದೋರ್ಜಿ,‘ಮೇ 11ರಂದು ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. ಸಪ್ತಾಹದ ಅಂಗವಾಗಿ ರಕ್ತದಾನ ಶಿಬಿರ, ರೋಗಿಗಳಿಗೆ ದಾನ ಹಮ್ಮಿಕೊಳ್ಳಲಾಗಿದೆ’ ಎಂದರು.

‘ರಾಜ್ಯದ ಹಲವು ಕಡೆ ಬುದ್ಧ ಜಯಂತಿ ಹಮ್ಮಿಕೊಂಡಿದ್ದೇವೆ. 15ರಂದು ಭಿಕ್ಕು ಆನಂದ ಅವರಿಂದ ಧಮ್ಮ ಪ್ರವಚನ ಮತ್ತು ದೀಕ್ಷೆ, 16ರಂದು ಬುದ್ಧ ಪೂರ್ಣಿಮೆ ಅಂಗವಾಗಿ ಸಂಸ್ಥೆಯ ಆವರಣದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿದ್ದು, ಸೊಸೈಟಿಯ ಯುಟ್ಯೂಬ್ ಮತ್ತು ಫೇಸ್‌ಬುಕ್ ಖಾತೆಗಳಲ್ಲಿ ನೇರಪ್ರಸಾರಗೊಳ್ಳಲಿವೆ’ ಎಂದು ಹೇಳಿದರು.

ವಿಳಾಸ: ಮಹಾಬೋಧಿ ಸೊಸೈಟಿ, ಕಾಳಿದಾಸ ರಸ್ತೆ, ಗಾಂಧಿನಗರ.

ಜೈನ ಪದ್ಧತಿ ಕಮ್ಮಟ ಜೂನ್ 9ರಿಂದ

ಬೆಂಗಳೂರು: ಜೈನ ಅಧ್ಯಯನ ಕೇಂದ್ರವು ಜೂನ್ 9 ಮತ್ತು 10ರಂದು ಅಂತರರಾಷ್ಟ್ರೀಯ ಕಮ್ಮಟ ನಡೆಸಲು ನಿರ್ಧರಿಸಿದೆ. ‘23ನೇ ವರ್ಷದ ಈ ಕಮ್ಮಟದಲ್ಲಿ ಜೈನ ಜ್ಞಾನ ಪದ್ಧತಿಗಳ ಕುರಿತು ಚರ್ಚಿಸಲಾಗುತ್ತದೆ. ಬೆಂಗಳೂರಿನ ಕೆ.ಆರ್. ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಪ್ರತಿಭಾ ಪಾರ್ಶ್ವನಾಥ್ ಹಾಗೂ ಸಾಹಿತಿ ಹಂ.ಪ.ನಾಗರಾಜಯ್ಯ ವಿಷಯ ಮಂಡಿಸಲಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

ಕೆಂಗೇರಿ: ಬಸ್ ಅಪಘಾತಕ್ಕೆ ರಸ್ತೆ ಗುಂಡಿ ಕಾರಣ • ಗುಂಡಿಯೊಳಗೆ ಬೀಳುತ್ತಿರುವ ದ್ವಿಚಕ್ರ ವಾಹನ ಸವಾರರು

ತರಾತುರಿಯಲ್ಲಿ ಗುಂಡಿ ಮುಚ್ಚಿದ ಬಿಎಂಆರ್‌ಸಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯಲ್ಲಿನ ಮೆಟ್ರೊ ರೈಲು ಮಾರ್ಗದ ಕಾಂಕ್ರೀಟ್ ಕಂಬಕ್ಕೆ ಕೆಎಸ್‌ಆರ್‌ಟಿಸಿ ಬಸ್ ಗುದ್ದಿ ಸೋಮವಾರ ಬೆಳಗ್ಗಿನ ಜಾವ ಅವಘಡ ಸಂಭವಿಸಿದ ಬಳಿಕ ಎಚ್ಚೆತ್ತಿರುವ ಬೆಂಗಳೂರು ಮೆಟ್ರೊ ರೈಲು ಅಭಿವೃದ್ಧಿ ನಿಗಮ (ಬಿಎಂಆರ್‌ಸಿಎಲ್) ಅಪಾಯವನ್ನು ಆಹ್ವಾನಿಸುವಂತಿದ್ದ ಗುಂಡಿಗಳನ್ನು ರಾತ್ರೋರಾತ್ರಿ ಮುಚ್ಚಿದೆ.

ಮೆಟ್ರೊ ಪಿಲ್ಲರ್ ಸಂಖ್ಯೆ 546ರ ಬಳಿ ಭಾರಿ ಗಾತ್ರದ ಗುಂಡಿಯೊಂದು ರಸ್ತೆಯಲ್ಲಿತ್ತು. ವೇಗವಾಗಿ ಬಂದ ಬಸ್ ಗುಂಡಿಯೊಂದ ಜಿಗಿದು ಚಾಲಕನ ನಿಯಂತ್ರಣ ತಪ್ಪಿ ಮೆಟ್ರೊ ರೈಲು ಮಾರ್ಗದ ಕಾಂಕ್ರೀಟ್ ಕಂಬಕ್ಕೆ (ಸಂಖ್ಯೆ 545) ಡಿಕ್ಕಿ ಹೊಡೆದಿತ್ತು.

'ಮೈಸೂರು ಕಡೆಯಿಂದ ವೇಗವಾಗಿ ಬರುವ ವಾಹನಗಳಿಗೆ ಈ ಗುಂಡಿಗಳಿಂದ ಪ್ರತಿನಿತ್ಯ ಅಪಘಾತ ಸಂಭವಿಸುತ್ತಿದ್ದವು. ದ್ವಿಚಕ್ರ ವಾಹನ ಸವಾರರು ಗುಂಡಿಯೊಳಗೆ ಬಿದ್ದು ಎದ್ದು ಹೋಗುವುದು ಸಾಮಾನ್ಯವಾಗಿತ್ತು. ಕಳೆದ ವಾರವಷ್ಟೇ ವೃದ್ಧ ದಂಪತಿ ಗುಂಡಿಯೊಳಗೆ ಬಿದ್ದು ಸೊಂಟಕ್ಕೆ ಪೆಟ್ಟು ಮಾಡಿಕೊಂಡಿದ್ದರು' ಎಂದು ಸ್ಥಳೀಯರು ದೂರುತ್ತಾರೆ.

'ಗುಂಡಿ ಇರುವುದನ್ನು ಗಮನಿಸಿ ಬ್ರೇಕ್ ಒತ್ತಿ ವಾಹನ ನಿಲ್ಲಿಸಲು ಚಾಲಕರು ಪ್ರಯತ್ನಿಸುತ್ತಾರೆ. ಆಗ ಹಿಂದಿನಿಂದ ವೇಗವಾಗಿ ಬರುವ ವಾಹನಗಳು ಡಿಕ್ಕಿ ಹೊಡೆದು ಸರಣಿ ಅಪಘಾತಗಳ ತಾಣವಾಗಿಯೇ ಮಾರ್ಪಟ್ಟಿತ್ತು. ರಸ್ತೆ ನಿರ್ವಹಣೆ ಮಾಡದೆ ಇರುವುದರಿಂದ ಅಮಾಯಕರು ತೊಂದರೆ ಅನುಭವಿಸುವಂತಾಗಿತ್ತು' ಎಂದು ಬೇಸರ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಬಸ್ ಅಪಘಾತಕ್ಕೀಡಾದ ಬಳಿಕ ಬಿಎಂಆರ್‌ಸಿಎಲ್ ರಾತ್ರೋರಾತ್ರಿ ಗುಂಡಿ ಮುಚ್ಚಿದೆ. ಈ ಕೆಲಸವನ್ನು ಮೊದಲೇ ಮಾಡಿದ್ದರೆ ಅಪಘಾತ ತಪ್ಪಿಸಬಹುದಿತ್ತು ಎಂದು ಕೆಂಗೇರಿಯ ಶಂಕರ್ ಹೇಳಿದರು.

ಮೆಟ್ರೊ ಪಿಲ್ಲರ್ ನಿರ್ಮಾಣ ಮಾಡುವಾಗ ತೆಗೆದಿದ್ದ ಹೊಂಡಗಳನ್ನು ಸರಿಯಾಗಿ ಮುಚ್ಚಿರಲಿಲ್ಲ. ಪಿಲ್ಲರ್ ಸುತ್ತಲೂ ಮಣ್ಣು ಕುಸಿದು ಅವು ಗುಂಡಿಯ ರೂಪ ಪಡೆದುಕೊಂಡಿವೆ. ನಾಯಂಡಹಳ್ಳಿಯಿಂದ ಕೆಂಗೇರಿ ತನಕ ರಸ್ತೆಯ ಎರಡೂ ಬದಿಯಲ್ಲೂ ಇಂತಹದ್ದೇ ಸ್ಥಿತಿ ಇದೆ. ವಾಹನ ಚಾಲಕರು ಈ ಗುಂಡಿಗಳನ್ನು ತಪ್ಪಿಸಲು ಪ್ರಯತ್ನಿಸಿದಾಗ ಅಪಘಾತಗಳು ಸಂಭವಿಸುತ್ತಿವೆ.

ಮೈಸೂರು ರಸ್ತೆಯಲ್ಲಿ ಅಪಾಯಕ್ಕೆ ಆಹ್ವಾನ ನೀಡುವ ಗುಂಡಿಗಳು ಈಗಲೂ ಸಾಕಷ್ಟಿವೆ. ಮೆಟ್ರೊ ಪಿಲ್ಲರ್ ಸಂಖ್ಯೆ 510ರ ಬಳಿ ದೊಡ್ಡ ಗುಂಡಿಯೊಂದು ಬಾಯ್ದೆರೆದುಕೊಂಡಿದೆ. ಇದು ಮತ್ತೊಂದು ಅಪಘಾತಕ್ಕೆ ಕಾರಣವಾಗುವ ಸಾಧ್ಯತೆ ಇದೆ.



ಗುಂಡಿಮಯವಾಗಿರುವ ಮೈಸೂರು ರಸ್ತೆ –ಪ್ರಜಾವಾಣಿ ಚಿತ್ರಗಳು



ಮೈಸೂರು ರಸ್ತೆಯಲ್ಲಿ ಕೆ.ಎಸ್‌ಆರ್‌ಟಿ.ಸಿ ಬಸ್ ಡಿಕ್ಕಿ ಹೊಡೆದ ಮೇಲ್ ರಸ್ತೆ ಗುಂಡಿ ಮುಚ್ಚಿರುವುದು. ಪ್ರಜಾವಾಣಿ ಚಿತ್ರ.

'ಮಳೆ ನಿಂತ ಕೂಡಲೇ ಡಾಂಬರ್'

'ರಸ್ತೆಗೆ ಡಾಂಬರ್ ಹಾಕುವ ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಳೆ ಬಿಡುವು ನೀಡಿದ ಕೂಡಲೇ ಕಾಮಗಾರಿ ಆರಂಭಿಸಲಾಗುವುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾಮಗಾರಿ ಆರಂಭಿಸಿದ ಕೂಡಲೇ ಮಳೆ ಆರಂಭವಾಗಿದ್ದರ ಕಾಮಗಾರಿ ನಿಲ್ಲಿಸಿದ್ದೇವೆ. ಅಪಘಾತ ಸಂಭವಿಸಿದ ಜಾಗದ ಸುತ್ತಮುತ್ತ ಇರುವ ಗುಂಡಿಗಳನ್ನು ಈಗ ಮುಚ್ಚಲಾಗಿದೆ' ಎಂದು ಹೇಳಿದರು.

'ನ್ಯೂನತೆ ಇರುವುದರಿಂದ ಹಸ್ತಾಂತರ ಮಾಡಿಕೊಂಡಿಲ್ಲ'

'ಮೆಟ್ರೊ ರೈಲು ಮಾರ್ಗದ ಕಾಮಗಾರಿ ನಿರ್ವಹಿಸಲು ರಸ್ತೆಯನ್ನು ಬಿಎಂಆರ್‌ಸಿಎಲ್‌ಗೆ ಹಸ್ತಾಂತರಿಸಲಾಗಿದ್ದು, ನ್ಯೂನತೆಗಳಿರುವುದರಿಂದ ಕಾಮಗಾರಿ ಪೂರ್ಣಗೊಂಡಿದ್ದರೂ ಮರು ಹಸ್ತಾಂತರ ಮಾಡಿಕೊಂಡಿಲ್ಲ' ಎಂದು ಬಿಬಿಎಂಪಿ ಸ್ಪಷ್ಟಪಡಿಸಿದೆ. 'ಹಸ್ತಾಂತರ ಮಾಡಿಕೊಳ್ಳುವಂತೆ 2021ರ ಸೆಪ್ಟೆಂಬರ್‌ನಲ್ಲಿ ಬಿಎಂಆರ್‌ಸಿಎಲ್ ಪತ್ರ ಬರೆದಿತ್ತು. ಆದರೆ, ನ್ಯೂನತೆಗಳನ್ನು ಸರಿಪಡಿಸಿದ ನಂತರ ಜಂಟಿ ಪರಿಶೀಲನೆ ನಡೆಸಿ ಹಸ್ತಾಂತರಕ್ಕೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದ್ದೆವು' ಎಂದು ಬಿಬಿಎಂಪಿ ವಿಶೇಷ ಆಯುಕ್ತರು (ಯೋಜನೆ) ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

ಶ್ರೀಕಿ ಸಹೋದರನ ವಿದೇಶ ಪ್ರಯಾಣಕ್ಕೆ ಅನುಮತಿ ಕೋರಿಕೆಗೆ ಇ.ಡಿ ಆಕ್ಷೇಪ

ಬೆಂಗಳೂರು: 'ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ಅವರ ಸಹೋದರ ಸುದರ್ಶನ್ ರಮೇಶ್ ಈ ಹಂತದಲ್ಲಿ ವಿದೇಶ ಪ್ರಯಾಣ ಕೈಗೊಳ್ಳಲು ನಾವು ಅನುಮತಿ ನೀಡುವುದಿಲ್ಲ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತೊಮ್ಮೆ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

'ನನ್ನ ವಿದೇಶ ಪ್ರವಾಸಕ್ಕೆ ಇ.ಡಿ ನಿರ್ಬಂಧ ಹೇರಿರುವುದನ್ನು ರದ್ದುಪಡಿಸಬೇಕು' ಎಂದು ಕೋರಿ ಸುದರ್ಶನ್ ರಮೇಶ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಇ.ಡಿ ಪರ ವಕೀಲ ಪಿ.ಪ್ರಸನ್ನಕುಮಾರ್, 'ಅರ್ಜಿದಾರರು 50 ಸಾವಿರ ಗ್ರೇಟ್ ಬ್ರಿಟನ್ ಪೌಂಡ್‌ಗಳ ವಹಿವಾಟು ನಡೆಸಿರುವುದನ್ನು ಪ್ರಶ್ನಿಸುವುದಕ್ಕೆ ಸಂಬಂಧಿಸಿದಂತೆ ಇದೇ 5ರಂದು ಹಾಜರಾಗಲು ಇಡಿ ಸಮನ್ಸ್ ನೀಡಿತ್ತು. ಆದರೆ, ಅವರು ಹಾರಿಕೆಯ ಉತ್ತರ ನೀಡುತ್ತಿದ್ದಾರೆ. ಆದ್ದರಿಂದ, ಈ ವಿಷಯದಲ್ಲಿ ಸಂಪೂರ್ಣ ತನಿಖೆಯ ಅಗತ್ಯವಿದೆ. ವಿದೇಶಿ ಬ್ಯಾಂಕುಗಳಲ್ಲಿ ಅವರ ವಹಿವಾಟಿಗೆ ಸಂಬಂಧಿಸಿದ ಕೂಲಂಕಷ ತನಿಖೆಯ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ಲುಕ್ ಔಟ್ ಸರ್ಕ್ಯೂಲರ್ (ಎಲ್‌ಒಸಿ) ವಾಪಸು ಪಡೆಯಲು ಈ ಹಂತದಲ್ಲಿ ಸಾಧ್ಯವಿಲ್ಲ' ಎಂಬ ಇ.ಡಿ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿದೆ.

ರಸ್ತೆ ಅಪಘಾತ: ಮೂವರು ಸಾವು

ಕುಣಿಗಲ್ (ತುಮಕೂರು): ತಾಲ್ಲೂಕಿನ ಗವಿಮಠ ಬಳಿ ಮಂಗಳವಾರ ಮುಂಜಾನೆ ಕಾರು ಮತ್ತು ಟೆಂಪೊ ಟ್ರಾವೆಲರ್ (ಟಿ.ಟಿ) ನಡುವೆ ನಡೆದ ಅಪಘಾತದಲ್ಲಿ ಬೆಂಗಳೂರಿನ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಎಂಟು ಮಂದಿ ಗಾಯಗೊಂಡಿದ್ದಾರೆ.

ಬೆಂಗಳೂರಿನಿಂದ ಹಾಸನದ ಕಡೆ ಹೊರಟಿದ್ದ ರಘು ಮತ್ತು ಸ್ನೇಹಿತರಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ರಾಷ್ಟ್ರೀಯ ಹೆದ್ದಾರಿ 75ರ ಬೈಪಾಸ್ ರಸ್ತೆಯ ವಿಭಜಕಕ್ಕೆ ಗುದ್ದಿದೆ. ನಂತರ ಎದುರುಗಡೆ ಬರುತ್ತಿದ್ದ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಬೆಂಗಳೂರಿನ ರಘು (38), ಮತ್ತಿಕೆರೆಯ ವಿಜಯ್ ಕುಮಾರ್ (43) ಮತ್ತು ರಾಕೇಶ್ (26) ಸ್ಥಳದಲ್ಲಿಯೇ ಸಾವಿಗೀಡಾದರು. ಚಾಲಕ ಲೋಕೇಶ್ ತೀವ್ರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ಮಂಜುನಾಥ್ ಮತ್ತು ಸಂಬಂಧಿಕರು ಧರ್ಮಸ್ಥಳ ಪ್ರವಾಸ ಮುಗಿಸಿ ಟೆಂಪೊ ಟ್ರಾವೆಲರ್‌ನಲ್ಲಿ ಬೆಂಗಳೂರಿಗೆ ಹಿಂದಿರುಗುತ್ತಿದ್ದರು. ಚಾಲಕ ವಸಂತ್ ಕುಮಾರ್ ಸೇರಿದಂತೆ ವಾಹನದಲ್ಲಿದ್ದ ಆರು ಮಂದಿ ಗಾಯಗೊಂಡಿದ್ದಾರೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಳ್ಳು ಜಾತಿ ಪ್ರಮಾಣ ಪತ್ರ: ಸರ್ಕಾರಿ ನೌಕರಿ ಗಿಟ್ಟಿಸಿದ ಆರೋಪ

ಹತ್ತು ವರ್ಷದ ಬಳಿಕ ಸಂತ್ರಸ್ತೆಗೆ ನ್ಯಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಉದ್ಯೋಗ ಗಿಟ್ಟಿಸಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಬೆಂಗಳೂರಿನ ಮತ್ತಿಕೆರೆ ನಿವಾಸಿಯಾದ ಸಾವಿತ್ರಮ್ಮ (64) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, 'ಅರ್ಜಿದಾರರು ಮದುವೆಯಾದ ಆರಂಭದಲ್ಲಿಯೇ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಹಾಗಾಗಿ, ಅವರು ಮೀಸಲು ಸೌಲಭ್ಯ ಪಡೆಯಲು ಮತ್ತು ಉದ್ಯೋಗ ಗಿಟ್ಟಿಸಲು ದುರುದ್ದೇಶ ಪೂರ್ವಕವಾಗಿ ಪರಿಶಿಷ್ಟ ಪಂಗಡ (ಎಸ್ಟಿ) ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಎಂದು ಹೇಳಲಾಗದು' ಎಂದು ಅಭಿಪ್ರಾಯಪಟ್ಟು ಪ್ರಕರಣವನ್ನು ರದ್ದುಪಡಿಸಿದೆ.

ಪ್ರಕರಣವೇನು?: ಬ್ರಾಹ್ಮಣ ಜಾತಿಗೆ ಸೇರಿದ ಸಾವಿತ್ರಮ್ಮ, 1974ರಲ್ಲಿ ಪರಿಶಿಷ್ಟ ಪಂಗಡಕ್ಕೆ (ಎಸ್ಟಿ) ಸೇರಿದ ನಾಯಕ ಜನಾಂಗದ ವ್ಯಕ್ತಿಯನ್ನು ವಿವಾಹವಾಗಿದ್ದರು. ನಂತರ ಎಸ್ಟಿ ಜಾತಿ ಪ್ರಮಾಣ ಪತ್ರ ಪಡೆದಿದ್ದರು. ಮೀಸಲು ಕೋಟಾದಡಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಪ್ರಥಮ ದರ್ಜೆ ಸಹಾಯಕರಾಗಿ (ಎಸ್‌ಡಿಎ) ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಂಡಿದ್ದರು.

ಜಾತಿ ಪ್ರಮಾಣ ಪತ್ರ ಪರಿಶೀಲನೆಯ ವೇಳೆ ಸಾವಿತ್ರಮ್ಮ ಪತಿಯ ಜಾತಿ ಪ್ರಮಾಣ ಪತ್ರ ಪಡೆದು ಉದ್ಯೋಗ ಗಿಟ್ಟಿಸಿದ್ದಾರೆ ಎಂದು ಆರೋಪಿಸಿ ಅವರ ಎಸ್ಟಿ ಜಾತಿ ಪ್ರಮಾಣ ಪತ್ರವನ್ನು ರದ್ದುಗೊಳಿಸಲಾಗಿತ್ತು. ಅಂತೆಯೇ, 2012ರ ಏಪ್ರಿಲ್ 28ರಂದು ನೌಕರಿಯಿಂದ ವಜಾಗೊಳಿಸಿ ಸರ್ಕಾರ ಆದೇಶಿಸಿತ್ತು. ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ-1989ರ ಕಲಂ 3(1)(9) ಅಡಿಯಲ್ಲಿ ವಂಚನೆ ಮತ್ತು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಲಾಗಿತ್ತು.

ತುಮಕೂರಿನ ವಿಚಾರಣಾ ನ್ಯಾಯಾಲಯದಲ್ಲಿನ ಈ ಪ್ರಕರಣ ರದ್ದುಗೊಳಿಸುವಂತೆ ಕೋರಿ ಸಾವಿತ್ರಮ್ಮ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣ ರದ್ದುಗೊಂಡಿರುವ ಕಾರಣ ಸಾವಿತ್ರಮ್ಮ ಸೇವೆಯಿಂದ ನಿವೃತ್ತರಾದ ಹತ್ತು ವರ್ಷಗಳ ಬಳಿಕ ನ್ಯಾಯ ಪಡೆದಂತಾಗಿದೆ.

ಕಾನ್‌ಸ್ಟೆಬಲ್ ಅನುಮಾನಾಸ್ಪದ ಸಾವು

ಬೆಂಗಳೂರು: ರಾಜರಾಜೇಶ್ವರಿನಗರ ಠಾಣೆ ಕಾನ್‌ಸ್ಟೆಬಲ್ ಕಂಠೆಪ್ಪ ಬಿರಾದಾರ (29) ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಮಂಗಳವಾರ ಬೆಳಿಗ್ಗೆ ಅವರ ಮೃತದೇಹ ಪತ್ತೆಯಾಗಿದೆ.

'ವಿಜಯಪುರದ ಕಂಠೆಪ್ಪ, ರಾಜರಾಜೇಶ್ವರಿನಗರದಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು. 'ಸೋಮವಾರ ಕೆಲಸ ಮುಗಿಸಿ ಮನೆಗೆ ಹೋಗಿದ್ದರು. ಮಂಗಳವಾರ ಬೆಳಿಗ್ಗೆ ಕೆಲಸಕ್ಕೆ ಬಂದಿರಲಿಲ್ಲ. ಅನುಮಾನಗೊಂಡ ಸಹೋದ್ಯೋಗಿಗಳು, ಮನೆಗೆ ಹೋಗಿ ನೋಡಿದಾಗ ಬಾಗಿಲು ಒಳಗಿನಿಂದ ಬೀಗ ಹಾಕಲಾಗಿತ್ತು. ಬಾಗಿಲು ಮೀಟಿ ತೆರೆದು ನೋಡಿದಾಗ ಮೃತದೇಹ ಪತ್ತೆಯಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕೊಲೆ: ಬಿಜೆಪಿ ಮುಖಂಡ ಸೇರಿ 7 ಮಂದಿ ಬಂಧನ

ಕೆಜಿಎಫ್: ಬೀರನಕುಪ್ಪ ಗ್ರಾಮದಲ್ಲಿ ಮಂಗಳವಾರ ರಾತ್ರಿ ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ನಾರಾಯಣಪ್ಪ ಎಂಬುವರ ಕೊಲೆ ಮಾಡಲಾಗಿದೆ.

ಬೋವಿ ಜನಾಂಗದ ನಾರಾಯಣಪ್ಪ ಅವರಿಗೂ ಗ್ರಾಮದ ಬಿಜೆಪಿ ಮುಖಂಡ ಕೃಷ್ಣಾರೆಡ್ಡಿಗೂ ವೈಷಮ್ಯವಿತ್ತು. ನಾರಾಯಣಪ್ಪ ಮತ್ತು ಸಹಚರರು ಕೃಷ್ಣಾರೆಡ್ಡಿ ಮೇಲೆ ಈ ಹಿಂದೆ ದಾಳಿ ಮಾಡಲು ಪ್ರಯತ್ನಿಸಿದ್ದರು. ಈ ಹಿನ್ನೆಲೆಯಲ್ಲಿ ಕುಪಿತಗೊಂಡಿದ್ದ ಕೃಷ್ಣಾರೆಡ್ಡಿ ತನ್ನ ಕುಟುಂಬದ ಸದಸ್ಯರೊಂದಿಗೆ ರಾತ್ರಿ ನಾರಾಯಣಪ್ಪ ಅವರ ಮನೆ ಬಳಿ ಹೋಗಿ ಕತ್ತಿಯಿಂದ ಹಲ್ಲೆ ನಡೆಸಿದ್ದಾನೆ. ಹಲ್ಲೆಗೊಳಗಾದ ನಾರಾಯಣಪ್ಪ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಹಿನ್ನೆಲೆಯಲ್ಲಿ ಆರೋಪಿ ಕೃಷ್ಣಾರೆಡ್ಡಿ, ಆತನ ಪತ್ನಿ ಮತ್ತು ಪಾರಾಂಡಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಭಾರತಮ್ಮ, ಮಂಜುಳಾ, ಗಂಗೋಜಿ, ಶೋಭಾ, ಬೈಯ್ಯಮ್ಮ ಮತ್ತು ಭಾಗ್ಯಮ್ಮ ಅವರನ್ನು ಬಂಧಿಸಲಾಗಿದೆ. ಕೇಂದ್ರ ವಲಯದ ಐಜಿಪಿ ಚಂದ್ರಶೇಖರ್ ನಗರಕ್ಕೆ ಭೇಟಿ ನೀಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೇವರಾಜ್ ಅವರ ಬಳಿ ಮಾಹಿತಿ ಪಡೆದರು.

ವಿಮಾನ ನಿಲ್ದಾಣ ಮೆಟ್ರೊ ಮಾರ್ಗ: ಮೊದಲ ಪಿಲ್ಲರ್‌ಗೆ ಕಾಂಕ್ರೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ 'ನಮ್ಮ ಮೆಟ್ರೊ' ರೈಲು ಮಾರ್ಗದ ಕಾಮಗಾರಿ ಚುರುಕು ಪಡೆದಿದ್ದು, ಮೊದಲ ಪಿಲ್ಲರ್ ನಿರ್ಮಾಣಕ್ಕೆ ಮಂಗಳವಾರ ಕಾಂಕ್ರೀಟ್ ಕಾಮಗಾರಿ ಆರಂಭಿಸಲಾಯಿತು.

ಚಿಕ್ಕಜಾಲದ ಬಳಿ ವಿಮಾನ ನಿಲ್ದಾಣ ಮಾರ್ಗದ ಮೊದಲ ಪಿಲ್ಲರ್ ನಿರ್ಮಾಣ ಕಾರ್ಯ ಆರಂಭವಾಗಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದ್ದಾರೆ.



ಮಳೆ ವೇಳೆ ಜೋರು ಗಾಳಿ ಬೀಸಿದ್ದರಿಂದ ಎಚ್‌ಎಸ್‌ಆರ್ ಲೇಔಟ್‌ನ 3ನೇ ಹಂತದಲ್ಲಿ ಮರವೊಂದು ಕಾರುಗಳ ಮೇಲೆ ಉರುಳಿಬಿದ್ದಿತ್ತು – ಪ್ರಜಾವಾಣಿ ಚಿತ್ರ



ನಗರದಲ್ಲಿ ಮಂಗಳವಾರ ತಂತುರು ಮಳೆ ಸುರಿಯುತ್ತಿದ್ದ ವೇಳೆ ಮ್ಯೂಸಿಯಂ ರಸ್ತೆಯಲ್ಲಿ ವಿದ್ಯಾರ್ಥಿನಿಯರು ಕೊಡೆ ಹಿಡಿದು ಹೆಜ್ಜೆ ಹಾಕಿದರು

ದಿನವಿಡೀ ಮೋಡ ಕವಿದ ವಾತಾವರಣ: ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಇಡೀ ದಿನ ಮೋಡ ಕವಿದ ವಾತಾವರಣ ಕಂಡುಬಂತು. ಮಧ್ಯಾಹ್ನ ಮತ್ತು ಸಂಜೆ ವೇಳೆ ನಗರದ ಹಲವೆಡೆ ಬಿರುಸಿನ ಗಾಳಿ ಮಳೆಯಾಗಿದೆ.

ಹಲವು ದಿನಗಳಿಂದ ಬಿಡುವು ಕೊಡುತ್ತ ಜೋರು ಗಾಳಿ ಸಮೇತ ಮಳೆ ಸುರಿಯುತ್ತಿದೆ. ಮಂಗಳವಾರ ಬೆಳಿಗ್ಗೆ ಹಲವೆಡೆ ತುಂತುರು ಮಳೆ ಬಿತ್ತು. ಅನೇಕ ಕಡೆ, ಮಧ್ಯಾಹ್ನ ಮಳೆ ಆರ್ಭಟ ಜೋರಾಯಿತು.

ಕೊಡಿಗೇಹಳ್ಳಿ, ಹೆಬ್ಬಾಳ, ಜಿಕೆವಿಕೆ, ಯಲಹಂಕ, ವಿದ್ಯಾರಣ್ಯಪುರ, ಸಹಕಾರ ನಗರ, ಸಂಜಯನಗರ, ಆರ್.ಟಿ.ನಗರ, ವಸಂತನಗರ, ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬಿರುಸಿನ ಮಳೆ ಆಯಿತು.

ಜಯನಗರ, ಬನಶಂಕರಿ, ಹನುಮಂತನಗರ, ಗಿರಿನಗರ, ಚಾಮರಾಜಪೇಟೆ, ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಸುಂಕದಕಟ್ಟೆ, ಲಗ್ಗೆರೆ ಸುತ್ತಮುತ್ತ ಮಳೆ ಸುರಿಯಿತು.

ಮಳೆ ವೇಳೆ ಜೋರು ಗಾಳಿ ಬೀಸಿದ್ದರಿಂದ ಎಚ್‌ಎಸ್‌ಆರ್ 3ನೇ ಹಂತದಲ್ಲಿ ಕಾರುಗಳ ಮೇಲೆ ಮರವೊಂದು ಉರುಳಿಬಿದ್ದಿತ್ತು. ಎರಡು ಕಾರುಗಳು ಭಾಗಶಃ ಜಖಂಗೊಂಡಿವೆ.

'ನಗರದಲ್ಲಿ ಮಂಗಳವಾರ ಉತ್ತಮ ಮಳೆ ಆಗಿದೆ. ಕೆಲವೆಡೆ ಮರದ ಕೊಂಬೆಗಳು ಬಿದ್ದಿದ್ದವು. ಅವುಗಳನ್ನು ಸಿಬ್ಬಂದಿ ತೆರವು ಮಾಡಿದ್ದಾರೆ. ಉಳಿದಂತೆ ಯಾವುದೇ ಹಾನಿ ಬಗ್ಗೆ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನಿಯೋಜನೆಗೆ ಬಂದು 'ಸಂಘಟಿತ' ಅಕ್ರಮ

92 ಒಎಂಆರ್ ವ್ಯತ್ಯಾಸ: 'ಡಿಐಜಿ' ಆಪ್ತ ಸಹಾಯಕನೂ ಆರೋಪಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಪೊಲೀಸ್ ನೇಮಕಾತಿ ವಿಭಾಗದ ನೌಕರರೂ ಭಾಗಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ. ಬೇರೆ ವಿಭಾಗದಿಂದ 'ನಿಯೋಜನೆ' ಮೇರೆಗೆ ಬಂದಿದ್ದ ನೌಕರರು, ಸಂಘಟಿತರಾಗಿ ಅಕ್ರಮ ಎಸಗಿರುವುದಾಗಿ ಸಿಐಡಿ ಮೂಲಗಳು ಹೇಳಿವೆ.

ನೇಮಕಾತಿ ವಿಭಾಗದ ನೌಕರರು ಸೇರಿ ಆರು ಮಂದಿಯನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದು, ಎಲ್ಲರನ್ನೂ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

'ನೇಮಕಾತಿ ವಿಭಾಗದ 'ಡಿಐಜಿ' ಅವರ ಆಪ್ತ ಸಹಾಯಕ ಶ್ರೀನಿವಾಸ್ ಎಂಬಾತನನ್ನೂ ಬಂಧಿಸಲಾಗಿದೆ. ನಗರ ಸಶಸ್ತ್ರ ಮೀಸಲು (ಸಿಎಆರ್) ಪಡೆಯ ಹೆಡ್ ಕಾನ್‌ಸ್ಟೆಬಲ್ ಆಗಿದ್ದ ಶ್ರೀನಿವಾಸ್, ನಿಯೋಜನೆ ಮೇರೆಗೆ ಹಲವು ವರ್ಷಗಳ ಹಿಂದೆ ನೇಮಕಾತಿ ವಿಭಾಗಕ್ಕೆ ಬಂದಿದ್ದ. ಮಧ್ಯವರ್ತಿಗಳ ಮೂಲಕ ಅಭ್ಯರ್ಥಿಗಳನ್ನು ಸಂಪರ್ಕಿಸಿ, ಅಕ್ರಮಕ್ಕೆ ಸಹಕಾರ ನೀಡುತ್ತಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಡಿಐಜಿಗಳು ಬದಲಾದರೂ ಶ್ರೀನಿವಾಸ್ ಮಾತ್ರ ಅದೇ ಸ್ಥಾನದಲ್ಲಿ ಮುಂದುವರಿದಿದ್ದ. ವಿಭಾಗದ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆ ಉತ್ತಮ ಒಡನಾಟವನ್ನೂ ಇಟ್ಟುಕೊಂಡಿದ್ದ' ಎಂದೂ ತಿಳಿಸಿವೆ.

ನೌಕರರ ಸಂಘದ ಪ್ರತಿನಿಧಿ: 'ಬಂಧಿತ ಮಂಜುನಾಥ್ ಸಿಎಆರ್‌ನ ಸಬ್ ಇನ್‌ಸ್ಪೆಕ್ಟರ್. ಸರ್ಕಾರಿ ನೌಕರರ ಸಂಘದ ಪೊಲೀಸ್ ಪ್ರತಿನಿಧಿ ಆಗಿದ್ದ. ಈತ, ಅಭ್ಯರ್ಥಿಗಳನ್ನು ಹುಡುಕಿ ತರುತ್ತಿದ್ದ' ಎಂದು ಮೂಲಗಳು ಹೇಳಿವೆ.

92 ಒಎಂಆರ್ ಪ್ರತಿಗಳಲ್ಲಿ ವ್ಯತ್ಯಾಸ: 'ಒಎಂಆರ್ ಪರೀಕ್ಷೆ ನಡೆಸಿದ್ದ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ವರದಿ ನೀಡಿದ್ದಾರೆ. ಪಿಎಸ್‌ಐ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ 545 ಅಭ್ಯರ್ಥಿಗಳ ಪೈಕಿ, 92 ಅಭ್ಯರ್ಥಿಗಳ ಒಎಂಆರ್ ಪ್ರತಿಗಳಲ್ಲಿ ವ್ಯತ್ಯಾಸ ಕಂಡುಬಂದಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಹಾಲಿ' ಪ್ರಿಯಕರನ ಕೊಂದ 'ಮಾಜಿ' ಇನಿಯ

ಬೆಂಗಳೂರು: ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸಮರ್ಥ್ ಕೊಲೆ ಪ್ರಕರಣ ಸಂಬಂಧ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಕಿರಣ್, ಅರುಣ್ ಹಾಗೂ ರಾಕೇಶ್ ಬಂಧಿತರು.

'ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ ಕಿರಣ್, ಸಹೋದ್ಯೋಗಿ ಯುವತಿಯನ್ನು ಪ್ರೀತಿಸುತ್ತಿದ್ದ. ಸಲುಗೆ ಬೆಳೆಯುತ್ತಿದ್ದಂತೆ ವಿನಾಕಾರಣ ಸಂಶಯಪಟ್ಟು ಯುವತಿಗೆ ಕಿರುಕುಳ ನೀಡಲಾರಂಭಿಸಿದ್ದ. ಬೇಸತ್ತ ಯುವತಿ, ಆತನಿಂದ ದೂರವಾಗಿದ್ದಳು. ಸಮರ್ಥ್ ಅವರನ್ನು ಪ್ರೀತಿಸಲಾರಂಭಿಸಿದ್ದಳು' ಎಂದು ಪೊಲೀಸರು ಹೇಳಿದರು.

'ಸಮರ್ಥ್ ಮೇಲೆ ಸಿಟ್ಟಾಗಿದ್ದ ಕಿರಣ್, ಹಲವು ಬಾರಿ ಗಲಾಟೆ ಮಾಡಿ ಎಚ್ಚರಿಕೆ ನೀಡಿದ್ದ. ಅದಕ್ಕೆಲ್ಲ ಸಮರ್ಥ್ ತಲೆಕೆಡಿಸಿಕೊಂಡಿರಲಿಲ್ಲ. ಮೇ 7ರಂದು ಸಮರ್ಥ್ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದ ಕಿರಣ್, ತಲೆಯನ್ನು ಗೋಡೆಗೆ ಚಚ್ಚಿ ಕೊಲೆ ಮಾಡಿದ್ದ. ಇದಕ್ಕೆ ಸಹಚರರು ಸಹಕಾರ ನೀಡಿದ್ದರು' ಎಂದೂ ತಿಳಿಸಿದರು.

'ಕಾಫಿ ರನ್‌ವೇ' ಮೇಲೆ ದಾಳಿ: ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಬಳಿ ಕನ್ನಮಂಗಲ ಗೇಟ್ ಸಮೀಪದಲ್ಲಿ 'ಕೆಫೆ ರನ್‌ವೇ' ಮಳಿಗೆ ಮೇಲೆ ಪೊಲೀಸರು ದಾಳಿ ಮಾಡಿದ್ದು, ಅಕ್ರಮವಾಗಿ ಹುಕ್ಕಾ ಮಾರುತ್ತಿದ್ದ ಆರೋಪದಡಿ ವ್ಯವಸ್ಥಾಪಕ ಸೇರಿ ಮೂವರನ್ನು ಬಂಧಿಸಿದ್ದಾರೆ.

'ವ್ಯವಸ್ಥಾಪಕ ಅತೀಕ್ ವುರ್ ರೆಹಮಾನ್ (25), ಕೆಲಸಗಾರರಾದ ಅಯೂಬ್ ಖಾನ್ (26), ಗಣೇಶ್ (19) ಬಂಧಿತರು. ಮಳಿಗೆಯಲ್ಲಿ ಹುಕ್ಕಾ ಚಿಲುಮೆಗಳು, ಸಿಗರೇಟ್ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ತಿಳಿಸಿದರು.

'ವಾಸೀಂ ಅಹಮ್ಮದ್, ಮಹಮ್ಮದ್ ಸಲ್ಮಾನ್ ಎಂಬುವರು 'ಕೆಫೆ ರನ್‌ವೇ' ನಡೆಸುತ್ತಿದ್ದರು. ಸದ್ಯ ಅವರಿಬ್ಬರು ತಲೆಮರೆಸಿಕೊಂಡಿದ್ದಾರೆ. ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಯುವಕರಿಗೆ ಹುಕ್ಕಾ ಮಾರಲಾಗುತ್ತಿತ್ತು' ಎಂದೂ ಹೇಳಿದರು.

ಬಾರ್ ಆ್ಯಂಡ್ ರೆಸ್ಟೋರೆಂಟ್ ಸ್ಥಳಾಂತರ ಆದೇಶ ರದ್ದು

ಬೆಂಗಳೂರು: 'ಕಮ್ಮನಹಳ್ಳಿಯಲ್ಲಿರುವ ಬಾರ್ ಆ್ಯಂಡ್ ರೆಸ್ಟೋರೆಂಟ್ ಅನ್ನು ಕೋರಮಂಗಲದ ಕೆ.ಸಿ.ಮಲ್ಲಪ್ಪ ರೆಡ್ಡಿ ಬಡಾವಣೆಗೆ ಸ್ಥಳಾಂತರಿಸಲು ಬೆಂಗಳೂರು ಅಬಕಾರಿ ಉಪ ಆಯುಕ್ತರು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸುವ ಮೂಲಕ ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಭಾಗಶಃ ಮಾನ್ಯ ಮಾಡಿದೆ.

'ಕರ್ನಾಟಕ ರಕ್ಷಣಾ ವೇದಿಕೆ' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು, ನಾಯಮೂರ್ತಿ ಬಿ.ಎಂ.ಶ್ಯಾಮ್‌ಪ್ರಸಾದ್ ಮತ್ತು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಬೇಗೂರು ಹೋಬಳಿಯ ಕಮ್ಮನಹಳ್ಳಿಯಲ್ಲಿ ಜಿ.ಪ್ರಸಾದ್ ರೆಡ್ಡಿಗೆ ಎಂಬುವವರಿಗೆ ಸೇರಿದ ಸಿಎಲ್-9 ಪರವಾನಗಿ ಹೊಂದಿದ ಬಾರ್ ಆ್ಯಂಡ್ ರೆಸ್ಟೋರೆಂಟ್ ಅನ್ನು ಕೋರಮಂಗಲದ ಕೆ.ಸಿ. ಮಲ್ಲಪ್ಪ ರೆಡ್ಡಿ ಬಡಾವಣೆಗೆ ಸ್ಥಳಾಂತರಿಸಲು ಅಬಕಾರಿ ಉಪ ಆಯುಕ್ತರು 2022ರ ಏಪ್ರಿಲ್ 4ರಂದು ಹೊರಡಿಸಿರುವ ಆದೇಶ ಕರ್ನಾಟಕ ಅಬಕಾರಿ ಅಧಿನಿಯಮ 5ರ ಉಲ್ಲಂಘನೆಯಾಗಿದೆ ಎಂಬುದು ಮನವರಿಕೆಯಾಗಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು.

'ಸ್ಥಳಾಂತರಗೊಳ್ಳಲಿರುವ ಜಾಗದ ವ್ಯಾಪ್ತಿಯ 50 ಮೀಟರ್ ಒಳಗೆ ಎರಡು ಚರ್ಚ್ ಹಾಗೂ ಮುತ್ತು ಮಾರಿಯಮ್ಮನ ದೇವಸ್ಥಾನಗಳಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ರಾಜೇಂದ್ರ ನಗರವೂ ಇದೆ. ಇದರಿಂದ ಜನರ ಧಾರ್ಮಿಕ ಭಾವನೆ ಹಾಗೂ ಶಾಂತಿ-ಸೌಹಾರ್ದಕ್ಕೆ ಭಂಗ ಉಂಟಾಗಲಿದೆ' ಎಂದು ಅರ್ಜಿದಾರರು ದೂರಿದ್ದರು. ಅರ್ಜಿದಾರರ ಪರ ವಕೀಲ ಪ್ರಿನ್ಸ್ ಐಸಾಕ್ ವಾದ ಮಂಡಿಸಿದರು.

ಕರ್ನಾಟಕ ಅಬಕಾರಿ (ಪರವಾನಗಿ ಸಾಮಾನ್ಯ ಷರತ್ತುಗಳು) ಅಧಿನಿಯಮ-1967ರ ನಿಯಮ 5ರ ಪ್ರಕಾರ, ಧಾರ್ಮಿಕ ಕೇಂದ್ರ, ಶೈಕ್ಷಣಿಕ ಸಂಸ್ಥೆ, ಆಸ್ಪತ್ರೆ ಮತ್ತು ವಸತಿ ಪ್ರದೇಶದಿಂದ 100 ಮೀಟರ್ ಒಳಗೆ ಮದ್ಯದಂಗಡಿ ತೆರೆಯಲು ಪರವಾನಗಿ ನೀಡುವಂತಿಲ್ಲ.

‘ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಶಿಕ್ಷಕರ ನೇಮಕಾತಿ ಪರೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 15,000 ಪದವೀಧರ ಶಿಕ್ಷಕರ ನೇಮಕಾತಿಗೆ ಮೇ 21 ಮತ್ತು 22 ರಂದು ಸಂಪೂರ್ಣ ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಾದ್ಯಂತ 435 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. 1.06 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಯಾವುದೇ ಹಂತದಲ್ಲೂ ಪರೀಕ್ಷಾ ಅಕ್ರಮಗಳಿಗೆ ಅವಕಾಶವಾಗದಂತೆ ಬಿಗಿ ಭದ್ರತೆಯ ವ್ಯವಸ್ಥೆ ಮಾಡಲಾಗಿದೆ’ ಎಂದರು.

ಎಲ್ಲ ಪರೀಕ್ಷಾ ಕೊಠಡಿಗಳಿಗೂ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು. ನಿರಂತರವಾಗಿ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ವೀಕ್ಷಣೆ ಮಾಡಲು ಅಧಿಕಾರಿಗಳ ತಂಡಗಳನ್ನು ನೇಮಿಸಲಾಗುವುದು. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್, ಕೈಗಡಿಯಾರ ತರುವಂತಿಲ್ಲ. ಯಾವುದೇ ರೀತಿಯ ಎಲೆಕ್ಟ್ರಾನಿಕ್ ಸಾಧನಗಳನ್ನು ತರಲು ಅವಕಾಶವಿಲ್ಲ. ಸೂಕ್ಷ್ಮ ಪರೀಕ್ಷಾ ಕೇಂದ್ರಗಳಲ್ಲಿ ಲೋಹಶೋಧಕ ಅಳವಡಿಸಲಾಗುವುದು ಎಂದು ತಿಳಿಸಿದರು.

ಮೂರು ಹಂತದ ತಪಾಸಣೆ: ಪರೀಕ್ಷಾ ಕೇಂದ್ರಗಳಲ್ಲಿ ಮೂರು ಹಂತದ ತಪಾಸಣೆ ನಡೆಸಲಾಗುವುದು. ಪರೀಕ್ಷಾ ಕೇಂದ್ರ ಪ್ರವೇಶಿಸುವ ಮುನ್ನ ಪೊಲೀಸರು ತಪಾಸಣೆ ಮಾಡುತ್ತಾರೆ. ಪರೀಕ್ಷಾ ಕೊಠಡಿ ಪ್ರವೇಶಿಸುವಾಗ ಶಿಕ್ಷಣ ಇಲಾಖೆ ಅಧಿಕಾರಿಗಳ ತಂಡ ತಪಾಸಣೆ ನಡೆಸಲಿದೆ. ಪರೀಕ್ಷೆ ಆರಂಭಕ್ಕೂ ಮೊದಲು ಮೂರನೇ ಹಂತದ ತಪಾಸಣೆ ನಡೆಸಲಾಗುವುದು ಎಂದು ನಾಗೇಶ್ ವಿವರಿಸಿದರು.

ಈ ಹಿಂದೆ ಎಲ್ಲ ನೇಮಕಾತಿ ಪರೀಕ್ಷೆಗಳಲ್ಲೂ ಅಭ್ಯರ್ಥಿಗಳು ಅರ್ಧ ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರ ಪ್ರವೇಶಿಸಬೇಕಿತ್ತು. ಈ ಬಾರಿ ಹೆಚ್ಚಿನ ತಪಾಸಣೆ ಇರುವುದರಿಂದ ಒಂದು ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಬರುವುದು ಕಡ್ಡಾಯ ಎಂದರು.

ಪೊಲೀಸ್ ಅಧಿಕಾರಿಗಳ ಜತೆ ಸಭೆ ನಡೆಸಿ ಭದ್ರತಾ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ತಂಡ ಎಲ್ಲ ಜಿಲ್ಲೆಗಳಲ್ಲೂ ಪರೀಕ್ಷಾ ಮೇಲುಸ್ತುವಾರಿ ವಹಿಸಲಿದೆ. ಪ್ರಶ್ನೆ ಪತ್ರಿಕೆ ರವಾನೆ, ವಿತರಣೆ ಸೇರಿದಂತೆ ಪರೀಕ್ಷೆಯ ಎಲ್ಲ ಪ್ರಕ್ರಿಯೆಗಳಿಗೂ ಮಾರ್ಗಸೂಚಿ ಹೊರಡಿಸಲಾಗಿದೆ ಎಂದು ಹೇಳಿದರು.

ಖಾಸಗಿ ಮತ್ತು ಅನುದಾನಿತ ಶಾಲಾ ಕಟ್ಟಡಗಳನ್ನೂ ಪರೀಕ್ಷಾ ಕೇಂದ್ರವಾಗಿ ಬಳಸಲಾಗುತ್ತಿದೆ. ಮೂರು ದಿನ ಮುಂಚಿತವಾಗಿ ಅಂತಹ ಶಾಲಾ ಕಟ್ಟಡಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು. ಆ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿಯನ್ನು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸುವುದಿಲ್ಲ. ತಹಶೀಲ್ದಾರ್ ಮತ್ತು ಅದಕ್ಕಿಂತ ಹಿರಿಯ ಅಧಿಕಾರಿಗಳನ್ನೇ ಪರೀಕ್ಷಾ ಕೇಂದ್ರಗಳಿಗೆ ನಿಯೋಜನೆ ಮಾಡಲಾಗುವುದು ಎಂದು ತಿಳಿಸಿದರು.

ನಿಗದಿಯಂತೆ ಮೇ 21 ಮತ್ತು 22ರಂದು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಯಾವುದೇ ಬದಲಾವಣೆ ಇರುವುದಿಲ್ಲ. ಈ ವಿಚಾರದಲ್ಲಿ ವದಂತಿಗಳಿಗೆ ಕಿವಿಗೊಡಬಾರದು ಎಂದರು.

‘ಕಲಿಕಾ ಚೇತರಿಕೆಯೊಂದಿಗೆ ಶಾಲೆಗಳ ಆರಂಭ’

ಬೆಂಗಳೂರು: ಮೇ 16 ರಿಂದ ಕಲಿಕಾ ಚೇತರಿಕೆ ಕಾರ್ಯಕ್ರಮದೊಂದಿಗೆ ರಾಜ್ಯದಾದ್ಯಂತ ಶಾಲೆಗಳು ಪುನರಾರಂಭ ಆಗಲಿವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಕಾರಣದಿಂದ ಎರಡು ವರ್ಷಗಳಿಂದ ಶಾಲೆಗಳಲ್ಲಿ ತರಗತಿಗಳು ಸರಿಯಾಗಿ ನಡೆದಿಲ್ಲ. ಕಲಿಕೆಯಲ್ಲಿನ ಹಿನ್ನಡೆಯನ್ನು ನಿವಾರಿಸಲು ಕಲಿಕಾ ಚೇತರಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಯೋಜನೆಯನ್ನು ಇತರ ರಾಜ್ಯಗಳೂ ಅನುಸರಿಸುತ್ತಿವೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯು ಸರ್ಕಾರಿ ಶಾಲೆಗಳಿಗೆ ಸೀಮಿತವಾಗಿ ಕಲಿಕಾ ಚೇತರಿಕೆ ಕಾರ್ಯಕ್ರಮ ನಡೆಸುತ್ತಿದೆ. ಖಾಸಗಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳೂ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬಯಸಿದರೆ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಮೂರನೇ ವಾರ ಫಲಿತಾಂಶ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನ ಅಂತಿಮ ಹಂತದಲ್ಲಿದೆ. ಮೇ ಮೂರನೇ ವಾರದಲ್ಲಿ ಫಲಿತಾಂಶ ಪ್ರಕಟಿಸಲಾಗುವುದು ಎಂದರು.

ಚಿಕ್ಕೋಡಿಯಲ್ಲಿ ಹೆಚ್ಚು ಕೇಂದ್ರ

‘ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ ಅತ್ಯಧಿಕ 11,199 ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಾರೆ. ಅಲ್ಲಿ 37 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗುವುದು’ ಎಂದು ಸಚಿವ ಬಿ.ಸಿ. ನಾಗೇಶ್ ತಿಳಿಸಿದರು. ಸಮಾಜ ವಿಜ್ಞಾನ ವಿಷಯದಲ್ಲಿ ಒಂದು ಹುದ್ದೆಗೆ 50ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದಾರೆ. ಉಳಿದ ವಿಷಯಗಳಲ್ಲಿ ಎರಡರಿಂದ 12ರಷ್ಟು ಅಭ್ಯರ್ಥಿಗಳಿದ್ದಾರೆ ಎಂದು ವಿವರಿಸಿದರು.

‘ಬಿಜೆಪಿ ಸರ್ಕಾರದಿಂದ ಬ್ರಾಹ್ಮಣರಿಗೆ ಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಾಹ್ಮಣರೆಲ್ಲರೂ ಆರ್ಥಿಕವಾಗಿ ಬಲಿಷ್ಠರು ಎಂಬ ತಪ್ಪು ಕಲ್ಪನೆಯನ್ನು ಬಿಜೆಪಿ ಸರ್ಕಾರ ಹೋಗಲಾಡಿಸಿದೆ. ನಮ್ಮ ಸರ್ಕಾರದಿಂದ ಬ್ರಾಹ್ಮಣರಿಗೆ ಬಲ ಬಂದಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ‘ಆಚಾರ್ಯತ್ರಯರ ಜಯಂತ್ಯುತ್ಸವ’, ‘ವೇದಮಾತಾ ಗಾಯತ್ರೀ ಪ್ರಶಸ್ತಿ ಪ್ರದಾನ’ ಹಾಗೂ ಮಂಡಳಿಯ ವಿವಿಧ ಯೋಜನೆಗಳಿಗೆ ಚಾಲನೆ ನೀಡುವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಒಂದೂರಿನಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದ ಎಂಬ ಕತೆ ಎಲ್ಲ ಕಾಲದಲ್ಲೂ ಇತ್ತು. ಆದರೆ, ಹಿಂದೆ ಆಡಳಿತ ನಡೆಸಿದವರಿಗೆ ಬ್ರಾಹ್ಮಣರಲ್ಲಿನ ಬಡವರು ಕಾಣಿಸಿರಲಿಲ್ಲ. ಬಿಜೆಪಿ ಸರ್ಕಾರ ಬ್ರಾಹ್ಮಣರಲ್ಲಿನ ಬಡವರ ಅಭಿವೃದ್ಧಿಗಾಗಿಯೇ ಹಲವು ಕಾರ್ಯಕ್ರಮ ಜಾರಿಗೊಳಿಸಿದೆ’ ಎಂದು ತಿಳಿಸಿದರು.

ಮನುಕುಲಕ್ಕೆ ಸತ್ಯದರ್ಶನ ಮಾಡಿಸುವಲ್ಲಿ ಆಚಾರ್ಯತ್ರಯರಾದ ಶಂಕರಾಚಾರ್ಯ, ಮಧ್ವಾಚಾರ್ಯ ಮತ್ತು ರಾಮಾನುಜಾಚಾರ್ಯರು ಅಪಾರ ಕೊಡುಗೆ ನೀಡಿದ್ದಾರೆ. ಅವರ ಸಂದೇಶಗಳು ಒಳ್ಳೆಯ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿವೆ ಎಂದು ಹೇಳಿದರು.

ಯೋಜನೆಗಳಿಗೆ ಚಾಲನೆ: ಬ್ರಾಹ್ಮಣ ಸಮುದಾಯದ ಮಹಿಳೆಯರ ಸ್ವ ಸಹಾಯ ಸಂಘಗಳಿಗೆ ತಲಾ ₹ 1 ಲಕ್ಷ ಪ್ರೋತ್ಸಾಹಧನ ನೀಡುವುದು ಸೇರಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಾಯಿತು. ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ₹ 150 ಕೋಟಿ ಅನುದಾನ ಒದಗಿಸಲು ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಮತ್ತು ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ ಮನವಿ ಸಲ್ಲಿಸಿದರು.

ಪ್ರಶಸ್ತಿ ಪ್ರದಾನ: ಗಾಯಕಿ ನಿರ್ಮಲಾ ಪ್ರಸನ್ನ, ವಕೀಲರಾದ ವರಲಕ್ಷ್ಮಿ ದೇಶಪಾಂಡೆ, ಹೇಮಾ, ಸಾಹಿತಿ ಡಾ.ಜಯಲಕ್ಷ್ಮಿ ಮಂಗಳಮೂರ್ತಿ, ಪ್ರಸನ್ನಲಕ್ಷ್ಮಿ, ಸಮಾಜ ಸೇವಕಿ ಭಾಗ್ಯಮ್ಮ, ಶುಭ ಮೂರ್ತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬ್ರಾಹ್ಮಣ ಸಮುದಾಯದ ಮಹಿಳೆಯರಿಗೆ ‘ವೇದಮಾತಾ ಗಾಯತ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ನವದೆಹಲಿಯಲ್ಲಿ ಮಂಗಳವಾರ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಉಕ್ಕಲಿಯ ಯೋಧ ಹವಾಲ್ದಾರ್ ಕಾಶೀರಾಯ ಬಮ್ಮನಳ್ಳಿ ಅವರಿಗೆ ಮರಣೋತ್ತರವಾಗಿ ಪ್ರದಾನ ಮಾಡಿದ ‘ಶೌರ್ಯಚಕ್ರ’ ಪ್ರಶಸ್ತಿಯನ್ನು ಯೋಧನ ಪತ್ನಿ ಸಂಗೀತಾ ಕಾಶೀರಾಯ ಬಮ್ಮನಳ್ಳಿ ಮತ್ತು ತಾಯಿ ಶಾಂತಾಬಾಯಿ ಶಂಕ್ರೆಪ್ಪ ಬಮ್ಮನಳ್ಳಿ ಸ್ವೀಕರಿಸಿದರು

‘ಕಾವೇರಿ ಕೂಗು’: ಗಿಡ ನೆಡುವ ಕಾರ್ಯಾಗಾರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ಕೂಗು’ ಅಭಿಯಾನದಡಿ ಮರ ಮಿತ್ರರು ಹಮ್ಮಿಕೊಂಡಿರುವ ಗಿಡ ನೆಡುವ ಕಾರ್ಯಾಗಾರಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಕೈಜೋಡಿಸಿದ್ದಾರೆ.

ಅರಣ್ಯ ಪಡೆಯ ಮುಖ್ಯಸ್ಥ ಆರ್.ಕೆ.ಸಿಂಗ್ ಕಾರ್ಯಾಗಾರಕ್ಕೆ ಚಾಲನೆ ನೀಡಿದ್ದಾರೆ.

ಸಸ್ಯಗಳನ್ನು ನೆಡುವ ಪೂರ್ವ ಮಾಡಬೇಕಾದ ತಯಾರಿ, ಸೂಕ್ತ ಸಸ್ಯಗಳ ಆಯ್ಕೆ ಮತ್ತು ಅವುಗಳನ್ನು ಬೆಳೆಸುವುದು, ಕೃಷಿ ವಿಧಾನ, ನಿರ್ವಹಣೆ ತಂತ್ರಗಳು, ಈಶ ಪ್ರತಿಷ್ಠಾನದಿಂದ ಬೆಂಬಲಿತವಾದ ಕೃಷಿ ಅರಣ್ಯದ ಅನುಷ್ಠಾನ, ನಿಯಮಗಳ ಹೊಂದಾಣಿಕೆ ಕುರಿತು ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಕಾರ್ಯಾಗಾರಗಳು ನಡೆಯುತ್ತಿವೆ ಎಂದು ಪ್ರಕಟಣೆ ತಿಳಿಸಿದೆ.

‘ಬೋಧಿ ಸಪ್ತಾಹ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಶಾಖ ಬುದ್ಧ ಪೂರ್ಣಿಮೆ ಹಾಗೂ ಬುದ್ಧ ಜಯಂತಿ ಅಂಗವಾಗಿ ನಗರದ ಮಹಾಬೋಧಿ ಸೊಸೈಟಿ ಹಮ್ಮಿಕೊಂಡಿರುವ ‘ಬೋಧಿ ಸಪ್ತಾಹ’ಕ್ಕೆ ಚಾಲನೆ ನೀಡಲಾಯಿತು.

ಸಪ್ತಾಹದ ಮೊದಲ ದಿನವಾದ ಮಂಗಳವಾರ ‘ಸಮ್ಮಾಸಂಬುದ್ಧರ ಜೀವಂತ ಪರಂಪರೆ–ಅಂತರಂಗದ ಶಾಂತಿಯಿಂದ ವಿಶ್ವಶಾಂತಿ’ ಕುರಿತು ಅಂತರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

ಮುಖ್ಯ ಭಾಷಣಕಾರರಾಗಿದ್ದ ಶ್ರೀಲಂಕಾದ ಮಗ್ಗವಿಹಾರಿ ಥೇರೊ, ‘ನಮ್ಮ ಧೋರಣೆ ಬದಲಾದರೆ ಸಾಮರಸ್ಯದ ಆಶಯ ಸಾಕಾರವಾಗುತ್ತದೆ. ಏಕತೆ ಸಾಧಿಸಲು ಆಂತರಿಕ ಶಾಂತಿ ಬಹಳ ಮುಖ್ಯ’ ಎಂದರು.

ಬಸವನಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ನಿತ್ಯಸ್ಥಾನಂದಜೀ ಮಹಾರಾಜ್, ‘ಭಗವಾನ್ ಬುದ್ಧ, ಮಾನವೀಯ ಹಾದಿಯ ಮೂಲಕ ಆಧ್ಯಾತ್ಮಿಕ ಗುರಿ ಸಾಧಿಸಿದ್ದರು. ಎಲ್ಲರಿಗೂ ಒಳಿತನ್ನೇ ಬಯಸಿದರೆ ಸಂತೋಷದಿಂದ ಜೀವಿಸಬಹುದು. ಇತರರ ತಪ್ಪುಗಳನ್ನು ಹುಡುಕಲು ಹೋಗಬಾರದು. ಏಕೆಂದರೆ ಅದೇ ದೋಷಗಳು ನಮ್ಮೊಳಗೂ ಇರುತ್ತವೆ’ ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ರಾಜ್ಯದ ಆರು ಬುದ್ಧ ವಿಹಾರಗಳಿಗೆ ಬುದ್ಧನ ಪ್ರತಿಮೆಗಳನ್ನು ಕೊಡುಗೆಯಾಗಿ ನೀಡಲಾಯಿತು.



ವಿಚಾರ ಸಂಕಿರಣ ಉದ್ಘಾಟಿಸಿದ ಸ್ವಾಮಿ ನಿತ್ಯಸ್ಥಾನಂದಜೀ ಮಹಾರಾಜ್ (ಎಡದಿಂದ ಎರಡನೇಯವರು) ಅವರಿಗೆ ಮಹಾಬೋಧಿ ಸೊಸೈಟಿ ಅಧ್ಯಕ್ಷ ಕಸ್ಸಪ ಮಹಾತೇರ ಸ್ಮರಣಿಕೆ ನೀಡಿ ಗೌರವಿಸಿದರು. ಮಹಾಬೋಧಿ ಸೊಸೈಟಿಯ ಪ್ರಧಾನ ಕಾರ್ಯದರ್ಶಿ ಆನಂದ ಭಂತೇಜಿ ಮತ್ತು ಮಹಾಬೋಧಿ ಅಧ್ಯಯನ ಕೇಂದ್ರದ ನಿರ್ದೇಶಕ ಬುದ್ಧದತ್ತ ಭಂತೇಜಿ ಇದ್ದರು –ಪ್ರಜಾವಾಣಿ ಚಿತ್ರ

ನೆಲಮಂಗಲದಿಂದಲೇ ಚುನಾವಣಾ ಪ್ರಚಾರ: ಎಚ್‌ಡಿಕೆ ಘೋಷಣೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಇದೇ 13 ರಿಂದ ನೆಲಮಂಗಲ ಮೈದಾನದಿಂದಲೇ 2023 ರ ವಿಧಾನಸಭಾ ಚುನಾವಣೆಗೆ ಪ್ರಚಾರ ಆರಂಭಿಸುವುದಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜನತಾ ಜಲಧಾರೆ’ ಸಮಾರೋಪ ಸಮಾರಂಭದ ಮೂಲಕ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಗುವುದು ಎಂದರು.

ಈ ಕಾರ್ಯಕ್ರಮವನ್ನು 65 ಎಕರೆ ಮೈದಾನದಲ್ಲಿ ಏರ್ಪಡಿಸಲಿದ್ದು, 4 ರಿಂದ 5 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ. ಎಲ್ಲರಿಗೂ ಇಡೀ ದಿನ ದಾಸೋಹ ವ್ಯವಸ್ಥೆ ಮಾಡಲಾಗಿದ್ದು, 4 ಸಾವಿರ ಅಡಿಯ ವೇದಿಕೆ ಸಿದ್ಧವಾಗುತ್ತಿದೆ ಎಂದು ಹೇಳಿದರು.

ಎಎಪಿ ವತಿಯಿಂದ ಪ್ರತಿಭಟನೆ • ತನಿಖೆಗೆ ಆಗ್ರಹ

‘ವಾಜಪೇಯಿ ಕ್ರೀಡಾಂಗಣದಲ್ಲಿ ಕಳಪೆ ಕಾಮಗಾರಿ’

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ‘ಎಚ್‌ಎಸ್‌ಆರ್ ಲೇಔಟ್‌ನ ವಾಜಪೇಯಿ ಕ್ರೀಡಾಂಗಣದ ಮೇಲ್ಚಾವಣಿ ಕುಸಿದು ಬೀಳಲು ರಾಜ್ಯ ಬಿಜೆಪಿ ಸರ್ಕಾರದ ಶೇ 40ರಷ್ಟು ಕಮಿಷನ್ ದಂಧೆಯೇ ಕಾರಣ’ ಎಂದು ಆರೋಪಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಎಚ್‌ಎಸ್‌ಆರ್ ವಾರ್ಡ್ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಎಎಪಿ ಮುಖಂಡ ಮೋಹನ್ ದಾಸರಿ, ‘ಕಳಪೆ ಕಾಮಗಾರಿ ಪರಿಶೀಲಿಸಲು ಬಂದ ಎಎಪಿ ಕಾರ್ಯಕರ್ತರನ್ನು ಕ್ರೀಡಾಂಗಣದ ಒಳಬರದಂತೆ ತಡೆದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಗೂಂಡಾಗಳನ್ನು ಛೂಬಿಟ್ಟು ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿದರು.

‘ವಾಜಪೇಯಿ ಕ್ರೀಡಾಂಗಣಕ್ಕೆ ₹4 ಕೋಟಿ ವೆಚ್ಚವಾಗಿದೆ. ತನಿಖೆ ನಡೆಸಿ ಅಕ್ರಮದಲ್ಲಿ ಭಾಗಿಯಾದ ಗುತ್ತಿಗೆದಾರರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಎಎಪಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಸೀತಾರಾಮ್ ಗುಂಡಪ್ಪ, ‘ಪ್ರಧಾನಿ ಮೋದಿ ರಾಜ್ಯದ ಭ್ರಷ್ಟಾಚಾರ ಬಗ್ಗೆ ಚಕಾರ ಎತ್ತುತ್ತಿಲ್ಲ. ಕಮೀಷನ್‌ನಲ್ಲಿ ಕೇಂದ್ರಕ್ಕೂ ಪಾಲಿದೆ’ ಎಂದು ಆರೋಪಿಸಿದರು.

ಸ್ಥಳೀಯ ಆಪ್ ಮುಖಂಡ ಗಿರೀಶ್ ‘ಬೈಲಾವನ್ನು ಉಲ್ಲಂಘಿಸಿ, ಸ್ಥಳೀಯ ನಿವಾಸಿಗಳ ವಿರೋಧದ ನಡುವೆಯೂ ಕ್ರೀಡಾಂಗಣ ನಿರ್ಮಿಸಲಾಗಿದೆ. ಪಾದಚಾರಿ ಮಾರ್ಗ, ಒಳಚರಂಡಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆಯೂ ತನಿಖೆ ನಡೆಯಬೇಕು’ ಎಂದು ಹೇಳಿದರು.

ಬಿಬಿಎಂಪಿ ಜಂಟಿ ಆಯುಕ್ತ ಕೃಷ್ಣಮೂರ್ತಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು.

ಎಎಪಿ ಮುಖಂಡರಾದ ಜಗದೀಶ್ ಚಂದ್ರ, ಯೋಗಿತಾ ರೆಡ್ಡಿ, ಪಲ್ಲವಿ ಚಿದಂಬರಂ, ನಾಗಭೂಷಣರೆಡ್ಡಿ, ಮಂಜುನಾಥಸ್ವಾಮಿ, ಕಲ್ಯೆ, ಫಿರೋಜ್ ಖಾನ್, ವೀಣಾ ರಾವ್, ಸತೀಶ್‌ಗೌಡ ಭಾಗವಹಿಸಿದ್ದರು.



ಎಚ್‌ಎಸ್‌ಆರ್ ವಾರ್ಡ್‌ನಲ್ಲಿರುವ ಬಿಬಿಎಂಪಿ ಕಚೇರಿ ಎದುರು ಎಎಪಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು

ಬುಧವಾರದ ಉಷ್ಣಾಂಶ
32° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಅಲ್ಲಲ್ಲಿ ಮಳೆ ಆಗಲಿದೆ.

ಹವಾಮಾನ

ಗುರುವಾರ	ಶುಕ್ರವಾರ	ಶನಿವಾರ
33° 21°	33° 20°	33° 20°

ಸೂರ್ಯೋದಯ:5:56 ಸೂರ್ಯಾಸ್ತ:6:36 ಚಂದ್ರೋದಯ: ಮ.1:29 ಚಂದ್ರಾಸ್ತ: ರಾ.1:35 ಮಂಗಳವಾರದ ಹವಾಮಾನ : ಗರಿಷ್ಠ 32° ಕನಿಷ್ಠ 21°

ಶಿವಗಣಾರಾಧನೆ ಕಾರ್ಯಕ್ರಮ; ಶಿವಮೂರ್ತಿ ಮುರುಘಾ ಶರಣರ ಅಭಿಮತ

‘ಸವ್ಯಸಾಚಿಯಾಗಿದ್ದ ಶಾಂತವೀರ ಸ್ವಾಮೀಜಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೊಳದಮಠ ಮಹಾ ಸಂಸ್ಥಾನದ ಶಾಂತವೀರ ಸ್ವಾಮೀಜಿಯವರು ಸವ್ಯಸಾಚಿಯಾಗಿದ್ದರು. ವಿದ್ವತ್ ಹಾಗೂ ಪಾಂಡಿತ್ಯದ ಮೂಲಕ ಸಮಾಜ ತಿದ್ದುವ ಕಾರ್ಯ ವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ ಸ್ವಾಮೀಜಿಗಳಲ್ಲಿ ಅವರು ಅಗ್ರಗಣ್ಯರು’ ಎಂದು ಚಿತ್ರದುರ್ಗದ ಮುರುಘ ರಾಜೇಂದ್ರ ಬೃಹನ್ಮಠದ ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಕೊಳದಮಠದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಶಾಂತವೀರ ಸ್ವಾಮಿ ಯವರ ಶಿವಗಣಾರಾಧನೆ ಹಾಗೂ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ‘ಶಾಂತವೀರರು ಕೆಲ ಜವಾಬ್ದಾರಿಗಳನ್ನು ಬಿಟ್ಟು ಹೋಗಿದ್ದಾರೆ. ಎಲ್ಲಾ ಸ್ವಾಮೀಜಿಗಳ ಜೊತೆ ಸಮಾಲೋಚಿಸಿ ಮಠದ ಉತ್ತ-ರಾಧಿಕಾರಿಯನ್ನು ನೇಮಿಸುವ ಕೆಲಸ ಮಾಡಲಾಗುತ್ತದೆ’ ಎಂದರು.



ಕಾರ್ಯಕ್ರಮದಲ್ಲಿ ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು. (ಎಡದಿಂದ) ಮಲ್ಲಿಕಾರ್ಜುನ ದೇವರು, ತಮಿಳುನಾಡಿನ ಸಿದ್ಧಲಿಂಗಸ್ವಾಮಿ, ಚಿದ್ಘನ ಸ್ವಾಮಿ, ಶಿವರುದ್ರ ಸ್ವಾಮಿ ಹಾಗೂ ಮುಮ್ಮಡಿ ಶಿವರುದ್ರ ಸ್ವಾಮಿ ಇದ್ದರು
– ಪ್ರಜಾವಾಣಿ ಚಿತ್ರ

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ‘ನೊಂದವರ ಧ್ವನಿಯಾಗಿದ್ದ ಶ್ರೀಗಳು ನಿರ್ಭಿಡೆಯ ವ್ಯಕ್ತಿತ್ವ ಹೊಂದಿದ್ದರು’ ಎಂದು ಹೇಳಿದರು.

ಗಂಜಾಂ ಮಠದ ಚಿದ್ಘನ ಸ್ವಾಮೀಜಿ, ‘ಸ್ವಾಮೀಜಿಯವರು ಮಠಕ್ಕೆ ಯಾರೇ ಭೇಟಿ ನೀಡಿದರೂ ನಗುತ್ತಲೇ ಬರಮಾಡಿಕೊಳ್ಳುತ್ತಿದ್ದರು. ಎಷ್ಟೇ ಕಷ್ಟ ಎದುರಾದರೂ ಸಹಾಯಕ್ಕಾಗಿ ಯಾರ ಬಳಿಯೂ ಅಂಗಲಾಚಲಿಲ್ಲ’ ಎಂದು ಸ್ಮರಿಸಿದರು.

ಸರ್ಪಭೂಷಣ ಶಿವಯೋಗಿ ಮಠದ ಮಲ್ಲಿಕಾರ್ಜುನ ದೇವರು, ‘ಬೇಡ ಜಂಗಮರಿಗೂ ಮೀಸಲಾತಿ ದೊರೆಯಬೇಕು ಎಂಬ ಸಂಕಲ್ಪ ಸ್ವಾಮಿ-ಜಿಯವರದಾಗಿತ್ತು. ಅವರು ಜಾತ್ಯತೀತ ತತ್ವ ಪ್ರತಿಪಾದಿಸಿದ ಮಹಾನುಭಾವರು’ ಎಂದರು.

ನಿವೃತ್ತ ಐಪಿಎಸ್ ಅಧಿಕಾರಿ ಜ್ಯೋತಿಪ್ರಕಾಶ್ ಮಿರ್ಜಿ,‘ಕೊಳದ ಮಠದ ಸ್ವಾಮೀಜಿಯವರ ಆಶೀರ್ವಾದ ದಿಂದಲೇ ನನಗೆ ಕೆಲಸ ಸಿಕ್ಕಿತ್ತು. ಎಲ್ಲಿ, ಯಾರಿಗೇ ಕಷ್ಟ ಬಂದರೂ ಖುದ್ದಾಗಿ ಹಾಜರಾಗಿ ಸಹಾಯ ಮಾಡುತ್ತಿದ್ದರು’ ಎಂದು ಹೇಳಿದರು.

ಮರಳೇಗವಿ ಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ, ‘ಸ್ವಾಮೀಜಿ ಯವರು ಶಾಂತಿ ಹಾಗೂ ಕ್ರಾಂತಿಯ ಮೂರ್ತಿಯಂತಿದ್ದರು. ಕರುಣಾಮೂ-ರ್ತಿಯಾಗಿ ಎಲ್ಲರನ್ನೂ ಹರಸುತ್ತಿದ್ದರು’ ಎಂದು ತಿಳಿಸಿದರು.

ಬೇಲಿಮಠ ಮಹಾಸಂಸ್ಥಾನದ ಶಿವರುದ್ರ ಸ್ವಾಮೀಜಿ, ‘ಸಮಾಜ ಮುಖಿ ಚಿಂತನೆ ಮೈಗೂಡಿಸಿ ಕೊಂಡಿದ್ದ ಶಾಂತವೀರರ ಜನಪರ ಕಾರ್ಯ ಗಳಿಂದಾಗಿ ಕೊಳದಮಠವು ಜನಮಾ-ನಸದಲ್ಲಿ ಗಟ್ಟಿಯಾಗಿ ನೆಲೆಯೂರಿದೆ’ ಎಂದು ಹೇಳಿದರು.

‘ಕೆರೆ ನುಂಗಿದವರನ್ನು ಖಾಲಿ ಮಾಡಿಸುತ್ತೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕೆರೆಕೋಡಿಗಳನ್ನು ನುಂಗಿದವರನ್ನು ಖಾಲಿ ಮಾಡಿಸುತ್ತೇವೆ. ಆ ಕೆರೆಗಳಿಗೆ ಹಿಂದಿನ ವೈಭವವನ್ನು ಮರಳಿಸುತ್ತೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ನಗರದ ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ಕುರುಬರಹಳ್ಳಿ ವೃತ್ತದಲ್ಲಿ ಮಂಗಳವಾರ ‘ಜನತಾ ಜಲಧಾರೆ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಈ ಕ್ಷೇತ್ರದಲ್ಲಿ ಒಬ್ಬ ಮಹಾನುಭಾವ ಇದ್ದ. ಆತನಿಗೆ ಎರಡು ಬಾರಿ ಟಿಕೆಟ್ ಕೊಟ್ಟೆ. ನನಗೇ ಟೋಪಿ ಹಾಕಿ ಹೋದ’ ಎಂದು ಅಬಕಾರಿ ಸಚಿವ ಗೋಪಾಲಯ್ಯ ಅವರ ಹೆಸರು ಹೇಳದೆ ಟೀಕಾ ಪ್ರಹಾರ ನಡೆಸಿದರು.

‘ಅಬಕಾರಿ ಇಲಾಖೆಯಲ್ಲಿ ಟಾರ್ಗೆಟ್ ಹಾಕಿಕೊಂಡು ಲೂಟಿ ಮಾಡಲಾಗುತ್ತಿದೆ. ವೈನ್‌ಸ್ಟೋರ್‌ಗಳಿಂದ ವಸೂಲಿ ಮಾಡಲಾಗುತ್ತಿದೆ. ಪಾಪದ ಹಣವನ್ನು ಚುನಾವಣೆಯಲ್ಲಿ ಮತದಾರರಿಗೆ ಹಂಚುತ್ತಾರೆ. ಬೆಂಗಳೂರು ನಗರದ ಮೂವರು ಶಾಸಕರು ಪ್ರತಿ ಬಾರಿಯೂ ಬಿಡಿಎ ಸಭೆಗೆ ಹೋದರೆ ಮೂಟೆ ಗಳಲ್ಲಿ ಹಣ ತುಂಬಿಕೊಂಡು ಮರಳುತ್ತಿದ್ದರು ಎಂದು ಅಧಿಕಾರಿ ಗಳೇ ಹೇಳುತ್ತಾರೆ’ ಎಂದು ಕುಮಾರಸ್ವಾಮಿ ಆರೋಪ ಮಾಡಿದರು.

‘ನಾನು ರೈತರ ಸಾಲ ಮನ್ನಾ ಮಾಡದಿದ್ದರೆ ₹8 ಕೋಟಿ ಕಮಿಷನ್ ಸಿಗುತ್ತಿತ್ತು. ಅದೇ ಹಣವನ್ನು ವೈಟ್‌ಟಾಪಿಂಗ್ ಕಾಮಗಾರಿಗೆ ನೀಡಿದ್ದರೆ ಕಮಿಷನ್ ಪಡೆದು ಬಿಜೆಪಿ, ಕಾಂಗ್ರೆಸ್‌ಗಿಂತ ಚೆನ್ನಾಗಿ ಚುನಾವಣೆ ನಿರ್ವಹಿಸಬಹುದಿತ್ತು’ ಎಂದರು.

‘ರಾಜ್ಯದ ನೀರಾವರಿ ಯೋಜನೆಗಳನ್ನು ಬದ್ಧತೆಯಿಂದ ಜಾರಿ ಮಾಡುವುದು ನಮ್ಮ ಗುರಿ. ನನೆಗುದಿಗೆ ಬಿದ್ದಿರುವ ಎಲ್ಲ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತೇವೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಉಚಿತ ಶಿಕ್ಷಣ ಕೊಡಿಸುತ್ತೇವೆ’ ಎಂದು ಕುಮಾರಸ್ವಾಮಿ ಭರವಸೆ ನೀಡಿದರು.

‘ಯಾರ ಮನೆ ಬಾಗಲಿಗೂ ನನ್ನನ್ನೂ ಕಳಿಸಬೇಡಿ, ನನ್ನ ಮನೆ ಬಾಗಿಲಿಗೂ ಯಾರು ಬರುವುದಕ್ಕೆ ಬಿಡಬೇಡಿ. ಸ್ವತಂತ್ರ ಸರ್ಕಾರ ನೀಡಿ. ಇದು ನನ್ನ ಕೊನೆ ಹೋರಾಟ, ಒಂದೇ ಒಂದು ಅವಕಾಶ ಕೊಡಿ’ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಕೋರ್ ಕಮಿಟಿ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ್, ವಿಧಾನ ಪರಿಷತ್ ಸದಸ್ಯ ಭೋಜೇಗೌಡ, ಮುಖಂಡರಾದ ಟಿ.ಎ.ಶರವಣ, ರಾಜಣ್ಣ, ಪಕ್ಷದ ನಗರದ ಘಟಕದ ಅಧ್ಯಕ್ಷ ಪ್ರಕಾಶ್ ಇದ್ದರು.

ನೆಲಮಂಗಲದಲ್ಲಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ

ಉಜಿರೆ: ‘ಬೆಂಗಳೂರಿನ ನೆಲಮಂಗಲ ದಲ್ಲಿ ಹೊಸ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಜೂನ್ ಎರಡನೇ ವಾರದಲ್ಲಿ ಉದ್ಘಾ-ಟನೆಗೊಳ್ಳಲಿದೆ’ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

ಇಲ್ಲಿನ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನ ಕಾಲೇಜಿನ ವಾರ್ಷಿಕೋತ್ಸವ ಹಾಗೂ ರಾಜ್ಯಮಟ್ಟದ ಕಬಡ್ಡಿ ಪಂದ್ಯಾಟದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಧರ್ಮಸ್ಥಳದ ಶಾಂತಿವನದಲ್ಲಿ ಹಾಗೂ ಮಣಿಪಾಲದ ಬಳಿ ಪರೀಕಾದಲ್ಲಿ ಎಸ್‌ಡಿಎಂನ ಪ್ರಕೃತಿ ಚಿಕಿತ್ಸಾ ಆಸ್ಪತ್ರೆಗಳು ಇವೆ. ಈಗ ಬೆಂಗಳೂರಿನಲ್ಲಿ ಆರಂಭಿಸು-ತ್ತಿದ್ದೇವೆ’ ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಸಚಿವ ಎಂ.ಆರ್. ರವಿಕುಮಾರ್ ಇದ್ದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ ಬಿ.ಎನ್. ನರಸಿಂಹಮೂರ್ತಿ ಮತ್ತು ಸಂಸ್ಕೃತಿ ಚಿಂತಕ ಎಂ.ತಿಮ್ಮಯ್ಯ ಅವರಿಗೆ ‘ಚಿ.ಮೂ.ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಹಂ.ಪ.ನಾಗರಾಜಯ್ಯ, ಕ್ರೈಸ್ತ ಧರ್ಮಗುರು ಫಾದರ್ ಸೈಮನ್ ಬರ್ತಲೋಮಿಯೊ, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ, ರಾ.ನಂ.ಚಂದ್ರಶೇಖರ ಮತ್ತು ರಫಾಯಲ್ ರಾಜ್ ಇದ್ದಾರೆ
– ಪ್ರಜಾವಾಣಿ ಚಿತ್ರ

ಚಿದಾನಂದಮೂರ್ತಿ ಹೆಸರಲ್ಲಿ ಪ್ರತಿಷ್ಠಾನ ಸ್ಥಾಪಿಸಿ: ರಾ. ನಂ

ಬೆಂಗಳೂರು: ‘ಸಂಶೋಧಕ ಎಂ.ಚಿ-ದಾನಂದಮೂರ್ತಿ (ಚಿ.ಮೂ) ಅವರ ಹೆಸರಿನಲ್ಲಿ ಸ್ವತಂತ್ರ ಪ್ರತಿಷ್ಠಾನವನ್ನು ಸ್ಥಾಪಿಸಬೇಕು. ಅವರಿದ್ದ ಮನೆಯ ಸಮೀಪದ ಮುಖ್ಯರಸ್ತೆಗೆ ಅವರ ಹೆಸರಿಡಬೇಕು’ ಎಂದು ಲೇಖಕ ರಾ.ನಂ.ಚಂದ್ರಶೇಖರ ಒತ್ತಾಯಿಸಿದರು.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಚಿದಾನಂದಮೂರ್ತಿ ಅವರ ಜನ್ಮದಿನ ದಲ್ಲಿ ಅವರು ಮಾತನಾಡಿದರು.

‘ಕನ್ನಡ ಸಂಸ್ಕೃತಿ ಮತ್ತು ಇತಿಹಾಸದ ಅಧ್ಯಯನಕ್ಕೆ ಹೊಸ ಹಾದಿ ತೋರಿಸಿದ್ದು ಚಿದಾನಂದ ಮೂರ್ತಿಯವರು. ಕನ್ನಡ ಚಳವಳಿ ಗಾಂಭೀರ್ಯ ಕಳೆದುಕೊಳ್ಳು-ತ್ತಿದ್ದಾಗ ಅವರು ಅದಕ್ಕೆ ಘನತೆ ತಂದು-ಕೊಟ್ಟಿದ್ದರು. ಚಳವಳಿಯನ್ನು ಬೇಡಿಕೆ ಹಂತದಿಂದ ಹಕ್ಕೊತ್ತಾಯದ ಮಟ್ಟಕ್ಕೆ ಏರಿಸಿದ್ದರು’ ಎಂದರು.

ಸಾಹಿತಿ ಹಂ.ಪ.ನಾಗರಾಜಯ್ಯ, ‘ಸೂರ್ಯಗ್ರಹಣದ ದಿನ ಎಲ್ಲರೂ ಮನೆಯೊಳಗಿದ್ದಾಗ ಚಿ.ಮೂ ರಸ್ತೆಗ ಳಲ್ಲಿ ತಿರುಗುತ್ತಾ ಕೃತಿ ರಚಿಸಿದ್ದರು. ಅವರ ವಿಚಾರಧಾರೆಗಳು ಈಗಲೂ ಜೀವಂತವಾಗಿವೆ’ ಎಂದರು.

ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್,‘ಬೆಂಗಳೂರಿನ ಚರ್ಚ್‌ಗಳಲ್ಲಿ ತಮಿಳಿನಲ್ಲೇ ಪ್ರಾರ್ಥನೆಗೆ ಅವಕಾಶ ಕೋರಿ ಕೆಲ ಕನ್ನಡ ವಿರೋಧಿಗಳು ರೋಮ್‌ನ ಪೋಪ್‌ಗೆ ಪತ್ರ ಬರೆದಿದ್ದರು. ಇದನ್ನು ವಿರೋಧಿಸಿ ನಡೆದ ಹೋರಾಟದಲ್ಲಿ ಚಿ.ಮೂ ಮುಂಚೂಣಿಯಲ್ಲಿದ್ದರು. ಇದರಿಂದ ಇಂದು ಚರ್ಚ್‌ಗಳಲ್ಲಿ ಕನ್ನಡದಲ್ಲೂ ಪ್ರಾರ್ಥನೆ ನಡೆಯುತ್ತಿದೆ’ ಎಂದು ಸ್ಮರಿಸಿದರು.

ಭೂ ಒಡೆತನ ಘಟಕ ವೆಚ್ಚ ಹೆಚ್ಚಳಕ್ಕೆ ಚಿಂತನೆ

• ಭರತ್ ಜೋಶಿ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಭೂರಹಿತ ಕುಟುಂಬಗಳಿಗೆ ‘ಭೂ ಒಡೆತನ’ ಯೋಜನೆ ಅಡಿಯಲ್ಲಿ ವಿತರಿಸಲು ಖರೀದಿಸುವ ಜಮೀನಿಗೆ ಮಾರ್ಗಸೂಚಿ ದರದ ಐದು ಪಟ್ಟಿನವರೆಗೂ ದರ ನೀಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಇದಕ್ಕಾಗಿ ಯೋಜನೆಯ ಘಟಕ ವೆಚ್ಚ ಹೆಚ್ಚಿಸುವ ಚರ್ಚೆ ನಡೆದಿದೆ.

ಭೂ ಒಡೆತನ ಯೋಜನೆಯಡಿ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ಹೆಚ್ಚಿನ ಬಡ ಕುಟುಂಬಗಳಿಗೆ ಜಮೀನು ಒದಗಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಆಸಕ್ತಿ ತೋರಿದೆ. ಆದರೆ, ಸೂಕ್ತ ಜಮೀನುಗಳೇ ಲಭ್ಯವಾಗುತ್ತಿ-ಲ್ಲ. ಈ ಕಾರಣದಿಂದ ಯೋಜನೆಯ ಘಟಕ ವೆಚ್ಚ ಹೆಚ್ಚಿಸಿ, ಖರೀದಿಸುವ ಜಮೀನಿಗೆ ಮಾರ್ಗಸೂಚಿ ದರದ ಐದು ಪಟ್ಟಿನವರೆಗೂ ದರ ನೀಡಲು ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿ ಜಮೀನು ಖರೀದಿಸಿ, ವಿತರಿಸುವ ಪ್ರಕ್ರಿಯೆ ನಡೆಸುತ್ತದೆ. ಈಗ ಮಾರ್ಗಸೂಚಿ ದರದ ಮೂರು ಪಟ್ಟು ದರ ನೀಡುವುದಕ್ಕೆ ಅವಕಾಶವಿದೆ. ಅದನ್ನು ಐದು ಪಟ್ಟುಗಳವರೆಗೂ ಹೆಚ್ಚಿಸಿದರೆ ಅಗತ್ಯ ಪ್ರಮಾಣದ ಜಮೀನು ಖರೀದಿಗೆ ಲಭ್ಯವಾಗಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈ ಕುರಿತು ‘ಪ್ರಜಾವಾಣಿ’ಗೆ ಡಪ್ರತಿಕ್ರಿಯಿಸಿದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ‘ಭೂ ಒಡೆತನ ಯೋಜನೆಯಡಿ ಖರೀದಿಸುವ ಜಮೀನಿಗೆ ಮಾರ್ಗಸೂಚಿ ದರದ ಐದು ಪಟ್ಟಿನವರೆಗೂ ದರ ನೀಡುವುದಕ್ಕೆ ಅವಕಾಶ ಒದಗಿಸುವ ಕುರಿತು ಚರ್ಚೆ ನಡೆಯುತ್ತಿದೆ. ಇನ್ನೂ ಅಂತಿಮ ತೀರ್ಮಾನ ಆಗಿಲ್ಲ. ಸದ್ಯ, ಈಗ ಇರುವ ಮಿತಿಯಲ್ಲೇ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ’ ಎಂದರು.

ತರಬೇತಿ ಸಂಸ್ಥೆ ಮುಖ್ಯಸ್ಥ ಸಿಐಡಿ ವಶಕ್ಕೆ

ಧಾರವಾಡ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಸಪ್ತಾ-ಪುರದಲ್ಲಿರುವ ಸ್ಪರ್ಧಾತ್ಮಕ ತರಬೇತಿ ಸಂಸ್ಥೆಯ ಮುಖ್ಯಸ್ಥರನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಸಪ್ತಾಪುರ ಹತ್ತಿರದ ಯುನಿಕ್ ಡ್ರೀಮ್ ಟೀಮ್ ಸ್ಪರ್ಧಾತ್ಮಕ ತರಬೇತಿ ಸಂಸ್ಥೆಯ ಮುಖ್ಯಸ್ಥ ಬಸವರಾಜ ಬಂಗಾರಿ ಅವರನ್ನು ಸಿಐಡಿ ಅಧಿಕಾರಿಗಳು ಮಂಗಳವಾರ ಮಧ್ಯಾಹ್ನ ವಶಕ್ಕೆ ಪಡೆದು ಬೆಂಗಳೂರಿಗೆ ಕರೆದೊಯ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ.ಕಳೆದ ಕೆಲ ವರ್ಷಗಳಿಂದ ಪಿಎಸ್‌ಐ, ಕೆಎಎಸ್, ಬ್ಯಾಂಕಿಂಗ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿದ್ದರು ಎನ್ನಲಾಗಿದೆ.

ಸೌಹಾರ್ದಪರರಿಂದ ‘ಸಾಮರಸ್ಯ ನಡಿಗೆ’ • ಭಾಗಿಯಾಗಲಿರುವ ಹಲವು ಧರ್ಮಗುರುಗಳು

ಇದೇ 14ಕ್ಕೆ ಉಡುಪಿ ಸಹಬಾಳ್ವೆ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಬಾಳ್ವೆ ಉಡುಪಿ ಮತ್ತು ರಾಜ್ಯದ ಸೌಹಾರ್ದಪರ ಸಂಘಟನೆಗಳ ಜಂಟಿ ಆಶ್ರಯದಲ್ಲಿ ರಾಜ್ಯ ಮಟ್ಟದ ಸಾಮರಸ್ಯ ನಡಿಗೆ ಮತ್ತು ಸಹಬಾಳ್ವೆ ಸಮಾವೇಶ ಇದೇ 14ರಂದು ಉಡುಪಿಯಲ್ಲಿ ನಡೆಯಲಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ದಲಿತ ಮುಖಂಡ ಮಾವಳ್ಳಿ ಶಂಕರ್, ‘ಉಡುಪಿಯ ಅಜ್ಜರ ಕಾಡು ಬಳಿಯ ಹುತಾತ್ಮ ಚೌಕ ದಿಂದ ಮಧ್ಯಾಹ್ನ 2 ಗಂಟೆಗೆ ಸಾಮರಸ್ಯ ನಡಿಗೆಗೆ ಚಾಲನೆ ನೀಡಲಾಗು ವುದು. ಕ್ರಿಶ್ಚಿಯನ್ ಶಾಲೆಯ ಮೈದಾನ ದಲ್ಲಿ ಸಂಜೆ 4 ಗಂಟೆಗೆ ಸಹಬಾಳ್ವೆ ಸಮಾವೇಶ ನಡೆಯಲಿದೆ’ ಎಂದರು.

‘ಸಮಾವೇಶವನ್ನು ವಿವಿಧ ಧರ್ಮ ಗುರುಗಳು ಉದ್ಘಾಟಿಸಲಿದ್ದಾರೆ. ಗುರು



ದೇವ ಪಟ್ಟದೇವರು, ಸುಗುಣೇಂದ್ರ ತೀರ್ಥ ಸ್ವಾಮೀಜಿ, ಮಾತೆ ಬಸವಾಂಜಲಿ ದೇವಿ, ಬಸವಪ್ರಕಾಶ್ ಸ್ವಾಮೀಜಿ, ವರ್ಗೀಸ್ ಮಾರ್ ಮಕರಿಯೋಸ್, ಫಾ.ಚೇತನ್ ಲೋಬೊ, ಮೌಲಾನ ಇಫ್ತಿಕಾರ್ ಅಹ್ಮದ್ ಖಾಸ್ಮಿ, ಜ್ಞಾನಿ ಬಲ ರಾಜ್ ಸಿಂಗ್, ಯೋಗೇಂದ್ರ ಯಾದವ್, ರೊನಾಲ್ಡ್ ಕೊಲಾಸೊ, ಶಶಿಕಾಂತ್ ಸೆಂಥಿಲ್ ಸೇರಿದಂತೆ ಹಲವರು ಭಾಗ ವಹಿಸಲಿದ್ದಾರೆ’ ಎಂದರು.

‘ಒಂದೇ ಧರ್ಮಕ್ಕೆ ಒತ್ತು ಕೊಟ್ಟರೆ ಅಪಾಯ’

‘ಯಾವುದೇ ನಾಡಿನಲ್ಲಿ ಒಂದು ಧರ್ಮ ಅಥವಾ ಒಂದು ಭಾಷೆಗೆ ಒತ್ತು ನೀಡಿದರೆ ಅಪಾಯ ಕಟ್ಟಿಟ್ಟಬುತ್ತಿ. ಇದಕ್ಕೆ ಶ್ರೀಲಂಕಾದ ಈಗಿನ ಸ್ಥಿತಿಯೇ ಉದಾಹರಣೆ’ ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಅಭಿಪ್ರಾಯಪಟ್ಟರು.

‘ಉಡುಪಿ ಬಹುತ್ವದ ನಾಡು. ಇಲ್ಲಿ ಹಲವು ಭಾಷಿಕರು ಮತ್ತು ಧರ್ಮದವರು ಇದ್ದಾರೆ. ಇಂತಹ ನಾಡಿನಲ್ಲಿ ದ್ವೇಷ ಹಬ್ಬಿಸಲು ಯತ್ನಿಸಿರುವುದು ಬೇಸರದ ಸಂಗತಿ. ಇದಕ್ಕೆ ಪರ್ಯಾಯವಾಗಿ ಸಮುದಾಯಗಳ ನಡುವೆ ಸಾಮರಸ್ಯ ಮೂಡಿಸುವುದು ನಮ್ಮ ಜವಾಬ್ದಾರಿ’ ಎಂದರು.

‘ಸರ್ವಜನಾಂಗದ ಶಾಂತಿಯ ತೋಟಕ್ಕೆ ಬೆಂಕಿ ಹಚ್ಚುವ ಕೆಲಸವನ್ನು ಕೆಲ ಕಿಡಿಗೇಡಿಗಳು ಹಾಗೂ ಸಂಘಟನೆ ಗಳು ಮಾಡುತ್ತಿವೆ. ಸಾಮರಸ್ಯ ಕದಡುವು ದನ್ನು ತಡೆಯಲು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ’ ಎಂದು ಅವರು ಹೇಳಿದರು.

ಸಾಹಿತಿ ಕೆ.ಷರೀಫಾ, ‘ಧರ್ಮ ಮತ್ತು ರಾಜಕಾರಣದ ಅಪಮಿತ್ರ ಮೈತ್ರಿಯ ಕೂಸು ಕೋಮುವಾದ. ಹಿಂದೂ–ಮುಸ್ಲಿಂ ಸಾಮರಸ್ಯ ದಿನೇ ದಿನೇ ಹಾಳಾಗುತ್ತಿದೆ. ಅಂದು ಸ್ವಾತಂತ್ರ್ಯಕ್ಕಾಗಿ ಎಲ್ಲ ಧರ್ಮದವರು ಒಗ್ಗಟ್ಟಾಗಿ ಹೋರಾಡಿದರು. ಈಗ ರಾಜ್ಯದಲ್ಲಿ ನಡೆಯ ಬೇಕಿರುವುದು ಎರಡನೇ ಸ್ವಾತಂತ್ರ್ಯ ಸಮರ’ ಎಂದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಮೋಹನ್ ರಾಜ್, ರೈತ ಮುಖಂಡ ವೀರಸಂಗಯ್ಯ, ಬಹುತ್ವ ಕರ್ನಾಟಕದ ವಿನಯ್ ಇದ್ದರು.

ಕೆಪಿಎಸ್‌ಸಿ ನಡೆಸಿದ್ದ ಪರೀಕ್ಷೆ ● ಆರ್‌.ಡಿ.ಪಾಟೀಲ ಪ್ರಮುಖ ಆರೋಪಿ ● ವಾಕಿಟಾಕಿ ಬಳಸಿ ಉತ್ತರ ಬರೆದಿದ್ದ ಅಭ್ಯರ್ಥಿ

ಎಇ, ಜೆಇ ನೇಮಕಾತಿಯಲ್ಲೂ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ರುದ್ರಗೌಡ ಪಾಟೀಲ ಅಲಿಯಾಸ್ ಆರ್‌.ಡಿ.ಪಾಟೀಲ, ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ (ಎಇ) ಹಾಗೂ ಕಿರಿಯ ಎಂಜಿನಿಯರ್ (ಜೆಇ) ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮ ಎಸಗಿರುವ ಅನುಮಾನ ವ್ಯಕ್ತವಾಗಿದೆ.

ಕರ್ನಾಟಕ ಲೋಕಸೇವಾ ಆಯೋಗದಿಂದ (ಕೆಪಿಎಸ್‌ಸಿ) 2021ರ ಡಿ.14ರಂದು ನಡೆಸಿದ್ದ ಎಇ ಹಾಗೂ ಜೆಇ ನೇಮಕಾತಿ ಪರೀಕ್ಷೆಯಲ್ಲಿ 'ವಾಕಿಟಾಕಿ' ಬಳಸಿ ಉತ್ತರ ಬರೆಯುತ್ತಿದ್ದ ಅಭ್ಯರ್ಥಿ ವೀರಣ್ಣಗೌಡ ಡಿ. ಚಿಕ್ಕೇಗೌಡ (30)




ರುದ್ರಗೌಡ ಪಾಟೀಲ



ವೀರಣ್ಣಗೌಡ

ಎಂಬಾತನನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದರು. ಈ ಪ್ರಕರಣದಲ್ಲಿ ರುದ್ರಗೌಡ ಪಾಟೀಲ ಸಹಭಾಗಿಯಾಗಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದ ರುದ್ರಗೌಡ ಪಾಟೀಲ ಅವರನ್ನು ಬಾಡಿ ವಾರಂಟ್ ಮೂಲಕ ಅನ್ನಪೂರ್ಣೇಶ್ವರಿನಗರ ಪೊಲೀಸರು



ಅಭ್ಯರ್ಥಿ ಬಳಿ ಜಪ್ತಿ ಮಾಡಲಾಗಿದ್ದ ವಾಕಿಟಾಕಿ ಉಪಕರಣ

ಮಂಗಳವಾರ ಬಂಧಿಸಿದ್ದಾರೆ.

ರುದ್ರಗೌಡ ಅವರನ್ನು ಕಲಬುರಗಿಯಿಂದ ಬೆಂಗಳೂರಿಗೆ ಕರೆತರಲಿರುವ ಪೊಲೀಸರು, ನ್ಯಾಯಾಲಯದ ಎದುರು ಹಾಜರುಪಡಿಸಿ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಿದ್ದಾರೆ.

ಎಂಜಿನಿಯರ್ ಮೇಳಕುಂದಿಗೆ ಜಾಮೀನು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಎಂಜಿನಿಯರ್ ಮಂಜುನಾಥ್ ಮೇಳಕುಂದಿ ಅವರೂ ಎಇ, ಜೆಇ ಹುದ್ದೆಗಳ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿದ್ದರು. ಅವರನ್ನು ಪೊಲೀಸರು ಬಂಧಿಸಿದ್ದರು. ನಂತರ ಜಾಮೀನು ಸಿಕ್ಕಿತ್ತು.

ವಾಕಿಟಾಕಿ ಶಬ್ದದಿಂದ ಪತ್ತೆ: 'ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿ ಸೇಂಟ್ ಜಾನ್ಸ್ ಪ್ರೌಢಶಾಲೆ ಕೇಂದ್ರದಲ್ಲಿ ಪರೀಕ್ಷೆ ನಡೆಯುತ್ತಿತ್ತು. ಕಲಬುರಗಿಯ ನಿವಾಸಿ ವೀರಣ್ಣಗೌಡ, 'ವಾಕಿಟಾಕಿ' ಸಿಗ್ನಲ್‌ಗಳನ್ನು ಸ್ವೀಕರಿಸುವ ಉಪಕರಣ ಹಾಗೂ ಕಿವಿಯೊಳಗೆ ಚಿಕ್ಕದಾದ ಮೈಕ್ ಇಟ್ಟುಕೊಂಡು ಪರೀಕ್ಷೆಗೆ ಹಾಜರಾಗಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪರೀಕ್ಷೆ ಆರಂಭವಾಗುತ್ತಿದ್ದಂತೆ ಉತ್ತರ ಬರೆಯಲು ಆರಂಭಿಸಿದ್ದ ಆರೋಪಿ, ಉಪಕರಣ ಆನ್ ಮಾಡಿದ್ದರು. 'ಬೀಪ್' ಶಬ್ದ ಬಂದಿತ್ತು. ಅದನ್ನು ಕೇಳಿಸಿಕೊಂಡಿದ್ದ ಮೇಲ್ವಿಚಾರಕರು, ವೀರಣ್ಣಗೌಡ ಅವರನ್ನು ಪರಿಶೀಲಿಸಿದ್ದರು. ನೀಲಿ ಬಣ್ಣದ ಬನಿಯನ್‌ನಲ್ಲಿ ಉಪಕರಣ ಪತ್ತೆಯಾಗಿತ್ತು.'

'ಕ್ರಿಮಿನಲ್ ಪಿತೂರಿ (ಐಪಿಸಿ 120 ಬಿ), ನಂಬಿಕೆ ದ್ರೋಹ (ಐಪಿಸಿ 406), ವಂಚನೆ (ಐಪಿಸಿ 420), ನಕಲಿ ದಾಖಲೆಗಳನ್ನು ಅಸಲಿ ಎಂದು ಬಳಸಿದ (ಐಪಿಸಿ 471) ಆರೋಪದಡಿ, ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು' ಎಂದೂ ಅಧಿಕಾರಿ ತಿಳಿಸಿದರು.

'ಲಕ್ಷಾಂತರ ರೂಪಾಯಿ ಪಡೆದಿರುವ ಶಂಕೆ'

'ಬಂಧಿತ ಅಭ್ಯರ್ಥಿ ವೀರಣ್ಣಗೌಡ ಕಡೆಯಿಂದ ಆರ್‌.ಡಿ.ಪಾಟೀಲ ಲಕ್ಷಾಂತರ ರೂಪಾಯಿ ಪಡೆದಿರುವ ಬಗ್ಗೆ ಮಾಹಿತಿ ಇದೆ. ಇದನ್ನು ಖಚಿತಪಡಿಸಿಕೊಳ್ಳಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಕೊಂಡ ಹಾಯ್ದ ಕಾರ್ಮಿಕ ಸಚಿವ

ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ನರೂರ ಗ್ರಾಮದ ವೀರಭದ್ರೇಶ್ವರ ಮತ್ತು ಚೌಡೇಶ್ವರಿ ದೇವಸ್ಥಾನದಲ್ಲಿ ಮಂಗಳವಾರ ನಡೆದ ಗುಗ್ಗಳ ಉತ್ಸವದ ವೇಳೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಅವರು ಕೊಂಡ ಹಾಯ್ದರು ಪ್ರಜಾವಾಣಿ ಚಿತ್ರ

ರವೀಂದ್ರನಾಥ್ ರಾಜೀನಾಮೆ

ಒಂದನೇ ಪುಟದಿಂದ

'ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲದೇ ಕಿರುಕುಳ ನೀಡುವ ಉದ್ದೇಶದಿಂದಲೇ ಅವಧಿಗೆ ಮುನ್ನವೇ ನನ್ನನ್ನು ವರ್ಗಾವಣೆ ಮಾಡಲಾಗಿದೆ. ನಕಲಿ ಜಾತಿ ಪ್ರಮಾಣಪತ್ರ ಪಡೆದವರ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದರಿಂದಲೇ ನನ್ನನ್ನು ವರ್ಗಾವಣೆ ಮಾಡಲಾಯಿತು. 1995ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ನಿಯಮಗಳ ಅನ್ವಯ ರಕ್ಷಣಾ ಘಟಕ ಸ್ಥಾಪಿಸಿ ಆದೇಶ ಹೊರಡಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ಕೋರಿದ್ದೆ. ಆದರೆ, ಅವರು ನಿರ್ಲಕ್ಷ್ಯ ವಹಿಸಿದರು' ಎಂದಿದ್ದಾರೆ.

ಬಡ್ತಿ ಸಿಗದಿದ್ದಾಗಲೂ ರಾಜೀನಾಮೆ: ಬಡ್ತಿ ಹಾಗೂ ಇತರೆ ವಿಚಾರಕ್ಕೆ ಸಂಬಂಧಿಸಿ ಮನಸ್ತಾಪಗೊಂಡು ರವೀಂದ್ರನಾಥ್, 2008, 2014 ಹಾಗೂ 2020ರಲ್ಲೂ ರಾಜೀನಾಮೆ ನೀಡಿದ್ದರು. ಸರ್ಕಾರ ಆಗ ರಾಜೀನಾಮೆ ಅಂಗೀಕರಿಸಿರಲಿಲ್ಲ.

ಎಸಿಬಿ ಬಲೆಗೆ ಅಬಕಾರಿ ಉಪ ಆಯುಕ್ತ

ಚಿತ್ರದುರ್ಗ: ಮದ್ಯದಂಗಡಿಯ ಪರವಾನಗಿ ನವೀಕರಣಕ್ಕೆ ಲಂಚ ಪಡೆದ ಅಬಕಾರಿ ಉಪ ಆಯುಕ್ತ ನಾಗಶಯನ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬಲೆಗೆ ಬಿದ್ದಿದ್ದಾರೆ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಬುರೆಡ್ಡಿ ಅವರಿಂದ ಲಂಚವಾಗಿ ಪಡೆದಿದ್ದ ₹ 2.28 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಉಪ ಆಯುಕ್ತ ಹಾಗೂ ಕಾರು ಚಾಲಕ ಮೋಹಿಸಿನ್ ಎಂಬುವರನ್ನು ಎಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಾಗಶಯನ ಅವರ ಪತ್ನಿ ಕವಿತಾ ಐಪಿಎಸ್ ಅಧಿಕಾರಿ.

ನಿಧನ ವಾರ್ತೆ

ಮಂಜುಳಾ ಶಂಕರ್

ಮೈಸೂರು: ನಟ, ನಿರ್ಮಾಪಕ ದಿವಂಗತ ಎಂ.ಪಿ.ಶಂಕರ್ ಅವರ ಪತ್ನಿ ಮಂಜುಳಾ ಶಂಕರ್ (75) ಇಲ್ಲಿನ ವಿಜಯನಗರದ ತಮ್ಮ ನಿವಾಸದಲ್ಲಿ ಸೋಮವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಒಬ್ಬ ಪುತ್ರ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ನಡೆಯಿತು.

ಜ್ಞಾನಜ್ಯೋತಿ ಶಾಲೆಯ ಪರೀಕ್ಷಾ ಕೇಂದ್ರದ ಬಗ್ಗೆ ಮಾಹಿತಿ ಪಡೆದಿದ್ದ ಸಾಲಿ

ಅಕ್ರಮ ಗೊತ್ತಿದ್ದೂ ಮರೆಮಾಚಿದ್ದ ಡಿವೈಎಸ್ಪಿ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕಾನೂನು ಕ್ರಮ ಕೈಗೊಳ್ಳದೇ ಅಕ್ರಮದಲ್ಲಿ ಪಾಲು ಪಡೆದ ಆರೋಪದಡಿ ಅಮಾನತುಗೊಂಡಿರುವ ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿಗೆ ಸಿಐಡಿ ಅಧಿಕಾರಿಗಳು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ಪ್ರಮುಖ ಆರೋಪಿಗಳಾದ ಆರ್‌.ಡಿ.ಪಾಟೀಲ, ದಿವ್ಯಾ ಹಾಗರಗಿ ಬಳಿಕ ಈಗ ಮಲ್ಲಿಕಾರ್ಜುನ ಸಾಲಿ ಹಾಗೂ ಬೆರಳಚ್ಚು ವಿಭಾಗದ ಸಿಪಿಐ ಆನಂದ ಮೇತ್ರಿ ಅವರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ.

'ಹಗರಣ ಕುರಿತು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ದೂರು ದಾಖಲಿಸಿದ್ದರೆ ವೃತ್ತಿ



ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದ ಆರೋಪಿ ಮಂಜುನಾಥ ಮೇಳಕುಂದಿ (ಮಧ್ಯದಲ್ಲಿರುವವರು) ಅವರನ್ನು ಪ್ರಮುಖ ಆರೋಪಿ ಕಲಬುರಗಿಯ ದಿವ್ಯಾ ಹಾಗರಗಿ ಮನೆಗೆ ಮಂಗಳವಾರ ಕರೆದೊಯ್ದು ಮಹಜರು ನಡೆಸಲಾಯಿತು

ಜೀವನದಲ್ಲೂ ಮೈಲಿಗಲ್ಲು ಆಗುತ್ತಿತ್ತು. ಚುಕ್ಕೆ ತರುವ ಕೆಲಸ ಮಾಡಿದ್ದು ಅದನ್ನು ಬಿಟ್ಟು ಇಡೀ ಇಲಾಖೆಗೆ ಕಪ್ಪು ಏಕೆ' ಎಂದು ವಿಚಾರಣೆ ವೇಳೆ ಪ್ರಶ್ನಿಸಲಾಗಿದೆ.

ಬಚಾವಾಗಿದ್ದ ಆರ್‌.ಡಿ.ಪಾಟೀಲ: ಬೆಂಗಳೂರಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಡಿ. 13 ಮತ್ತು 14ರಂದು ನಡೆದಿದ್ದ ಲೋಕೋಪಯೋಗಿ ಇಲಾಖೆಯ ಎಇ ಮತ್ತು ಜೆಇ ಪರೀಕ್ಷೆ ಅಕ್ರಮದಲ್ಲಿ ಆರ್‌.ಡಿ.ಪಾಟೀಲ ಪಾತ್ರವಿರುವ ಬಗ್ಗೆ ಮಾಹಿತಿ ಇದ್ದರೂ ಅವರನ್ನು ಬಂಧಿಸಿರಲಿಲ್ಲ. ಮತ್ತೊಬ್ಬ ಆರೋಪಿ ಮಂಜುನಾಥ ಮೇಳಕುಂದಿಯನ್ನು ಬಂಧಿಸಲಾಗಿತ್ತು.

ಪಿಎಸ್‌ಐ ನೇಮಕದಲ್ಲಿ ಆರ್‌.ಡಿ.ಪಾಟೀಲರಿಂದ ವ್ಯಾಪಕ ಅಕ್ರಮ ವಿರುದ್ಧ ಹಾಗೆಯೇ ಬಿಟ್ಟಿರುವ ಪೊಲೀಸರ ಕ್ರಮದ ಬಗ್ಗೆಯೂ ಶಂಕೆಗಳಿವೆ. ಪ್ರಕರಣದ ಗಂಭೀರತೆ ಹಿಂದೆಯೇ ಆರ್‌.ಡಿ.ಪಾಟೀಲ ವಶಕ್ಕೆ ಪಡೆದು ವಿಚಾರಣೆ ನಡೆಸಲು ಬೆಂಗಳೂರು ಪೊಲೀಸರ ತಂಡ ನಗರಕ್ಕೆ ಬಂದಿದೆ.

ಅಮರ್ಜಾ ಜಲಾಶಯಕ್ಕೆ ಮೊಬೈಲ್ ಎಸೆದಿದ್ದ ಮಂಜುನಾಥ

ಸದ್ಯ, ಸಿಐಡಿ ವಶದಲ್ಲಿರುವ ಮಂಜುನಾಥ ಮೇಳಕುಂದಿ ಸಾಕ್ಷ್ಯ ನಾಶ ಉದ್ದೇಶದಿಂದ ಕಲಬುರಗಿ ಜಿಲ್ಲೆ ಆಳಂದ ಬಳಿಯ ಅಮರ್ಜಾ ಜಲಾಶಯಕ್ಕೆ ತಾನು ಬಳಸಿದ್ದ ಮೊಬೈಲ್ ಫೋನ್ ಎಸೆದಿರುವುದಾಗಿ ತಿಳಿಸಿದ್ದರು. ಹೀಗಾಗಿ, ಸಿಐಡಿ ಅಧಿಕಾರಿಗಳ ತಂಡ ಆರೋಪಿಯನ್ನು ಅಮರ್ಜಾಕ್ಕೆ ಕರೆದೊಯ್ದು ಮಹಜರು ನಡೆಸಿತು.

ಮಂಜುನಾಥ ತಿಳಿಸಿದ ಸ್ಥಳದಲ್ಲಿ ಈಜುಗಾರರನ್ನು ಇಳಿಸಿ ಮೊಬೈಲ್ ಫೋನ್‌ಗೆ ಶೋಧ ನಡೆಯಿತು. ಆದರೆ, ಸಿಗಲಿಲ್ಲ. ಸದ್ಯ, ಅವರು ಬಳಸುತ್ತಿದ್ದ ಮೊಬೈಲ್ ಫೋನ್‌ನಲ್ಲಿ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದ ಕರೆ ವಿವರ ಇರಲಿಲ್ಲ. ಸಂಶಯ ಬಂದು ಅಧಿಕಾರಿಗಳು ಪ್ರಶ್ನಿಸಿದಾಗ ಜಲಾಶಯಕ್ಕೆ ಮೊಬೈಲ್ ಎಸೆದಿದ್ದುದನ್ನು ತಿಳಿಸಿದ್ದರು. ನಂತರ ಆರೋಪಿಯನ್ನು ಜ್ಞಾನಜ್ಯೋತಿ ಶಾಲೆ ಮುಖ್ಯಸ್ಥೆ ದಿವ್ಯಾ ಹಾಗರಗಿ ಮನೆ, ಬ್ಲೂಟೂತ್ ಎಸೆದಿದ್ದ ಕಲಬುರಗಿ ಹೊರವಲಯದ ಕೇಂದ್ರೀಯ ವಿದ್ಯಾಲಯ ಸಮೀಪದ ರಾಜಕಾಲುವೆ ಬಳಿಗೂ ಕರೆದೊಯ್ದು ಮಹಜರು ನಡೆಸಲಾಯಿತು.

ಅಭ್ಯರ್ಥಿ ಕರೆದೊಯ್ದ ಸಿಐಡಿ?

ಧಾರವಾಡ: ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿ ಸಿಐಡಿ ಅಧಿಕಾರಿಗಳು ಇಲ್ಲಿನ ಸಪ್ತಾಪುರದಲ್ಲಿರುವ ಶಿಕ್ಷಣ ಸಂಸ್ಥೆಯಲ್ಲಿ ಕೆಎಎಸ್ ಮತ್ತು ಪಿಎಸ್‌ಐ ತರಬೇತಿ ಪಡೆಯುತ್ತಿದ್ದ ಬಾಗಲಕೋಟೆ ಜಿಲ್ಲೆಯ ಮಹಲಿಂಗಪುರದ ರುದ್ರಣ್ಣ ಅರಳಿಕಟ್ಟಿ ವರನ್ನು ವಶಕ್ಕೆ ಪಡೆದರು.

ನಾಲ್ಕು ಜನರಿದ್ದ ಸಿಐಡಿ ತಂಡ ವಶಕ್ಕೆ ಪಡೆದು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ನೇಮಕಾತಿ ವಿಭಾಗದ ನೌಕರರ ಬಂಧನ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ನೌಕರರು ಸೇರಿ 6 ಮಂದಿಯನ್ನು ಮಂಗಳವಾರ ಬಂಧಿಸಿದ್ದಾರೆ.

'ನೇಮಕಾತಿ ವಿಭಾಗದ ಡಿಐಜಿ ಆಪ್ತ ಸಹಾಯಕ ಶ್ರೀನಿವಾಸ್, ಎಫ್‌ಡಿಎ ಹರ್ಷ, ಭದ್ರತೆಗೆ ನಿಯೋಜನೆಗೊಂಡಿದ್ದ ನಗರ ಸಶಸ್ತ್ರ ಮೀಸಲು ಪಡೆಯ ಸಬ್ ಇನ್‌ಸ್ಪೆಕ್ಟರ್‌ಗಳಾದ ಲೋಕೇಶ್, ಮಂಜುನಾಥ್, ಶ್ರೀಧರ್ ಹಾಗೂ ಮಧ್ಯವರ್ತಿ ಶರತ್ ಬಂಧಿತರು. ಇವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ವಿಚಾರಣೆಗೆಂದು 9 ದಿನಗಳವರೆಗೆ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

₹40 ಲಕ್ಷವರೆಗೆ ಸಂದಾಯ?: 'ಮಧ್ಯವರ್ತಿ ಶರತ್ ಹಾಗೂ ಇತರರು, ಪ್ರತಿ ಅಭ್ಯರ್ಥಿಯಿಂದ ₹ 60 ಲಕ್ಷದಿಂದ ₹ 80 ಲಕ್ಷ ವಸೂಲಿ ಮಾಡಿದ್ದರು. ಅದರಲ್ಲಿ ₹ 30 ಲಕ್ಷದಿಂದ ₹ 40 ಲಕ್ಷವನ್ನು ನೇಮಕಾತಿ ವಿಭಾಗದ ನೌಕರರಿಗೆ ನೀಡಿದ್ದರು' ಎಂದೂ ಮೂಲಗಳು ತಿಳಿಸಿವೆ.

ಭದ್ರತಾ ಕೊಠಡಿಯಲ್ಲಿ ಕೃತ್ಯ: 'ನೇಮಕಾತಿ ವಿಭಾಗದ ಭದ್ರತಾ ಕೊಠಡಿಯಲ್ಲಿ ಒಎಂಆರ್ ಪ್ರತಿಗಳನ್ನು ಇರಿಸಲಾಗಿತ್ತು. ಭದ್ರತೆಗೆ ನಿಯೋಜಿಸಿದ್ದ ಸಿಬ್ಬಂದಿ, ಭದ್ರತಾ ಕೊಠಡಿಯಲ್ಲಿದ್ದ ಒಎಂಆರ್ ಪ್ರತಿಗಳ ತಿದ್ದಲು ಸಹಕಾರ ನೀಡಿದ್ದರು' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

'ಭದ್ರತಾ ಕೊಠಡಿಯಲ್ಲಿರುವ ಒಎಂಆರ್ ಪ್ರತಿಗಳನ್ನು, ಬೇರೆಡೆ ತೆಗೆದುಕೊಂಡು ಹೋಗಿ ಭರ್ತಿ ಮಾಡಿರುವ ಅನುಮಾನವೂ ಇದೆ. ಆ ಬಗ್ಗೆ ತನಿಖೆ ಮುಂದುವರಿದಿದೆ' ಎಂದೂ ಹೇಳಿವೆ.

ಪೊಲೀಸರ ವರ್ಗಾವಣೆಯಲ್ಲೂ ಶಶಿಧರ್ ಕೈವಾಡ?

ಹಾಸನ: ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮಕ್ಕೆ ಸಂಬಂಧ ಸಿಐಡಿ ಅಧಿಕಾರಿಗಳು ಬಂಧಿಸಿರುವ, ಚನ್ನರಾಯಪಟ್ಟಣ ಪುರಸಭೆ ಜೆಡಿಎಸ್ ಸದಸ್ಯ ಸಿ.ಎನ್.ಶಶಿಧರ್, ಕಾನ್‌ಸ್ಟೆಬಲ್‌ಗಳ ವರ್ಗಾವಣೆ ಮಾಡಿಸುತ್ತಿದ್ದರು ಎಂಬ ಆರೋಪವಿದೆ.

ಪ್ರಭಾವಿಯಾಗಿ ಬಿಂಬಿಸಿಕೊಂಡಿದ್ದ ಅವರು, ಪರಿಚಯಸ್ಥ ಪೊಲೀಸ್ ಅಧಿಕಾರಿಗಳು ಮತ್ತು ರಾಜಕಾರಣಿಯ ಆಪ್ತರ ನೆರವಿನಿಂದ ವರ್ಗಾವಣೆ ಮಾಡಿಸುತ್ತಿದ್ದರು. ಮಕ್ಕಳಿಗೆ ನೌಕರಿ ಕೊಡಿಸುವಂತೆ ಜನ ದುಂಬಾಲು ಬೀಳುತ್ತಿದ್ದರು. ಅಧಿಕಾರಿಗಳಿಗೆ ಫೋನ್ ಮಾಡುವಂತೆ ಒತ್ತಡ ಹೇರಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು ಎನ್ನಲಾಗಿದೆ. ಶಶಿಧರ್ ಎರಡು ಬಾರಿ ಪುರಸಭೆಗೆ ಆಯ್ಕೆಯಾಗಿ, ಒಂದು ವರ್ಷ ಅಧ್ಯಕ್ಷರಾಗಿದ್ದರು. ಜೆಡಿಎಸ್ ಶಾಸಕ ಸಿ.ಎನ್. ಬಾಲಕೃಷ್ಣ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು. ಇತ್ತೀಚೆಗೆ ಬಿಜೆಪಿಗೆ ಹತ್ತಿರವಾಗಿದ್ದರು.

'ಎರಡು, ಮೂರು ದಿನದಲ್ಲಿ ಮಗ ವಾಪಸ್ ಬರಲಿದ್ದು, ನಂತರ ಎಲ್ಲ ಗೊತ್ತಾಗಲಿದೆ' ಎಂದು ಅವರ ತಂದೆ, ಪುರಸಭೆ ಮಾಜಿ ಅಧ್ಯಕ್ಷ ನಾಗರಾಜ್ ತಿಳಿಸಿದರು.



ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಸಮಾರಂಭದಲ್ಲಿ ಮಧ್ವಾಚಾರ್ಯ ಮೊಕಾಶಿ, ಡಾ. ರಂಗಾಚಾರ್, ವಿದ್ವಾನ್ ಮೋಹನ ಬೆಟ್ಟ ಜೋಶಿ, ಹಿತ್ಲಳ್ಳಿ ನಾಗೇಂದ್ರ ಭಟ್, ಡಾ. ರಾಜಗೋಪಾಲಾಚಾರ್ಯ ಮತ್ತು ವಾಸುದೇವ ದೀಕ್ಷಿತ್ ಅವರಿಗೆ 'ಸಪ್ತರ್ಷಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ, ಆರ್. ಗಣೇಶ್, ಸಚಿವ ಗೋವಿಂದ ಕಾರಜೋಳ, ಡಾ. ಶೆಲ್ವಪಿಳ್ಳೈ ಅಯ್ಯಂಗಾರ್, ಮಂಡಳಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದಮೂರ್ತಿ, ಶಾಸಕ ರವಿ ಸುಬ್ರಹ್ಮಣ್ಯ, ಮಂಡಳಿ ನಿರ್ದೇಶಕ ಶ್ರೀನಿವಾಸ್, ಸಚಿವ ಬಿ.ಸಿ. ನಾಗೇಶ್ ಮತ್ತಿತರರು ಇದ್ದರು – ಪ್ರಜಾವಾಣಿ ಚಿತ್ರ

ಸಕ್ಕರೆ ಕಾರ್ಖಾನೆಗಳಿಂದ ₹6,000 ಕೋಟಿ ಸಾಲ ಬಾಕಿ: ಸಹಕಾರ ಸಚಿವ

ಬೆಳಗಾವಿ: 'ರಾಜ್ಯದ ವಿವಿಧ ಸಕ್ಕರೆ ಕಾರ್ಖಾನೆಗಳು ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್‌ಗಳಿಂದ ಪಡೆದಿರುವ ಸಾಲದಲ್ಲಿ ₹6 ಸಾವಿರ ಕೋಟಿಗೂ ಹೆಚ್ಚು ಬಾಕಿ ಉಳಿಸಿಕೊಂಡಿವೆ. ಈ ಕಾರ್ಖಾನೆಗಳಿಗೆ, ಸಂಬಂಧಿಸಿದವರಿಗೆ ನೋಟಿಸ್ ನೀಡಲಾಗಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

'ರಮೇಶ ಜಾರಕಿಹೊಳಿ ಮಾತ್ರವಲ್ಲ, ಕಾಂಗ್ರೆಸ್‌ನ ಲಕ್ಷ್ಮಿ ಹೆಬ್ಬಾಳಕರ, ಎಸ್. ಆರ್. ಪಾಟೀಲ, ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಮೊದಲಾದವರ ಸಕ್ಕರೆ ಕಾರ್ಖಾನೆಗಳೂ ಬಾಕಿ ಉಳಿಸಿಕೊಂಡಿವೆ. 24 ಸಕ್ಕರೆ ಕಾರ್ಖಾನೆಗಳ ಸಾಲದ ಬಾಕಿ ಇದೆ' ಎಂದರು.

ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ನಡುವೆ ತೀವ್ರ ವಾಕ್ಸಮರ

ಅಶ್ವತ್ಥನಾರಾಯಣ– ಎಂ.ಬಿ. ಪಾಟೀಲ ಭೇಟಿ ವದಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಅವರನ್ನು ಗೋಪ್ಯವಾಗಿ ಭೇಟಿಮಾಡಿದ್ದಾರೆ ಎಂಬ ವದಂತಿ ಕಾಂಗ್ರೆಸ್– ಬಿಜೆಪಿ ನಾಯಕರ ನಡುವೆ ವಾಕ್ಸಮರಕ್ಕೆ ನಾಂದಿಹಾಡಿದೆ.



ಶಿವಕುಮಾರ್


ಪಿಎಸ್‌ಐ ನೇಮಕಾತಿ ಅಕ್ರಮ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಅಕ್ರಮಗಳಲ್ಲಿ ತಮ್ಮ ವಿರುದ್ಧ ವಾಗ್ದಾಳಿ ನಡೆಸದಂತೆ ಮನವೊಲಿಸಲು ಸಚಿವರು ಪಾಟೀಲರನ್ನು ಭೇಟಿಮಾಡಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

ಆದರೆ, ಅಶ್ವತ್ಥನಾರಾಯಣ ಮತ್ತು ಎಂ.ಬಿ. ಪಾಟೀಲ ಇಬ್ಬರೂ ಭೇಟಿಯ ಸುದ್ದಿಯನ್ನು ನಿರಾಕರಿಸಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್, 'ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅಶ್ವತ್ಥ ನಾರಾಯಣ ಅವರು ಎಂ.ಬಿ. ಪಾಟೀಲರನ್ನು ಭೇಟಿಮಾಡಿದ್ದಾರೆ. ತಮ್ಮ ಇಲಾಖೆಗಳ ಹಗರಣಗಳ ಬಗ್ಗೆ ಯಾರೂ ಧ್ವನಿ ಎತ್ತಬಾರದು ಎಂಬುದು ಅವರ ಉದ್ದೇಶ' ಎಂದರು.

'ಇದೊಂದು ಖಾಸಗಿ ಭೇಟಿ ಎಂದು ಅವರು ಹೇಳಬಹುದು. ಪಾಟೀಲರು ಶಿಕ್ಷಣ ಸಂಸ್ಥೆ ನಡೆಸುತ್ತಿರುವುದರಿಂದ ಅವರ ಸಲಹೆ ಪಡೆಯುವುದಕ್ಕೆ ಹೋಗಿದ್ದಾಗಿಯೂ ಸಬೂಬು ನೀಡಬಹುದು' ಎಂದರು.

'ಸಚಿವರು ಭೇಟಿ ಮಾಡಿಲ್ಲ'



ಎಂ.ಬಿ. ಪಾಟೀಲ

'ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ನಮ್ಮ ಮನೆಗೆ ಭೇಟಿ ನೀಡಿದ್ದರು ಎಂಬುದು ಸುಳ್ಳು ಮಾಹಿತಿ. ನಾವು ಭೇಟಿ ಮಾಡಿಲ್ಲ' ಎಂದು ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಒಂದು ರಾಜಕೀಯ ಪಕ್ಷದ ನಾಯಕ. ಅವರು ಸಚಿವರು. ಭೇಟಿ ಆದರೆ ತಪ್ಪಿಲ್ಲ. ನನ್ನ ಮಗ ಮತ್ತು ಅವರ ಮಕ್ಕಳು ಸಹಪಾಠಿಗಗಳು. ಅದರಲ್ಲಿ ತಪ್ಪು ಹುಡುಕಲಾಗದು' ಎಂದರು.

ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಅಶ್ವತ್ಥ ನಾರಾಯಣ ಕುಟುಂಬದ ಪಾತ್ರ ಕುರಿತ ಆರೋಪವಿದೆ. ತನಿಖೆ ನಡೆದಿರುವ ಹಂತದಲ್ಲಿ ಸಚಿವರಾಗಿ ಮುಂದುವರಿಯುವುದು ಸರಿಯಲ್ಲ. ತಕ್ಷಣ ರಾಜೀನಾಮೆ ನೀಡಬೇಕು' ಎಂದರು.

'ಡಿಕೆಶಿಗೆ ತಿಹಾರ್ ಜೈಲು ಕಾಯಂ ವಿಳಾಸ ಆಗಬೇಕಿತ್ತು'

ರಾಮನಗರ: 'ಕಾಂಗ್ರೆಸ್ ಮುಖಂಡ ಎಂ.ಬಿ. ಪಾಟೀಲ ಅವರನ್ನು ನಾನು ಭೇಟಿ ಆಗಿಲ್ಲ. ಅದರ ಅಗತ್ಯವೂ ಇಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಇಲ್ಲಿ ಪ್ರತಿಕ್ರಿಯಿಸಿದರು.




ಅಶ್ವತ್ಥನಾರಾಯಣ

ಎಂ.ಬಿ.ಪಾಟೀಲರನ್ನು ಭೇಟಿ ಮಾಡಿದ್ದೇನೆ ಎಂಬ ಡಿಕೆಶಿ ಆರೋಪ ಸುಳ್ಳು. ನಾವು ಸ್ನೇಹಿತರು. ಭೇಟಿ ಆಗಬೇಕು ಎಂದಿದ್ದರೆ, ಇವರನ್ನು ಕೇಳಿ ಆಗಬೇಕಿಲ್ಲ' ಎಂದರು. ತಿಹಾರ್ ಕಾಯಂ ವಿಳಾಸ: 'ಡಿಕೆಶಿಯನ್ನು ಬಿಜೆಪಿ ಟಾರ್ಗೆಟ್ ಮಾಡುತ್ತಿಲ್ಲ. ಅವರೊಬ್ಬ ಜೈಲು ಹಕ್ಕಿ. ಸದ್ಯ ಬೇಲ್‌ನಲ್ಲಿ ಇದ್ದಾರೆ. ಈ ಜೈಲು ಹಕ್ಕಿಯ ಕರ್ಮಕಾಂಡಕ್ಕೆ ತಿಹಾರ್ ಜೈಲು ಕಾಯಂ ವಿಳಾಸ ಆಗಬೇಕಿತ್ತು' ಎಂದು ಕುಟುಕಿದರು.

'ಜನರ ನೋವು ನಿವಾರಿಸಲಿ'

ಶಿವಮೊಗ್ಗ: 'ಬಿಜೆಪಿಯವರು ನನ್ನನ್ನು ತಿಹಾರ್ ಜೈಲು, ಪರಪ್ಪನ ಅಗ್ರಹಾರ ಸೇರಿ ಯಾವುದೇ ಜೈಲಿಗೆ ಕಳುಹಿಸಲಿ, ಚಿಂತೆ ಇಲ್ಲ. ಮೊದಲು ಜನರ ನೋವುಗಳಿಗೆ ಸ್ಪಂದಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕುಟುಕಿದರು. 'ಆಜಾನ್ ಕುರಿತು ಉತ್ತರಪ್ರದೇಶದ ಮಾದರಿ ಜಾರಿಗೆ ತರುವ ಮುನ್ನ, ಕಾನೂನು ಉಲ್ಲಂಘಿಸುವ ಬಿಜೆಪಿ ಕಾರ್ಯಕರ್ತರ ವಿರುದ್ಧ ಕ್ರಮಕೈಗೊಳ್ಳಲಿ' ಎಂದರು.





ದುರ್ಬೀನು ದರ್ಶನ!

> ಬೈನಾಕುಲರ್ ಪದದ ಅರ್ಥ, ಎರಡು ಕಣ್ಣಿನಿಂದಲೂ ನೋಡಲು ಅನುವು ಮಾಡಿಕೊಡುವ ಸಾಧನ ಎಂದು. ಎರಡು ಕಣ್ಣುಗಳಿಂದ ನೋಡಲು ಸಹಾಯ ಮಾಡುವ ಬೈನಾಕುಲರ್‌ಗಳು ಮೂಲತಃ ಸಂಕ್ಷಿಪ್ತ ರೂಪದ ಟೆಲಿಸ್ಕೋಪುಗಳೇ!

ಕ್ಷಮಾ ವಿ. ಭಾನುಪ್ರಕಾಶ್

ಪಕ್ಷಿವೀಕ್ಷಕರನ್ನು, ಕಾಡಿನ ಸಕಲವನ್ನೂ ಕಣ್ಣೊಳಗೆ ತುಂಬಿಕೊಳ್ಳುವ ಇರಾದೆಯಿಂದ ಸಫಾರಿ ಹೊರಡುವವರನ್ನು ಕೇಳಿ ನೋಡಿ? ಅವರಿಗೆ ಕ್ಯಾಮೆರಾಗಿಂತಾ ಬೈನಾಕುಲರ್ ಮುಖ್ಯವೆನಿಸುತ್ತದೆ. ಇನ್ನು ನಕ್ಷತ್ರವೀಕ್ಷಣೆಯನ್ನು, ಗ್ರಹಗಳ, ತಾರೆಗಳ, ಅಂತರಿಕ್ಷದ ಅದ್ಭುತಗಳನ್ನು ಕಲಿಯುವ, ತಿಳಿಯುವ ಆಸಕ್ತಿ ಇದ್ದವರನ್ನು ಕೇಳಿ ನೋಡಿ? ಇತ್ತೀಚಿಗೆ ಸಾಲಾಗಿ ಒಂದೇ ಗೆರೆಯಲ್ಲಿ ಬಂದು ನಿಂತ ಗ್ರಹಗಳನ್ನು ನೋಡಿ ಉದ್ಘರಿಸಿದವರೆಲ್ಲರೂ ಟೆಲಿಸ್ಕೋಪನ್ನು ಬಳಸಿದ್ದರೇ?

ಈಗ ಉದ್ದದ ಟೆಲಿಸ್ಕೋಪೇ ಬೇಕೆಂದಿಲ್ಲ, ಕೈಯಲ್ಲಿ ಸುಲಭವಾಗಿ ಹಿಡಿಯಬಹುದಾದ ಪುಟ್ಟ ದುರ್ಬೀನು ಅಥವಾ ಬೈನಾಕುಲರ್‌ನ ಸಹಾಯದಿಂದ ಅನೇಕ ಅಚ್ಚರಿದಾಯಕ ವಿದ್ಯಮಾನಗಳನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಈಗ ಟೆಲಿಸ್ಕೋಪುಗಳೂ ಪುಟಾಣಿ ಗಾತ್ರದ್ದು ದೊರಕುತ್ತವಾದರೂ, ಎರಡು ಕಣ್ಣುಗಳಿಂದ ನೋಡೋದೇ ಬೇರೆ ಅನುಭವವಲ್ಲವೇ? ಬರಿಗಣ್ಣಿಗೇ ಕಾಣುವ ಚೆಂದದ ಪಕ್ಷಿಯನ್ನು, ಬರಿಗಣ್ಣಿಗೇ ಕಾಣುವ ಮಂಗಳ, ಶುಕ್ರನಂತಹ ಗ್ರಹಗಳನ್ನು ಹತ್ತಿರದಿಂದ ಕೂಲಂಕಷವಾಗಿ ಗಮನಿಸಿ, ಮತ್ತಷ್ಟು ಅರ್ಥಮಾಡಿಕೊಳ್ಳಲು ಕುಳಿತಲ್ಲಿಂದಲೇ ಸಹಾಯ ಮಾಡುವ ಈ ಬೈನಾಕುಲರ್‌ಗಳದ್ದು ಒಂದು ಅದ್ಭುತ ಪ್ರಪಂಚ. ಇವುಗಳ ಸಹಾಯದಿಂದ ದೂರದ ಪ್ಲೂಟೋನಂತಹ ಕುಬ್ಜಗ್ರಹಗಳನ್ನೂ, ನಮ್ಮ ಕ್ಷೀರಪಥದ ಹೊರಗಿನ ಅಚ್ಚರಿಗಳನ್ನೂ ಕಾಣಬಹುದಾಗಿದೆ.

ಬೈನಾಕುಲರ್ ಪದದ ಅರ್ಥ, ಎರಡು ಕಣ್ಣಿನಿಂದಲೂ ನೋಡಲು ಅನುವು ಮಾಡಿಕೊಡುವ ಸಾಧನ ಎಂದು. ಎರಡು ಕಣ್ಣುಗಳಿಂದ ನೋಡಲು ಸಹಾಯ ಮಾಡುವ ಬೈನಾಕುಲರ್‌ಗಳು ಮೂಲತಃ ಸಂಕ್ಷಿಪ್ತ ರೂಪದ ಟೆಲಿಸ್ಕೋಪುಗಳೇ! ಎರಡು ದೂರದರ್ಶಕಗಳನ್ನು ಅಕ್ಕಪಕ್ಕದಲ್ಲಿ ಒಟ್ಟಿಗೆ ಸೇರಿಸಿ ಬೈನಾಕುಲರ್ ತಯಾರಾದಾಗ, ಎರಡು ಕಣ್ಣುಗಳಿಗೂ ಒಟ್ಟಾರೆಯಾಗಿ ಒಂದೇ ದೃಶ್ಯವು ಕಾಣುತ್ತದೆ; ಇಲ್ಲಿ ಉದ್ದ, ಅಗಲ ಹಾಗೂ ಆಳವೆಂಬ ಮೂರು ಆಯಾಮದಲ್ಲಿ ನಿಮ್ಮ ಮುಂದಿನ ದೃಶ್ಯ ನಿಮ್ಮ ದೃಷ್ಟಿಗೆ, ಅರಿವಿಗೆ ನಿಲುಕುತ್ತದೆ. ಇದನ್ನು ಸಾಧ್ಯವಾಗಿಸುವುದು, ಬೆಳಕು ಮತ್ತು ಮಸೂರಗಳ ಜೊತೆಯಾಟ. ತಂತ್ರಜ್ಞಾನವು ಮುಂದುವರಿದ ಹಾಗೆ, ಅವಶ್ಯಕತೆಗೆ ತಕ್ಕಂತೆ ಬೈನಾಕುಲರ್‌ಗಳ ತಯಾರಿಯಲ್ಲೂ ಅನೇಕ ಬದಲಾವಣೆಗಳು ಆಗಿವೆ. ಬಾಹ್ಯಾಕಾಶದ ಕಲಿಕೆಗೆ ಒಂದು ಬಗೆಯದ್ದಾದರೇ, ಸಮುದ್ರಯಾನಕ್ಕೆ ಮತ್ತೊಂದು, ಪಕ್ಷಿವೀಕ್ಷಣೆಗೆ ಒಂದು ಬಗೆಯದ್ದಾದರೇ ಭೂವೈಜ್ಞಾನಿಕ ಸಮೀಕ್ಷೆಗಳ ಬಳಕೆಗೆ ಮತ್ತೊಂದು ಬಗೆ, ಇನ್ನು ಸೈನ್ಯದಲ್ಲಿ ಅಪಾಯವನ್ನು ಮುಂಚಿತವಾಗಿ ಗುರುತಿಸಲು ಬಳಸುವ ಬೈನಾಕುಲರ್‌ನ ತಂತ್ರಜ್ಞಾನ – ಇವೆಲ್ಲ ಬೈನಾಕುಲರ್‌ಗಳಿಗಿಂತ ಭಿನ್ನವೇ. ಇಲ್ಲಿ ಶತ್ರುಗಳು ಬಳಸುವ ಲೇಸರ್ ಆಯುಧಗಳ ಕಿರಣಗಳಿಂದ ಕಣ್ಣುಗಳನ್ನು ರಕ್ಷಿಸಿಕೊಳ್ಳೋಕೆ ಫಿಲ್ಟರ್‌ಗಳು, ನಿಗದಿತ ಗುರಿಯನ್ನು ಗುರುತಿಸಲು ಲೇಸರ್‌ನ ಬಳಕೆ ಇತ್ಯಾದಿ ನವೀನತೆಯನ್ನು ದಿನದಿನಕ್ಕೂ ಹೊಸ ಸಂಶೋಧನೆಗಳ ಮೂಲಕ ಸಾಧ್ಯವಾಗಿಸಲಾಗುತ್ತಿದೆ.

ನಿಮ್ಮೆದುರಿಗಿನ ದೃಶ್ಯವನ್ನು 7ರಿಂದ 8 ಪಟ್ಟು ವರ್ಧನೆಯಿಂದ ಮೊದಲ್ಗೊಂಡು 80 ಪಟ್ಟು ಹಿರಿದಾಗಿಸುವಿಕೆಯವರೆಗೂ ಸಾಧ್ಯವಾಗಿಸಿದೆ ಇಂದಿನ ಮುಂದುವರೆದ ತಂತ್ರಜ್ಞಾನ. ಅತ್ಯಂತ ಕಡಿಮೆ ಬೆಳಕಿನಲ್ಲೂ ಅಥವಾ ಸಂಪೂರ್ಣ ಕತ್ತಲೆಯಲ್ಲೂ ದೂರದ ವಸ್ತುವೋ ಜೀವಿಯೋ ನಮ್ಮ ಕಣ್ಣಿಗೆ ವಿಷದವಾಗಿ ಕಾಣುವಂತೆ ಮಾಡುವ ಬಗೆಬಗೆಯ ಬೈನಾಕುಲರ್‌ಗಳಿವೆ. ಇರುವ ಅತ್ಯಂತ ಕಡಿಮೆ ಬೆಳಕನ್ನೇ ಬಳಸಿಕೊಂಡು, ಅದನ್ನು




ಅನೇಕ ಪಟ್ಟು ಹೆಚ್ಚಿಸಿಕೊಂಡು, ಎದುರಿಗಿನ ದೃಶ್ಯ ಕಾಣುವಂತೆ ಮಾಡುವುದು ನೈಟ್ ವಿಶನ್ ಬೈನಾಕುಲರ್‌ಗಳಾದರೆ, ಸಂಪೂರ್ಣ ಕತ್ತಲೆಯಲ್ಲೂ ಎದುರಿಗಿನ ವಸ್ತು ಅಥವಾ ಜೀವಿಯ ತಾಪಮಾನವನ್ನು ಆಧರಿಸಿ, ನಮಗೆ ಅವು ಗೋಚರಿಸುವಂತೆ ಮಾಡುವುದು ಥರ್ಮಲ್ ಬೈನಾಕುಲರ್‌ಗಳು. ಕಡಿಮೆ ಬೆಳಕಿನಲ್ಲೂ ಕೆಲಸ ಮಾಡುವ ಬೈನಾಕುಲರ್‌ಗಳಲ್ಲಿ ಶಕ್ತ ಮಸೂರಗಳನ್ನು ಬಳಸಲಾಗಿದ್ದರೆ, ಈ ಉಷ್ಣತೆ ಆಧಾರಿತ ಬೈನಾಕುಲರ್‌ಗಳಲ್ಲಿ ಇನ್‌ಫ್ರಾರೆಡ್ ಸಂವೇದಕಗಳನ್ನು ಬಳಸಲಾಗುತ್ತದೆ. ಪ್ರತಿ ಜೀವಿಯೂ ಅಥವಾ ವಸ್ತುವೂ ಒಂದು ಮಟ್ಟದಲ್ಲಿ ಶಾಖವನ್ನು ಹೊರಹಾಕುವುದು ನಡೆದೇ ಇರುತ್ತದೆ. ಅದು ಸಾಮಾನ್ಯವಾಗಿ ಅತಿಗೆಂಪು ಕಿರಣಗಳಾಗಿದ್ದು, ಅದನ್ನು ಈ ಥರ್ಮಲ್ ಬೈನಾಕುಲರ್‌ಗಳಲ್ಲಿರುವ ಸಂವೇದಕಗಳು ಗುರುತಿಸುತ್ತವೆ. ಹಾಗಾಗಿ, ಒಂದು ಜೀವಿಯು ಚಲಿಸಿದರೆ, ಅದರ ಮೈಯ ಪ್ರಭಾವಳಿಯಂತೆ ಕಾಣಿಸುತ್ತಿರುವ ಅತಿಗೆಂಪು ಕಿರಣಗಳು ಕೂಡ ಚಲಿಸುತ್ತವೆ. ಇಂತಹ ವಿಶಿಷ್ಟ ಬೈನಾಕುಲರ್‌ಗಳ ಮೂಲಕ, ಆ ಜೀವಿಯ ಆಕಾರ ಮತ್ತು ಗಾತ್ರದಲ್ಲಿಯೇ ಈ ಅತಿಗೆಂಪು ಕಿರಣಗಳ ಪ್ರಭಾವಳಿಯು ನಮಗೆ ಕಾಣಿಸುತ್ತದೆ. ಆದರೆ, ನೈಟ್ ವಿಷನ್ ಬೈನಾಕುಲರ್‌ಗಳಿಗೆ ಕೊಂಚವಾದರೂ ಬೆಳಕು ಬೇಕಲ್ಲ? ಆ ಬೆಳಕು ಹೊರಗಿನ ಇಂತಹ ಶಾಖದ ಕಿರಣಗಳಿಂದ ದೊರೆತರೂ ಆಯ್ತು ಅಥವಾ ಒಳಗಿನ ಇನ್‌ಫ್ರಾರೆಡ್ ಇಲ್ಯುಮಿನೇಟರ್‌ನ ಸಹಾಯದಿಂದಲೂ ಆದೀತು. ಇಂತಹ ವಿನೂತನ ಬೈನಾಕುಲರ್‌ಗಳಲ್ಲಿ ಐ.ಆರ್.ಐ. ಎಂಬ ಗುಂಡಿಯನ್ನು ಒತ್ತಿದರೆ ಸಾಕು, ಎಂತಹ ಕತ್ತಲಲ್ಲೂ ನಿಮ್ಮೆದುರಿಗಿನ ದೃಶ್ಯವು ವಿವರವಾಗಿ ನಿಮಗೆ ಗೋಚರಿಸುತ್ತದೆ. ಇಲ್ಲಿ, ಇಂತಹ ಬೈನಾಕುಲರ್‌ನ ಒಳಗೇ ಬೆಳಗಲು ಸಿದ್ಧವಾಗಿರುವ ಅತಿಗೆಂಪು ಕಿರಣಗಳ ಮೂಲವಿರುತ್ತದೆ. ಅದು, ನಿಮಗೆ ಬೇಕೆಂದಾಗ ಅತಿಗೆಂಪು ಕಿರಣಗಳ ಹೊನಲು ಹರಿಸಿ, ಕಾಣದ್ದನ್ನು ಕಾಣುವ ಹಾಗೆ ಮಾಡುತ್ತದೆ. ಇನ್ನು, ಕಾಣದ್ದು ದೊಡ್ಡದಾಗಿ ಕಾಣುವಂತೆ ಮಾಡಲು ಹಿರಿದಾಗಿಸುವ ಮಸೂರಗಳು ಇದ್ದೇ ಇವೆಯಲ್ಲ!

ಈ ಮಸೂರಗಳಂತೂ ಅವೆಷ್ಟು ಬಗೆಬಗೆ! ಬೈನಾಕುಲರ್‌ಗಳಲ್ಲಿ ನಿಮ್ನ, ಪೀನಮಸೂರಗಳಲ್ಲದೇ ವಿವಿಧ ಬಗೆಯ, ಗಾತ್ರದ ಪ್ರಿಸಮ್‌ಗಳನ್ನೂ ಬಳಕೆ ಮಾಡಲಾಗುತ್ತದೆ. ಇಲ್ಲಿ ಪ್ರಿಸಮ್‌ಗಳ ಮುಖಾಂತರ ಬೆಳಕನ್ನು ಕೇಂದ್ರೀಕರಿಸಲು ಮತ್ತು ಪ್ರತಿಫಲಿತ ಚಿತ್ರವನ್ನು ಸರಿಯಾದ ಕೋನದಲ್ಲಿ ಕಾಣಿಸಲು ಸಾಧ್ಯವಾಗುತ್ತದೆ. ನಮ್ಮ ಮುಂದಿರುವ ದೃಶ್ಯವು ದುರ್ಬೀನಿನ ಮಸೂರಗಳು ಮತ್ತು ಪ್ರಿಸಮ್ ಇರುವ ಕೊಳವೆಗಳ ಮೂಲಕ ಹಾಯ್ದು ಬರುವಾಗ, ಸಣ್ಣ ಗಾತ್ರದ ಅಥವಾ ದೂರದ ದೃಶ್ಯವು ತಲೆಕೆಳಗಾಗಿ, ನಂತರ ಮತ್ತೆ ನೇರವಾಗಿ, ಹಿರಿದಾಗಿ ಗೋಚರಿಸುತ್ತದೆ. ಇಲ್ಲಿ, ಅಗತ್ಯಕ್ಕಿಂತ ಹೆಚ್ಚಿನ ಬೆಳಕು ಮಸೂರಗಳ ಮೂಲಕ ಹಾದು, ನಮ್ಮ ಕಣ್ಣಿಗೆ ಸಮಸ್ಯೆ ಒಡ್ಡಬಾರದೆಂದು ಅನೇಕ ಭೌತರಾಸಾಯನಿಕ ಲೇಪನಗಳನ್ನು, ಶೋಧಕಗಳನ್ನು ಅಳವಡಿಸಲಾಗುತ್ತದೆ ಕೂಡ. ಅವು ಈ ಪ್ರತಿಫಲನಕ್ಕೊಂದು ಲಗಾಮು ಹಾಕಿ, ಹೆಚ್ಚುವರಿ ಕಿರಣಗಳನ್ನು ನಿಯಂತ್ರಿಸುತ್ತವೆ.

ಕ್ಯಾಮೆರಾ ಒಂದು, ಬೈನಾಕುಲರ್ ಮತ್ತೊಂದು, ಎಂದು ಹೊತ್ತೊಯ್ಯುವ ಅಗತ್ಯವಿಲ್ಲದಂತೆ ಮಾಡಿರುವುದು ಎರಡೂ ತಂತ್ರಜ್ಞಾನವನ್ನು ಮಿಳಿತಗೊಳಿಸಿರುವ ಡಿಜಿಟಲ್ ಬೈನಾಕುಲರ್‌ಗಳು. ಇಲ್ಲಿ ದುರ್ಬೀನುಗಳ ಜೊತೆಗೆ ಕ್ಯಾಮೆರಾದ ಜೋಡಣೆಯಿರುವ ಕಾರಣ, ನಿಮಗೆ ಒಂದು ಪುಟ್ಟ ಪರದೆಯ ಮೇಲೆ ವರ್ಧಿತ ಚಿತ್ರ ಗೋಚರಿಸುತ್ತದೆ. ಕಣ್ಣುಗಳನ್ನು ಕಿರಿದಾಗಿಸಿ, ಲೆನ್ಸ್‌ನ ಮೂಲಕ ಕೇಂದ್ರೀಕರಿಸಬೇಕಿಲ್ಲ. ಇಲ್ಲಿ ದುರ್ಬೀನು ಹಾಗೂ ಕ್ಯಾಮೆರಾ – ಎರಡರದ್ದೂ ಒಂದೇ ಮಟ್ಟದ ವರ್ಧನೆಯಿದ್ದು, ಹಿರಿದಾಗಿಸಲಾದ ದೃಶ್ಯದ ಚಿತ್ರವನ್ನೂ ಕ್ಲಿಕ್ಕಿಸಬಹುದು, ವಿಡಿಯೊ ಮಾಡಬಹುದು ಕೂಡ. ಬೈನಾಕುಲರ್ ಕೊಳ್ಳುವ ಇರಾದೆಯಿದ್ದರೆ, ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ನಿಮ್ಮ ಆಸಕ್ತಿ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಮಾಡುವುದು ಸೂಕ್ತ. ❖


ರಿಪೇರಿಗೂ ಇದೆ ಹಕ್ಕು!



ಕೃಷ್ಣ ಭಟ್

ಮನೆಯಲ್ಲಿರುವ ಎಲೆಕ್ಟ್ರಾನಿಕ್ ಸಾಮಗ್ರಿಗಳ ‘ರಿಪೇರಿ’ ಎಂಬ ಶಬ್ದವನ್ನೇ ನಾವು ಬಹುತೇಕ ಮರೆತಿದ್ದೇವೆ. ಮೊಬೈಲ್ ಹಾಳಾದರೆ ರಿಪೇರಿ ಮಾಡಿಸುವುದಿಲ್ಲ. ಬದಲಿಗೆ ಅದನ್ನು ಎಸೆದು ಹೊಸ ಮೊಬೈಲ್ ತರುತ್ತೇವೆ. ಸ್ಮಾರ್ಟ್‌ವಾಚ್‌ನಂತಹ ಸಣ್ಣ ಗ್ಯಾಜೆಟ್‌ಗಳಿಂದ ಲ್ಯಾಪ್‌ಟಾಪ್, ಟಿವಿಯಂತಹ ದೊಡ್ಡ ಗ್ಯಾಜೆಟ್‌ಗಳೂ ಈಗ ರಿಪೇರಿಗೆ ಆದ್ಯತೆ ನೀಡುತ್ತಿಲ್ಲ. ಬದಲಿಗೆ, ಅವು ಹಾಳಾದ ಮೇಲೆ ಎಸೆದು ಹೊಸ ಗ್ಯಾಜೆಟ್‌ಗಳನ್ನು ತರುವುದಕ್ಕೇ ಆದ್ಯತೆ ನೀಡುತ್ತೇವೆ.

ಇದಕ್ಕೆ ಪೂರಕವಾಗಿ ಇಂಥ ಗ್ಯಾಜೆಟ್‌ಗಳನ್ನು ಬಳಸುವ ತಮ್ಮ ಗ್ರಾಹಕರನ್ನು ಗ್ಯಾಜೆಟ್‌ಗಳ ಮಾಲೀಕರು ಎಂದು ಪರಿಗಣಿಸುವುದಿಲ್ಲ; ಅವರನ್ನು ಬಳಕೆದಾರರು ಎಂದು ಪರಿಗಣಿಸುತ್ತದೆ. ಅಂದರೆ, ಆ ಗ್ಯಾಜೆಟ್ ಅನ್ನು ಅವರು ಬಳಸುತ್ತಿದ್ದಾರೆ ಅಷ್ಟೇ! ಆ ಸಾಧನದಲ್ಲಿ ಯಾವುದೇ ಬದಲಾವಣೆ ಮಾಡುವುದಿದ್ದರೂ ಅದನ್ನು ನಮ್ಮ ಸರ್ವೀಸ್ ಸೆಂಟರ್‌ಗೇ ತೆಗೆದುಕೊಂಡು ಬರಬೇಕು ಮತ್ತು ಸರ್ವೀಸ್ ಸೆಂಟರ್‌ನಲ್ಲಿ ಯಾವ ರಿಪೇರಿ ಸಾಧ್ಯವಿದೆಯೋ ಅದಷ್ಟನ್ನೇ ಮಾಡಿಸಬೇಕು ಎಂಬಂಥ ಮನೋಭಾವ ಎಲೆಕ್ಟ್ರಾನಿಕ್ ಗ್ಯಾಜೆಟ್ ಕಂಪನಿಗಳಲ್ಲಿ ಬೆಳೆದಿದೆ.



ಇದನ್ನು ಹೋಗಲಾಡಿಸಿ, ರಿಪೇರಿಗೂ ಹೆಚ್ಚಿನ ಆದ್ಯತೆ ನೀಡಬೇಕು ಎಂಬುದಕ್ಕಾಗಿ ಒಂದು ಹೋರಾಟವೇ ನಡೆಯುತ್ತಿದೆ. ಅಮೆರಿಕದಲ್ಲಿ ಇದಕ್ಕೆ ಸಂಬಂಧಿಸಿದ ಕಾನೂನನ್ನೂ ತರಲಾಗಿದೆ. ಈ ರಿಪೇರಿ ಹೋರಾಟದ ಮುಂಚೂಣಿಯಲ್ಲಿ ಪರಿಸರಪ್ರೇಮಿ ಸಂಸ್ಥೆಗಳೇ ಇವೆ. ಎಲೆಕ್ಟ್ರಾನಿಕ್ ಸಾಮಗ್ರಿಗಳನ್ನು ರಿಪೇರಿ ಮಾಡದೇ ಇರುವುದರಿಂದ ಅವುಗಳ ಬಾಳಿಕೆ ಅವಧಿ ಕಡಿಮೆಯಾಗಿ, ಬೇಗ ಇ–ತ್ಯಾಜ್ಯವಾಗುತ್ತದೆ. ಅದರಿಂದ, ಇ–ತ್ಯಾಜ್ಯದ ಪ್ರಮಾಣ ಹೆಚ್ಚಳವಾಗುತ್ತದೆ. ಹೀಗಾಗಿ, ಗ್ರಾಹಕರಿಗೆ ಹೊಸದನ್ನು ಕೊಳ್ಳುವಂತೆ ಪ್ರೇರೇಪಿಸುವ ವ್ಯವಸ್ಥೆಗಿಂತ ರಿಪೇರಿ ಮಾಡಿಸಿಕೊಳ್ಳುವುದಕ್ಕೇ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂಬುದು ಈ ಸಂಸ್ಥೆಗಳ ಬೇಡಿಕೆ.


ಇದಕ್ಕೆ ಹೆಚ್ಚಿನ ಪ್ರತಿರೋಧ ಬಂದಿದ್ದು ಕೂಡ ದೊಡ್ಡ ದೊಡ್ಡ ಸಂಸ್ಥೆಗಳಿಂದಲೇ. ಆದರೆ, ಈಗ ಅಂತಹ ಸಂಸ್ಥೆಗಳೇ ಪ್ರತಿರೋಧಕ್ಕೆ ತಲೆಬಾಗಲು ಶುರು ಮಾಡಿವೆ. ಇತ್ತೀಚೆಗಷ್ಟೇ ಗೂಗಲ್ ತನ್ನ ಪಿಕ್ಸೆಲ್ ಫೋನ್‌ಗಳನ್ನು ಗ್ರಾಹಕರೇ ರಿಪೇರಿ ಮಾಡಿಕೊಳ್ಳಲು ಅನುವಾಗುವ ಹಾಗೆ ಇನ್ನಷ್ಟು ಆಯ್ಕೆಗಳನ್ನು ನೀಡಲಾಗುತ್ತದೆ ಎಂದು ಹೇಳಿದೆ. ಕಳೆದ ಮಾರ್ಚ್‌ನಲ್ಲಿ ಸ್ಯಾಮ್‌ಸಂಗ್ ತನ್ನ ಗ್ಯಾಲಾಕ್ಸಿ ಸರಣಿಯ ಫೋನ್‌ಗಳಿಗೆ ಸ್ವಯಂ ರಿಪೇರಿ ಪ್ರೋಗ್ರಾಮ್ ಅನ್ನು ಆರಂಭಿಸಿದೆ. ಇನ್ನು ಕಳೆದ ವರ್ಷ ಆ್ಯಪಲ್ ಕೂಡ ಆ್ಯಪಲ್ ಫೋನ್‌ಗಳಿಗೆ ಸ್ವಯಂ ರಿಪೇರಿ ಸೌಲಭ್ಯವನ್ನು ಒದಗಿಸಿದೆ. ಇದರಲ್ಲಿ 200ಕ್ಕೂ ಹೆಚ್ಚು ಅಸಲಿ ಬಿಡಿಭಾಗಗಳನ್ನು ಇದು ಒದಗಿಸುತ್ತಿದೆ.

ರಿಪೇರಿಗೆ ಒತ್ತು ನೀಡದೇ ಹೊಸದನ್ನೇ ಖರೀದಿಸಲು ಪ್ರೋತ್ಸಾಹಿಸುವುದರ ಹಿಂದೆ ಹಲವು ಕಾರಣಗಳಿವೆ. ಬಹುಮುಖ್ಯವಾಗಿ ಹೊಸ ಹೊಸ ಫೀಚರ್‌ಗಳು ಕಾಲಕಾಲಕ್ಕೆ ಅಪ್‌ಡೇಟ್ ಆಗುವುದರಿಂದ, ಅವುಗಳ ಹೆಸರಿನಲ್ಲಿ ಹೊಸ ಗ್ರಾಹಕರನ್ನು ಕಂಡುಕೊಳ್ಳುವುದಕ್ಕಾಗಿ ಕಂಪನಿಗಳು ಹೊಸ ಹೊಸ ಮಾಡೆಲ್‌ಗಳನ್ನು ಬಿಡುಗಡೆ ಮಾಡುತ್ತಲೇ ಇರುತ್ತವೆ. ಇದರಿಂದ ಗ್ರಾಹಕರು ಅಗತ್ಯವಿದ್ದೋ ಇಲ್ಲದೆಯೋ ಹಳೆಯ ಮಾಡೆಲ್‌ಗಳ ಬದಲಿಗೆ ಹೊಸ ಹೊಸ ಮಾಡೆಲ್‌ಗಳನ್ನು ಖರೀದಿಸುತ್ತಿರುತ್ತಾರೆ. ಇದರ ಜೊತೆಗೆ, ಈಗಾಗಲೇ ಕಂಪನಿಗಳು ತಮ್ಮದೇ ಸರ್ವೀಸ್ ಸೆಂಟರ್‌ಗಳನ್ನು ಹೊಂದಿದ್ದರೂ, ಅಲ್ಲಿ ಕೆಲವು ಪ್ರಮುಖ ಬಿಡಿಭಾಗಗಳಿಗೆ ವಿಪರೀತ ದರವಿರುತ್ತದೆ. ಉದಾಹರಣೆಗೆ, ಸ್ಮಾರ್ಟ್‌ಫೋನ್ ಡಿಸ್‌ಪ್ಲೇ ಒಡೆದುಹೋದರೆ, ಅದನ್ನು ಬದಲಿಸುವುದಕ್ಕೆ ಇರುವ ದರ ಹೊಸ ಸ್ಮಾರ್ಟ್‌ಫೋನ್ ಖರೀದಿಗೆ ಸಮೀಪದಲ್ಲೇ ಇರುತ್ತದೆ. ಅದೂ ಅಲ್ಲದೆ, ಡಿಸ್‌ಪ್ಲೇ ಸುಲಭದಲ್ಲಿ ಸಿಗುವಂತೆಯೂ ಇರುವುದಿಲ್ಲ. ಗ್ರಾಹಕರು ಸರ್ವೀಸ್ ಸೆಂಟರ್‌ಗೆ ತಮ್ಮ ಸ್ಮಾರ್ಟ್‌ಫೋನ್ ತೆಗೆದುಕೊಂಡು ಹೋಗಿ ನೀಡಿದ ನಂತರ ವಾರಗಟ್ಟಲೆ ಸಮಯ ತೆಗೆದುಕೊಳ್ಳುತ್ತದೆ. ಇನ್ನು ಕೆಲವು ಸುಲಭ ಬದಲಾವಣೆಗಳನ್ನು ಮಾಡಿಕೊಳ್ಳಲು ಕಾಲಾನಂತರದಲ್ಲಿ ಕಂಪನಿಗಳೇ ತಡೆ ಒಡ್ಡುತ್ತವೆ. ಈ ಹಿಂದೆ, ಸ್ಮಾರ್ಟ್‌ಫೋನ್‌ನ ಹಿಂಬದಿ ಕವರ್ ತೆಗೆದರೆ ಅದರ ಬ್ಯಾಟರಿಯನ್ನು ಹೊರತೆಗೆಯಬಹುದಾಗಿತ್ತು. ಒಂದು ವೇಳೆ ಬ್ಯಾಟರಿ ಹಾಳಾದರೆ ಅದನ್ನಷ್ಟನ್ನೇ ತೆಗೆದು ಹೊಸದನ್ನು ಸೇರಿಸಿಕೊಳ್ಳುವ ಅವಕಾಶವಿತ್ತು. ಆದರೆ, ಕಾಲಾನಂತರದಲ್ಲಿ ಬ್ಯಾಟರಿಯನ್ನು ತೆಗೆಯಲು ಸಾಧ್ಯವಾಗದ ಹಾಗೆ ಕಂಪನಿಗಳೇ ಅದನ್ನು ಪ್ಯಾಕ್ ಮಾಡಿರುತ್ತವೆ. ಈ ಹಿಂದೆ, ಸ್ಮಾರ್ಟ್‌ಫೋನ್‌ನ ಒಂದು ಮಾಡೆಲ್ ಒಂದೇ ರೀತಿ ಇರುತ್ತಿದ್ದವು. ನಮ್ಮ ಸ್ಟೋರೇಜ್ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಮೆಮೊರಿ ಕಾರ್ಡ್ ಅನ್ನು ಸೇರಿಸುವ ಅವಕಾಶವಿತ್ತು. ಆದರೆ, ಕಾಲಾನಂತರದಲ್ಲಿ ಬೇರೆ ಬೇರೆ ಮೆಮೊರಿ ಆಯ್ಕೆ ಇರುವ ಸ್ಮಾರ್ಟ್‌ಫೋನ್‌ಗಳನ್ನು ಕಂಪನಿಗಳು ಬಿಡುಗಡೆ ಮಾಡಲು ಶುರು ಮಾಡಿದವು. ಇದರಿಂದಾಗಿ, ಮೆಮೊರಿ ಅಗತ್ಯ ಹೆಚ್ಚಿದರೆ ಹೊಸ ಸ್ಮಾರ್ಟ್‌ಫೋನ್‌ನನ್ನೇ ಖರೀದಿ ಮಾಡುವ ಅನಿವಾರ್ಯ ಗ್ರಾಹಕರಿಗೆ ಉಂಟಾಯಿತು.

ಇದಲ್ಲದೆ, ಈಗ ಕಂಪನಿಗಳು ತಮ್ಮ ಸ್ಮಾರ್ಟ್‌ಫೋನ್, ಗ್ಯಾಜೆಟ್‌ನ ವಿನ್ಯಾಸವನ್ನೇ ಪೇಟೆಂಟ್ ಮಾಡಿರುತ್ತವೆ. ಹೀಗಾಗಿ ರಿಪೇರಿಯ ಮೂಲಕ ಯಾವುದೇ ಬದಲಾವಣೆ ಮಾಡಲು ಪೇಟೆಂಟ್‌ನಿಂದಾಗಿ ಅಡ್ಡಿಯಾಗುತ್ತದೆ.

ಈ ರಿಪೇರಿ ಹಕ್ಕು ಅಭಿಯಾನ ಯುರೋಪ್ ದೇಶಗಳಲ್ಲಿ ಹೆಚ್ಚು ಸದ್ದು ಮಾಡುತ್ತಿದೆ. ಭಾರತದಲ್ಲಿ ಈ ವಿಚಾರ ಅಷ್ಟೇನೂ ಹೆಚ್ಚು ಪ್ರಮುಖವಾಗಿ ಕೇಳಿಬರುತ್ತಿಲ್ಲ. ಆದಾಗ್ಯೂ, ಭಾರತದಲ್ಲಿ ರಿಪೇರಿಗೆ ಇನ್ನೂ ಜನರು ಒಲವು ತೋರುತ್ತಿದ್ದಾರೆ. ಸರ್ವೀಸ್ ಸೆಂಟರ್ ಬಳಕೆಯೂ ಭಾರತದಲ್ಲಿ ಒಂದು ಹಂತದ ಮಟ್ಟಿಗೆ ನಡೆಯುತ್ತಿದೆ. ಆದರೆ, ಈಗಲೇ ಎಚ್ಚೆತ್ತು ಇದಕ್ಕೆ ಸಂಬಂಧಿಸಿದ ನೀತಿ ನಿಯಮಗಳನ್ನು ರೂಪಿಸಬೇಕಿದೆ. ಎಲೆಕ್ಟ್ರಾನಿಕ್ ಸಾಮಗ್ರಿಗಳ ರಿಪೇರಿಗೆ ಹೆಚ್ಚು ಒತ್ತು ನೀಡಿದರೆ ಆಗುವ ಪ್ರಮುಖ ಅನುಕೂಲ ಎಂದರೆ ಇ-ತ್ಯಾಜ್ಯದ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಆದರೆ, ಇದರ ಪ್ರಮುಖ ಅನಾನುಕೂಲ ಎಂದರೆ, ಹೊಸ ತಂತ್ರಜ್ಞಾನ ಬೇಗ ಜನರ ಕೈಗೆ ಸಿಗುವುದಿಲ್ಲ. ತಂತ್ರಜ್ಞಾನ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಹೊಸ ಗ್ರಾಹಕರನ್ನು ಹುಡುಕಿಕೊಳ್ಳಬೇಕೇ ಹೊರತು, ಈಗಾಗಲೇ ಹಳೆಯ ಮಾದರಿಯನ್ನು ಬಳಸುತ್ತಿರುವ ಗ್ರಾಹಕರಿಗೆ ಹೊಸದನ್ನು ಖರೀದಿಸುವಂತೆ ಮನವೊಲಿಸುವುದು ಕಷ್ಟವಾಗಲಿದೆ. ಇದರಿಂದ, ಎಲೆಕ್ಟ್ರಾನಿಕ್ ಸಾಧನ ಉತ್ಪಾದನೆಯನ್ನು ಮಾಡುವ ಕಂಪನಿಗಳ ಆದಾಯದ ಮೇಲೆ ಹೊಡೆತ ಬೀಳಬಹುದು. ❖

ಬಾಹ್ಯಾಕಾಶದಲ್ಲಿ ‘ಶಕುಂತಲೆ’



ಉದಯ ಶಂಕರ ಪುರಾಣಿಕ

ಬಾಹ್ಯಾಕಾಶ ಕ್ಷೇತ್ರದಲ್ಲಿ ಸಂಚಲನವನ್ನು ಸೃಷ್ಟಿಸಿರುವ ‘ಶಕುಂತಲೆ’, ಭಾರತೀಯರ ಮತ್ತು ವಿಶೇಷವಾಗಿ ಕನ್ನಡಿಗರ ಹಿರಿಮೆ, ಗರಿಮೆಯನ್ನು ಹೆಚ್ಚಿಸಿದ್ದಾಳೆ. ಚಿಕ್ಕಮಗಳೂರು ಜಿಲ್ಲೆಯ ಆಲ್ದೂರಿನ ಯುವಕ ಅವೇಜ್ ಅಹ್ಮದ್, ಬೆಂಗಳೂರಿನಲ್ಲಿ ಸ್ಥಾಪಿಸಿರುವ ‘ಪಿಕ್ಸೆಲ್’ ಹೆಸರಿನ ಬಾಹ್ಯಾಕಾಶ ಸಂಸ್ಥೆ ಅಭಿವೃದ್ಧಿ ಮಾಡಿರುವ ಉಪಗ್ರಹದ ಹೆಸರು ಶಕುಂತಲೆ. ಎಲಾನ್ ಮಸ್ಕ್ ಅವರ ‘ಸ್ಪೇಸೆಕ್ಸ್’ ಸಂಸ್ಥೆಯಿಂದ ಉಡಾವಣೆ ಮಾಡಿ, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಶಕುಂತಲೆ, ಭಾರತದಲ್ಲಿ ಖಾಸಗಿ ಸಂಸ್ಥೆಯೊಂದು ಅಭಿವೃದ್ಧಿ ಮಾಡಿ, ನಿರ್ವಹಿಸುತ್ತಿರುವ ಮೊದಲ ವಾಣಿಜ್ಯ ಬಳಕೆಯ ಉಪಗ್ರಹವೆಂದು ಇತಿಹಾಸ ಸೃಷ್ಟಿಸಿದ್ದಾಳೆ.

ಕಿರಿಯ ಗಾತ್ರದ ಉಪಗ್ರಹಗಳನ್ನು ಬಳಸಿ, ಹವಾಮಾನ ಮಾಹಿತಿ, ಕೃಷಿ, ಮಳೆ, ಬೆಳೆ ಇತ್ಯಾದಿ ಮಾಹಿತಿಯನ್ನು ಸಂಗ್ರಹಿಸಲು ಬಾಹ್ಯಾಕಾಶ ಕ್ಷೇತ್ರದ ನವೋದ್ಯಮಗಳು ಮುಂದಾಗಿವೆ. ವಾರ್ಷಿಕ 710 ಕೋಟಿ ಡಾಲರ್ ಮೌಲ್ಯದ ಈ ಮಾರುಕಟ್ಟೆಯಲ್ಲಿ ಭಾರತದ ಫಿಕ್ಸೆಲ್ ಸಂಸ್ಥೆ ಶಕುಂತಲೆ ಉಪಗ್ರಹದ ಮೂಲಕ ತನ್ನ ಕೆಲಸವನ್ನು ಆರಂಭಿಸಿದೆ.

ಇಸ್ರೋ, ನಾಸಾದಂತಹ ಸಂಸ್ಥೆಗಳ ಉಪಗ್ರಹಗಳು ಹವಾಮಾನ ಮಾಹಿತಿ, ಕೃಷಿ ಮಾಹಿತಿ ಇತ್ಯಾದಿಯನ್ನು ನೀಡುತ್ತಿರುವಾಗ, ಫಿಕ್ಸೆಲ್‌ನಂತಹ ಸಂಸ್ಥೆಗಳು ಶಕುಂತಲೆಯಂತಹ 15 ಕೆಜಿಗೂ ಕಡಿಮೆ ತೂಕದ ಉಪಗ್ರಹದ ನೆರವಿನಿಂದ ಮಾಡುವುದೇನು ಎನ್ನುವ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ.

ಮೊದಲ ಹಂತದಲ್ಲಿ ಶಕುಂತಲೆಯಂತಹ ಹಲವಾರು ಉಪಗ್ರಹಗಳನ್ನು ಅಭಿವೃದ್ಧಿ ಮಾಡಿ, ಉಡಾವಣೆ ಹಾಗೂ ನಿರ್ವಹಣೆ ಮಾಡುವ ಉದ್ದೇಶವನ್ನು ಫಿಕ್ಸೆಲ್ ಸಂಸ್ಥೆ ಹೊಂದಿದೆ. ಹೀಗೆ ಮಾಡುವುದರಿಂದ, ದಿನದ 24 ಗಂಟೆಗಳ ಕಾಲ ನಿರಂತರವಾಗಿ ಮಾಹಿತಿಯನ್ನು ಸಂಗ್ರಹಿಸುವ, ವಿಶ್ಲೇಷಣೆ ಮಾಡುವ ಕೆಲಸವನ್ನು ಈ ಸಂಸ್ಥೆ ಮಾಡಲಿದೆ. ಹೈಫರ್‌ಸ್ಪೆಕ್ಟ್ರಲ್ ಇಮೇಜಿಂಗ್ ತಂತ್ರಜ್ಞಾನವನ್ನು ಬಳಸಿದ ಜಗತ್ತಿನಲ್ಲಿ ಅತ್ಯಂತ ಸಮರ್ಥವಾದ ಉಪಗ್ರಹವೆಂದು ಶಕುಂತಲೆ ಇತಿಹಾಸ ಸೃಷ್ಟಿಸಿದ್ದಾಳೆ.

ಶಕುಂತಲೆ ನೀಡುವ ಮಾಹಿತಿ ನಮ್ಮ ರೈತರಿಗೆ ಹೇಗೆ ಉಪಯೋಗವಾಗುತ್ತದೆ ಎಂದು ತಿಳಿದುಕೊಳ್ಳೋಣ.

1. ಮುಂಗಾರು ಮತ್ತು ಹಿಂಗಾರು ಸಮಯದಲ್ಲಿ ಪ್ರತಿದಿನ ಕೃಷಿಭೂಮಿಯ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಿ ಉಪಯುಕ್ತ ಸಲಹೆ, ಸೂಚನೆಗಳನ್ನು ರೈತರಿಗೆ ನೀಡಲಾಗುತ್ತದೆ.
2. ರೈತನ ಭೂಮಿಯಲ್ಲಿ ಬೆಳೆ ಮತ್ತು ಕಳೆ ಇರುವ ಪ್ರದೇಶವನ್ನು ನಿಖರವಾಗಿ ವಿಶ್ಲೇಷಣೆ ಮಾಡಲಾಗುತ್ತದೆ. ಇದರಿಂದಾಗಿ ಕಳೆ ನಿಯಂತ್ರಣಕ್ಕೆ ಸೂಕ್ತಕ್ರಮವನ್ನು ಕೈಗೊಳ್ಳಲು ರೈತರಿಗೆ ನೆರವಾಗುತ್ತದೆ.
3. ಕೀಟಗಳ ಹಾವಳಿ ಮತ್ತು ರೋಗಗಳ ಬಗ್ಗೆ ಸಾಕಷ್ಟು ಸಮಯ ಮುಂಚಿತವಾಗಿ ರೈತರಿಗೆ ಮುನ್ನೆಚ್ಚರಿಕೆ ನೀಡಲು ಸಾಧ್ಯವಿದೆ.
4. ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹದಂತಹ ಪ್ರಕೃತಿ ವಿಕೋಪಗಳ ಬಗ್ಗೆ ಹಾಗೂ ಕಾಡ್ಗಿಚ್ಚು ಭೂಕುಸಿತದಂತಹ ಅಪಾಯಗಳ ಮುನ್ನೆಚ್ಚರಿಕೆ ಮಾಹಿತಿಯನ್ನು ನೀಡಲು ಸಾಧ್ಯವಿದೆ.
5. ನೀರಾವರಿ ಮತ್ತು ಮಳೆಯಾಶ್ರಿತ ಕೃಷಿಕರಿಗೆ, ನೀರಿನ ಸಮರ್ಪಕ ಬಳಕೆಯ ಮಾಹಿತಿ ನೀಡಲು ಸಾಧ್ಯವಿದೆ. ಇದಲ್ಲದೆ, ಅರಣ್ಯ ಮತ್ತು ಪರಿಸರ ಸಂರಕ್ಷಣೆ ಕುರಿತು ಉಪಯುಕ್ತ ಮಾಹಿತಿನ್ನು ಶಕುಂತಲೆ ನೀಡುವುದು ಸಾಧ್ಯವಿದೆ. ಉದಾಹರಣೆಗೆ:

- ಅರಣ್ಯ ಪ್ರದೇಶದ ಒತ್ತುವರಿ, ಕಾಡುಮರಗಳ ಹನನ ಮೊದಲಾದ ಮಾಹಿತಿಯನ್ನು ಪ್ರತಿದಿನವೂ ನೀಡಲು ಸಾಧ್ಯವಿದೆ.
- ನೆಲ, ಜಲ ಮತ್ತು ವಾಯುಮಾಲಿನ್ಯದ ಪ್ರಮಾಣವನ್ನು ಹಾಗೂ ಇಂತಹ ಮಾಲಿನ್ಯಕಾರಕ ತ್ಯಾಜ್ಯಗಳನ್ನು ಅನಧಿಕೃತವಾಗಿ ಮತ್ತು ಪರಿಸರಕ್ಕೆ ಮಾರಕವಾಗುವಂತೆ ವಿಲೇವಾರಿ ಮಾಡುವ ಘಟನೆಗಳನ್ನು ಗುರುತಿಸಿ, ಪ್ರತಿದಿನವೂ ನೀಡಲು ಸಾಧ್ಯವಿದೆ.
- ತೈಲ ಮತ್ತು ಗ್ಯಾಸ್ ಸಾಗಾಣಿಕೆಗಾಗಿ ಭೂಮಿಯ ಮೇಲೆ ಹಾಗೂ ಭೂಮಿಯ ಒಳಗೆ ಅಳವಡಿಸಲಾಗಿರುವ ಪೈಪುಗಳಲ್ಲಿ ಸೋರಿಕೆಯನ್ನು ಗುರುತಿಸಿ, ಅವಘಡ ಸಂಭವಿಸದಂತೆ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ಮಾಹಿತಿ ನೀಡುವುದು ಸಾಧ್ಯವಿದೆ.
- ಅಕ್ರಮ ಕಲ್ಲು, ಮರಳು ಮತ್ತು ಖನಿಜ ಗಣಿಗಾರಿಕೆ ಹಾಗೂ ಗಣಿತ್ಯಾಜ್ಯವನ್ನು ಪರಿಸರಕ್ಕೆ ಮಾರಕವಾಗುವಂತೆ ವಿಲೇವಾರಿ ಮಾಡುವ ಪ್ರಕರಣಗಳನ್ನು ಗುರುತಿಸಿ, ಪ್ರತಿದಿನ ಮಾಹಿತಿ ನೀಡಲು ಸಾಧ್ಯವಿದೆ.

ಶಕುಂತಲೆಯಂತಹ ಉಪಗ್ರಹಗಳನ್ನು ಬಳಸಿ ದೇಶದಲ್ಲಿ ನಡೆಯುತ್ತಿರುವ ಬೃಹತ್ ಕಾಮಗಾರಿ ಯೋಜನೆಗಳ ನಿರ್ವಹಣೆ, ಪ್ರಕೃತಿ ವಿಕೋಪದಲ್ಲಿ ಸಂತ್ರಸ್ಥರ ರಕ್ಷಣೆ ಮತ್ತು ಪರಿಹಾರ ನಿರ್ವಹಣೆ – ಹೀಗೆ ಹಲವು ರೀತಿಯ ಉಪಯುಕ್ತ ಮಾಹಿತಿಯನ್ನು ನೀಡಲು ಸಾಧ್ಯವಿದೆ.

ಶಕುಂತಲೆಯಂತಹ ಉಪಗ್ರಹಗಳಿಂದ ದೊರೆಯುವ ಮಾಹಿತಿಯನ್ನು ಸಂಗ್ರಹಿಸಿ, ಸಂಸ್ಕರಿಸಿ, ವಿಶ್ಲೇಷಣೆ ಮಾಡಲು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೊದಲಾದ ತಂತ್ರಜ್ಞಾನಗಳನ್ನು ಬಳಸಿ ಅಭಿವೃಪಡಿಸಿದ ವ್ಯವಸ್ಥೆಯನ್ನು ಫಿಕ್ಸೆಲ್ ಸಂಸ್ಥೆ ಹೊಂದಿದೆ. ಈ ಸೌಲಭ್ಯವನ್ನು ಬಳಸಿ ವಿದೇಶದ ಸಂಸ್ಥೆಗಳಿಗೆ ಅಗತ್ಯವಾದ ಉಪಗ್ರಹ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ನೀಡುವುದರ ಮೂಲಕ ಭಾರತಕ್ಕೆ ಕೋಟ್ಯಂತರ ಡಾಲರ್ ವಿದೇಶಿ ವಿನಿಮಯವನ್ನು ಗಳಿಸಿಕೊಡುವುದು ಈ ಸಂಸ್ಥೆಯ ಉದ್ದೇಶವಾಗಿದೆ.

ಮೊದಲ ಹಂತದಲ್ಲಿ ಶಕುಂತಲೆಯಂತಹ ಹಲವಾರು ಉಪಗ್ರಹಗಳನ್ನು ಅಭಿವೃದ್ಧಿ ಮಾಡಿ, ಉಡಾವಣೆ ಹಾಗೂ ನಿರ್ವಹಣೆ ಮಾಡುವುದು ಹಾಗೂ ಉಪಗ್ರಹ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡುವ ಗುರಿಯನ್ನು ಹೊಂದಿರುವ ಫಿಕ್ಸೆಲ್ ಸಂಸ್ಥೆ, ಎರಡನೆಯ ಹಂತದಲ್ಲಿ ನಮ್ಮ ಸೌರಮಂಡಲದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಮಾಹಿತಿಯನ್ನು ಸಂಗ್ರಹಿಸಲು ಅಗತ್ಯವಾದ ಅತ್ಯಾಧುನಿಕ ಬಾಹ್ಯಾಕಾಶ ನೌಕೆಯನ್ನು ಅಭಿವೃದ್ಧಿ ಪಡಿಸುವ, ಉಡಾವಣೆ ಮತ್ತು ನಿರ್ವಹಣೆ ಮಾಢುವ ಉದ್ದೇಶವನ್ನು ಈ ಸಂಸ್ಥೆ ಹೊಂದಿದೆ.

ಇಡೀ ಸೌರಮಂಡಲದಲ್ಲಿರುವ ಸಂಪನ್ಮೂಲಗಳ ಮಾಹಿತಿಯನ್ನು ಈ ರೀತಿ ಸಂಗ್ರಹಿಸಿ, ವಿಶ್ಲೇಷಣೆ ಮಾಡುವ ಕೆಲಸವನ್ನು ಭಾರತದ ಸಂಸ್ಥೆ ಮಾಡಲಿದೆ ಎನ್ನುವುದು ಹೆಮ್ಮೆಯ ವಿಷಯವಾಗಿದೆ. ಶಕುಂತಲೆಯ ಯಶೋಗಾಥೆಯಿಂದ ಸ್ಫೂರ್ತಿ ಪಡೆದು ವಿಫುಲ ಅವಕಾಶಗಳಿರುವ ಈ ಕ್ಷೇತ್ರದಲ್ಲಿ ನಮ್ಮವರು ತೊಡಗಿಸಿಕೊಂಡು ಯಶಸ್ವಿಯಾಗಲಿ ಎಂದು ಆಶಿಸೋಣ. ❖

ದಕ್ಷಿಣ ದೆಹಲಿ ಮಹಾನಗರಪಾಲಿಕೆಯಿಂದ ಕಾರ್ಯಾಚರಣೆ

ದೆಹಲಿ: ಅಕ್ರಮ ಕಟ್ಟಡ ತೆರವು



ಅಕ್ರಮ ಕಟ್ಟಡ ತೆರವು ಕಾರ್ಯಾಚರಣೆಯ ಭಾಗವಾಗಿ ದಕ್ಷಿಣ ದೆಹಲಿ ಮಹಾನಗರ ಪಾಲಿಕೆಯು (ಎಸ್‌ಡಿಎಂಸಿ) ಮಂಗಳವಾರ ಇಲ್ಲಿನ ನ್ಯೂ ಫ್ರೆಂಡ್ಸ್ ಕಾಲೋನಿಯ ಗುರುದ್ವಾರ ರಸ್ತೆಯಲ್ಲಿ ಬುಲ್ಡೋಜರ್‌ಗಳಿಂದ ಅಕ್ರಮ ತಾತ್ಕಾಲಿಕ ಕಟ್ಟಡಗಳನ್ನು ತೆರವುಗೊಳಿಸಿತು –ಪಿಟಿಐ ಚಿತ್ರ

ನವದೆಹಲಿ: ಅಕ್ರಮ ಕಟ್ಟಡ ತೆರವು ಕಾರ್ಯಾಚರಣೆಯ ಭಾಗವಾಗಿ ದಕ್ಷಿಣ ದೆಹಲಿ ಮಹಾನಗರ ಪಾಲಿಕೆ (ಎಸ್‌ಡಿಎಂಸಿ) ಮಂಗಳವಾರ ಇಲ್ಲಿನ ನ್ಯೂಫ್ರೆಂಡ್ಸ್ ಕಾಲೊನಿಯ ಗುರುದ್ವಾರ ರಸ್ತೆ ಮತ್ತು ಮಂಗೋಲ್‌ಪುರಿಯಲ್ಲಿ ಬುಲ್ಡೋಜರ್‌ಗಳಿಂದ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿತು.

'ಮಂಗೋಲ್‌ಪುರಿಯ 'ವೈ' ಬ್ಲಾಕ್‌ನಲ್ಲಿ ಸುಮಾರು 500 ಮೀಟರ್‌ಗಳಷ್ಟು ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ. ಬೀದಿ ವ್ಯಾಪಾರಿಗಳು ಮತ್ತು ದಿನಸಿ ಮಾರಾಟಗಾರರು ಈ ಪ್ರದೇಶದಲ್ಲಿ ಅಕ್ರಮವಾಗಿ ತಾತ್ಕಾಲಿಕ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದರು' ಎಂದು ಎನ್‌ಡಿಎಂಸಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಮ್ಮ ತಂಡಗಳು ಸಾಕಷ್ಟು ಪೊಲೀಸ್ ಪಡೆ, ಬುಲ್ಡೋಜರ್‌ಗಳು ಮತ್ತು ಟ್ರಕ್‌ಗಳಂತಹ ಸಲಕರಣೆಗಳೊಂದಿಗೆ ಬೌದ್ಧ ಧರ್ಮ ದೇವಸ್ಥಾನ, ಗುರುದ್ವಾರ ರಸ್ತೆ ಮತ್ತು ನ್ಯೂ ಫ್ರೆಂಡ್ಸ್ ಕಾಲೊನಿಯ ಸಮೀಪದ ಪ್ರದೇಶಗಳಲ್ಲಿ ಅಕ್ರಮವಾಗಿ ಸ್ಥಾಪಿಸಲಾದ ಕಿಯಾಸ್ಕ್‌ಗಳು, ತಾತ್ಕಾಲಿಕ ಗುಡಿಸಲುಗಳು ಮತ್ತು ಅಂಗಡಿಗಳನ್ನು ತೆಗೆದುಹಾಕಲು ಪ್ರಾರಂಭಿಸಿವೆ. ಅಕ್ರಮ ಕಟ್ಟಡ ತೆರವು ಕಾರ್ಯಾಚರಣೆಯು ಮುಂದುವರಿಯಲಿದೆ' ಎಂದು ಎಸ್‌ಡಿಎಂಸಿಯ ಕೇಂದ್ರ ವಲಯದ ಮುಖ್ಯಸ್ಥ ರಾಜ್‌ಪಾಲ್ ಸಿಂಗ್ ಮಾಹಿತಿ ನೀಡಿದ್ದಾರೆ.

ಶಾಹೀನ್‌ಬಾಗ್‌ನಲ್ಲಿ ಸೋಮವಾರ ಅಕ್ರಮ ಕಟ್ಟಡ ತೆರವು ಕಾರ್ಯಾಚರಣೆ ವೇಳೆ ಸ್ಥಳೀಯರು ಮತ್ತು ರಾಜಕೀಯ ಮುಖಂಡರು ಪ್ರತಿಭಟನೆ ನಡೆಸಿದ್ದರಿಂದ ಎಸ್‌ಡಿಎಂಸಿ ಕಾರ್ಯಾಚರಣೆ ಕೈಗೊಳ್ಳದೇ ಹಿಂತಿರುಗಿತ್ತು.

ಈ ನಡುವೆ, ಶಾಹೀನ್ ಬಾಗ್‌ನಲ್ಲಿ ಕಟ್ಟಡ ಧ್ವಂಸ ಕಾರ್ಯಾಚರಣೆ ವಿರೋಧಿಸಿ ಸಿಪಿಎಂ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, 'ಪಕ್ಷದ ಮನವಿಯಂತೆ ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ' ಎಂದು ಹೇಳಿದೆ.

ಬಾಬರಿ ಮಸೀದಿಯಂತೆ ಜ್ಞಾನವಾಪಿ ಮಸೀದಿ ಕೆಡವಲಾಗುವುದು: ಸೋಮ್

ಲಖನೌ: 'ವಾರಾಣಸಿಯ ಪ್ರಸಿದ್ಧ ಕಾಶಿ ವಿಶ್ವನಾಥ ದೇಗುಲದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿಯನ್ನು ಬಾಬರಿ ಮಸೀದಿಯಂತೆ ಕೆಡವಲಾಗುವುದು' ಎಂದು ಬಿಜೆಪಿ ನಾಯಕ ಸಂಗೀತ್ ಸೋಮ್ ಅವರು ನೀಡಿರುವ ಹೇಳಿಕೆಯು ಭಾರಿ ವಿವಾದಕ್ಕೆ ಕಾರಣವಾಗಿದೆ.

ಮೀರತ್‌ನಲ್ಲಿ ಸೋಮವಾರ ಸಮಾರಂಭವೊಂದರಲ್ಲಿ ಮಾತನಾಡಿದ ಸಂಗೀತ್ ಸೋಮ್, '1992ರಲ್ಲಿ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಲಾಯಿತು. ಈಗ ಜ್ಞಾನವಾಪಿ ಮಸೀದಿಯ ಸರದಿ. 2022ರಲ್ಲಿ ನಾವು ಈ ಮಸೀದಿಯನ್ನು ಕೆಡವುತ್ತೇವೆ' ಎಂದಿದ್ದಾರೆ.

'ಮುಸ್ಲಿಂ ದಾಳಿಕೋರರು ದೇವಾಲಯವನ್ನು ಕೆಡವಿ ಮಸೀದಿಯನ್ನು ನಿರ್ಮಿಸಿದ್ದಾರೆ. ಅದನ್ನು ಹಿಂಪಡೆಯುವ ಸಮಯ ಈಗ ಬಂದಿದೆ. ಬಾಬರಿ ಮಸೀದಿ ಕೆಡವಿದ ದಿನವೇ ಮುಸ್ಲಿಮರಿಗೆ ಇದು ಗೊತ್ತಿರಬೇಕಿತ್ತು. ದೇಶವು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದು ಅವರಿಗೆ ತಿಳಿದಿರಬೇಕಿತ್ತು. ನಾವು ಅಂತಹ ಯಾವುದೇ ಮಸೀದಿಯನ್ನು ಬಿಡುವುದಿಲ್ಲ. ಎಲ್ಲವನ್ನೂ ಕೆಡವುತ್ತೇವೆ' ಎಂದೂ ಅವರು ಹೇಳಿದ್ದಾರೆ.

ಕುತುಬ್ ಮಿನಾರ್ ಬಳಿ ಹನುಮಾನ್ ಚಾಲೀಸಾ ಪಠಣ

ನವದೆಹಲಿ (ಪಿಟಿಐ): ಇಲ್ಲಿನ ಐತಿಹಾಸಿಕ ಸ್ಮಾರಕ ಕುತುಬ್ ಮಿನಾರ್‌ಗೆ 'ವಿಷ್ಣು ಸ್ತಂಭ' ಎಂದು ಮರುನಾಮಕರಣ ಮಾಡುವಂತೆ ಒತ್ತಾಯಿಸಿ ಸ್ಮಾರಕದ ಆವರಣದಲ್ಲಿ ಹನುಮಾನ್ ಚಾಲೀಸಾ ಪಠಿಸುತ್ತಿದ್ದ ಬಲಪಂಥೀಯ ಸಂಘಟನೆಯ 30 ಸದಸ್ಯರನ್ನು ಮಂಗಳವಾರ ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದ್ದಾರೆ.

'ವಾಹನ ಸಂಚಾರಕ್ಕೆ ತಡೆಯೊಡ್ಡಿ ಅವರು ನಡುರಸ್ತೆಯಲ್ಲಿ ಪ್ರತಿಭಟನೆ ನಡೆಸುತ್ತಿದ್ದರಿಂದ ವಶಕ್ಕೆ ಪಡೆಯಲಾಗಿತ್ತು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ಇದಕ್ಕೂ ಮುನ್ನ ಪ್ರತಿಭಟನಾಕಾರರು ಜೈ ಶ್ರೀರಾಮ್ ಘೋಷಣೆ ಕೂಗಿ, ಹನುಮಾನ್ ಚಾಲೀಸಾ ಪಠಿಸಿದರು. ಕುತುಬ್ ಮಿನಾರ್ ಅನ್ನು ವಿಷ್ಣು ಸ್ತಂಭವೆಂದು ಮರು ನಾಮಕರಣ ಮಾಡಬೇಕೆಂದು ಒತ್ತಾಯಿಸುವ ಫಲಕ ಪ್ರದರ್ಶಿಸಿದರು.

ಕಾಂಗ್ರೆಸ್ ಪಕ್ಷ ಸಂಘಟನೆಗೆ ಯುವ ಬ್ರಿಗೇಡ್ ರಚಿಸಲು ಸಲಹೆ

ಲೋಕಸಭೆ: ಮುಂದಿನ ವರ್ಷವೇ ಅಭ್ಯರ್ಥಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಯುವ ನಾಯಕರಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡಲು ಮತ್ತು ಯುವ ಬ್ರಿಗೇಡ್ ರಚಿಸಲು ಕಾಂಗ್ರೆಸ್ ಪಕ್ಷ ಮುಂದಾಗಿದ್ದು, ಈ ಸಂಬಂಧ ಕರಡು ಸಿದ್ಧಪಡಿಸಲಾಗಿದೆ.

ಉದಯಪುರದಲ್ಲಿ ಶುಕ್ರವಾರದಿಂದ ಮೂರು ದಿನಗಳ ಕಾಲ ನಡೆಯಲಿರುವ ಕಾಂಗ್ರೆಸ್‌ನ ಚಿಂತನ ಶಿಬಿರದಲ್ಲಿ ಪಕ್ಷ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ನಿರ್ಣಯ ತೆಗೆದುಕೊಳ್ಳಲು ಪಕ್ಷದ 9 ಸದಸ್ಯರ ಸಮಿತಿ ಕರಡು ಸಿದ್ಧಪಡಿಸಿದೆ.

ಮುಂಬರುವ ಲೋಕಸಭಾ ಚುನಾವಣೆಗೆ ಮುಂದಿನ ವರ್ಷವೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು, ನಿಧಿ ಸಂಗ್ರಹಕ್ಕೆ ವಿಶೇಷ ವ್ಯವಸ್ಥೆ, ಚುನಾವಣೆ ಮತ್ತು ಮೈತ್ರಿಗೆ ಸಮನ್ವಯ ಸಮಿತಿ ರಚನೆ ಸೇರಿದಂತೆ ಹಲವು ಶಿಫಾರಸುಗಳು ಕರಡಿನಲ್ಲಿವೆ. ಯುವಕರು, ಮಹಿಳೆಯರು, ದಲಿತರು, ಇತರೆ ಹಿಂದುಳಿದ ವರ್ಗದವರು (ಒಬಿಸಿ) ಮತ್ತು ಅಲ್ಪಸಂಖ್ಯಾತರಿಗೆ ಪಕ್ಷದಲ್ಲಿ ಸಾಕಷ್ಟು ಪ್ರಾತಿನಿಧ್ಯ ನೀಡುವ ಸಾಧ್ಯತೆ ಇದೆ.

ಮುಕುಲ್ ವಾಸ್ನಿಕ್ ನೇತೃತ್ವದ ಸಮಿತಿ ಕರಡು ಸಿದ್ಧಪಡಿಸಿದ್ದು, ಚುನಾವಣಾ ಸಿದ್ಧತೆಗೆ ಮೇಲ್ವಿಚಾರಣೆಗಾಗಿ ಹೊಸ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಸೃಷ್ಟಿಸಬೇಕು. ಪಕ್ಷದಲ್ಲಿ ಒಬ್ಬ ವ್ಯಕ್ತಿಗೆ ಒಂದು ಹುದ್ದೆ ಮಾತ್ರ ನೀಡಬೇಕು, ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಟಿಕೆಟ್ ನೀಡಬೇಕು ಎಂಬ ಸಲಹೆಯನ್ನೂ ನೀಡಲಾಗಿದೆ.

ಜಿ-23 ನಾಯಕರ ಬೇಡಿಕೆಯಂತೆ ಸಂಸದೀಯ ಮಂಡಳಿಯನ್ನು ಪುನರ್ ರಚಿಸಬೇಕು. ಪಕ್ಷವು ಪ್ರಬಲವಾಗಿರುವ ಮತ್ತು ದುರ್ಬಲವಾಗಿರುವ ರಾಜ್ಯಗಳಲ್ಲಿ ಪಕ್ಷದ ಸಂಘಟನೆಗಳಿಗೆ ವಿಭಿನ್ನ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪಕ್ಷದ ಸಂಘಟನೆ ದುರ್ಬಲವಾಗಿರುವ ರಾಜ್ಯಗಳಲ್ಲಿ, ಪಂಚಾಯತ್ ಮಟ್ಟದಲ್ಲಿ ನಾಯಕರನ್ನು ಗುರುತಿಸಲು ಕೆಳಮಟ್ಟದಲ್ಲಿ ಸಂಘಟನಾ ಕಾರ್ಯದರ್ಶಿಗಳನ್ನು ನೇಮಿಸುವಂತೆ ಸಲಹೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ವರ್ಷಕ್ಕೆ ಎರಡು ಬಾರಿಯಾದರೂ ಎಐಸಿಸಿ ಮತ್ತು ರಾಜ್ಯ ಸಮಿತಿಗಳ ಸಭೆ ಕರೆಯಬೇಕು. ಪಕ್ಷದ ಸಿದ್ಧಾಂತದ ಕುರಿತು ನಿರಂತರ ತರಬೇತಿ ಶಿಬಿರಗಳು ನಡೆಯಬೇಕು. ಪಕ್ಷದ ನಿಲುವಿಗೆ ವಿರುದ್ಧವಾಗಿ ಅಭಿಪ್ರಾಯ ವ್ಯಕ್ತಪಡಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಶಿಫಾರಸು ಮಾಡಲಾಗಿದೆ.

ಅಮರಿಂದರ್ ಸಿಂಗ್ ವಾರಿಂಗ್ ನೇತೃತ್ವದ ಯುವಕರ ಸಮಿತಿಯು 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಶೇ 50ರಷ್ಟು ಸೀಟುಗಳನ್ನು ನೀಡುವಂತೆ ಸೂಚಿಸಿದೆ. ಸಲ್ಮಾನ್ ಖುರ್ಷಿದ್ ನೇತೃತ್ವದ ಸಾಮಾಜಿಕ ನ್ಯಾಯ ಸಮಿತಿಯು ದಲಿತರು, ಬುಡಕಟ್ಟು ಜನಾಂಗ, ಒಬಿಸಿ ಮತ್ತು ಅಲ್ಪಸಂಖ್ಯಾತರಿಗೆ ಶೇ 50ರಷ್ಟು ಸ್ಥಾನಗಳನ್ನು ಮೀಸಲಿಡಬೇಕೆಂದು ಸೂಚಿಸಿದೆ.

ತಗ್ಗಿದ 'ಅಸನಿ' ಚಂಡಮಾರುತ ವೇಗ

ಭುವನೇಶ್ವರ (ಪಿಟಿಐ): 'ಅಸನಿ' ಚಂಡಮಾರುತವು ಪೂರ್ವ ಕರಾವಳಿಗೆ ಸಮೀಪಿಸುತ್ತಿದ್ದು, ದುರ್ಬಲಗೊಳ್ಳುವ ಸೂಚನೆ ನಡುವೆಯೂ ಗಂಟೆಗೆ 105 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಪ್ರಸ್ತುತ ಚಂಡಮಾರುತದ ಕೇಂದ್ರ ಸ್ಥಾನವು ಆಂಧ್ರ ಪ್ರದೇಶದ ಕಾಕಿನಾಡದ ಆಗ್ನೇಯದಲ್ಲಿ 210 ಕಿ.ಮೀ ದೂರ ಮತ್ತು ಒಡಿಶಾದ ಗೋಪಾಲಪುರದ ನೈರುತ್ಯದ 530 ಕಿ.ಮೀ ದೂರದಲ್ಲಿದೆ ಎಂದು ಐಎಂಡಿ ತಿಳಿಸಿದೆ.

'ಅಸನಿ ಚಂಡಮಾರುತದ ತೀವ್ರತೆಯು ಈಗಾಗಲೇ ಗರಿಷ್ಠ ಹಂತ ತಲುಪಿದ್ದು ಕ್ರಮೇಣ ದುರ್ಬಲಗೊಳ್ಳುತ್ತಿದೆ.ಚಂಡಮಾರುತವು ಮಂಗಳವಾರ ಆಂಧ್ರಪ್ರದೇಶದ ಕರಾವಳಿಯನ್ನು ಸಮೀಪಿಸಿದ್ದು ಕ್ರಮೇಣ ಒಡಿಶಾ ಕರಾವಳಿಯುದ್ದಕ್ಕೂ ಚಲಿಸುತ್ತಿದೆ. ಬುಧವಾರದ ವೇಳೆಗೆ ಚಂಡಮಾರುತ ದುರ್ಬಲವಾಗಲಿದ್ದು, ಗುರುವಾರ ಮತ್ತಷ್ಟು ಕ್ಷೀಣಿಸಲಿದೆ' ಎಂದು ಐಎಂಡಿ ಮಹಾ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ. ತೀವ್ರ ಸ್ವರೂಪ ಪಡೆದುಕೊಂಡಿದ್ದ 'ಅಸನಿ' ಚಂಡ ಮಾರುತ ಮುಂದಿನ 24 ಗಂಟೆಗಳಲ್ಲಿ ಇನ್ನಷ್ಟು ದುರ್ಬಲವಾಗಲಿದೆ. ಗಾಳಿಯ ವೇಗವು ಮಂಗಳವಾರ ರಾತ್ರಿ ಗಂಟೆಗೆ 80-90 ಕಿ.ಮೀ, ಬುಧವಾರದ ಸಂಜೆಯವರೆಗೂ 60-70 ಕಿ.ಮೀಗೆ ತಗ್ಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆಯ ಭುವನೇಶ್ವರದ ಪ್ರಾದೇಶಿಕ ನಿರ್ದೇಶಕ ಎಚ್‌.ಆರ್.ಬಿಸ್ವಾಸ್ ತಿಳಿಸಿದ್ದಾರೆ.

ಮುಗುಚಿದ ದೋಣಿಗಳು: ಗಂಜಾಂನ ಚತ್ರಾಪುರ ಬಳಿ ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಿದ್ದ ಐದು ದೋಣಿಗಳು ಭಾರಿ ಅಲೆಗಳಿಗೆ ಸಿಲುಕಿ ಮಂಗಳವಾರ ಮುಗುಚಿದವು. ಈ ದೋಣಿಗಳಲ್ಲಿದ್ದ ಎಲ್ಲ 65 ಮೀನು ಗಾರರು ಈಜಿ ದಡ ಸೇರುವಲ್ಲಿ ಯಶಸ್ವಿಯಾಗಿದ್ದಾರೆ.

ಆಂಧ್ರದಲ್ಲಿ ಭಾರಿ ಮಳೆ ಮುನ್ಸೂಚನೆ

ಚಂಡಮಾರುತದ ಪರಿಣಾಮ ಆಂಧ್ರಪ್ರದೇಶದ ಕರಾವಳಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಗುಂಟೂರು, ಕೃಷ್ಣಾ, ಪಶ್ಚಿಮ ಮತ್ತು ಪೂರ್ವ ಗೋದಾವರಿ ಭಾಗದಲ್ಲಿ ಬುಧವಾರ ಹೆಚ್ಚು ಮಳೆಯಾಗುವ ಮುನ್ಸೂಚನೆಯೊಂದಿಗೆ ಹೈ ಅಲರ್ಟ್ ಘೋಷಿಸಲಾಗಿದೆ. ಪ್ರಕಾಶಂ ಮತ್ತು ವಿಶಾಖಪಟ್ಟಣಂ, ವಿಜಯನಗರಂ ಮತ್ತು ಶ್ರೀಕಾಕುಳಂನಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ.

'ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಿ'

ಒಂದನೇ ಪುಟದಿಂದ

'ಒಂದು ವೇಳೆ ಮಧ್ಯಪ್ರದೇಶ ಹೈಕೋರ್ಟ್ ಅಥವಾ ಸಿವಿಲ್ ಕೋರ್ಟ್ ಯಾವುದಾದರೂ ಆದೇಶ ನೀಡಿದಲ್ಲಿ ಅಥವಾ ನೀಡುವುದಿದ್ದರೆ ಹಾಗೂ ಅದು ಸುಪ್ರೀಂಕೋರ್ಟ್‌ನ ನಿರ್ದೇಶನಕ್ಕೆ ವಿರುದ್ಧವಾಗಿದ್ದಲ್ಲಿ, ಅಂಥ ಆದೇಶವು ವಜಾಗೊಂಡಿದೆ ಎಂದೇ ಭಾವಿಸಬೇಕು. ಅಲ್ಲದೇ, ಸುಪ್ರೀಂ ಕೋರ್ಟ್‌ನ ಪೂರ್ವಾನುಮತಿ ಇಲ್ಲದೇ ಯಾವುದೇ ಕ್ರಮ ಕೈಗೊಳ್ಳಬಾರದು' ಎಂದೂ ನ್ಯಾಯಪೀಠ ಸೂಚಿಸಿತು.

ಎಲ್ಲಾ ರಾಜ್ಯಗಳಿಗೆ ಅನ್ವಯ: 'ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಸುಪ್ರೀಂಕೋರ್ಟ್‌ನ ಈ ಆದೇಶ ಹಾಗೂ ನಿರ್ದೇಶನಗಳು ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರಕ್ಕೆ ಮಾತ್ರ ಸೀಮಿತವಲ್ಲ. ಎಲ್ಲ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಹಾಗೂ ಸಂಬಂಧಿಸಿದ ಚುನಾವಣಾ ಆಯೋಗಗಳಿಗೆ ಅನ್ವಯ' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

'ನಿಖರವಾದ ಅಂಕಿಅಂಶಗಳ ಆಧಾರದಲ್ಲಿ ಮೂರು ಹಂತದ ಪರಿಶೀಲನೆ ನಡೆಸಿ, ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ರಾಜಕೀಯ ಮೀಸಲಾತಿ ನೀಡಬೇಕು' ಎಂದು ಸುಪ್ರೀಂಕೋರ್ಟ್ 2010ರಲ್ಲಿ ತೀರ್ಪು ನೀಡಿತ್ತು. 2021ರ ಮಾರ್ಚ್‌ನಲ್ಲೂ ಇದನ್ನು ಪುನರುಚ್ಚರಿಸಿತ್ತು.

ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಎರಡು ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಮಹಾರಾಷ್ಟ್ರದ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿ ಮೇ 4ರಂದು ಸುಪ್ರೀಂಕೋರ್ಟ್ ಆದೇಶಿಸಿತ್ತು.

'ಪರಿಶೀಲನಾ ಅರ್ಜಿ ಸಲ್ಲಿಕೆ'

ಭೋಪಾಲ್: 'ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ ನಂತರವೇ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು' ಎಂಬ ಬಗ್ಗೆ ಸುಪ್ರೀಂಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗುವುದು ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜಸಿಂಗ್ ಚೌಹಾಣ್ ಇಲ್ಲಿ ಹೇಳಿದರು.

ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ ಎರಡು ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿರುವ ಕುರಿತು ಅವರು ಪ್ರತಿಕ್ರಿಯಿಸಿದರು.

'ಎಲ್ಲಾ ಚುನಾವಣೆಗಳಿಗೂ ಸಿದ್ಧ'

ಒಂದನೇ ಪುಟದಿಂದ

'ನಾವು ಇಡೀ ರಾಜ್ಯ ಸುತ್ತಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೆ ತಯಾರಿ ಮಾಡಿದ್ದೆವು. ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಸಭೆಗಳನ್ನು ಮಾಡಿದ್ದೇವೆ ಎಂದು ಹೇಳಿದರು.

ತೀರ್ಪಿನ ಅಧ್ಯಯನ: ಮಧ್ಯಪ್ರದೇಶ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಸುಪ್ರೀಂಕೋರ್ಟ್ ನೀಡಿರುವ ಆದೇಶವನ್ನು ಕಾನೂನು ಇಲಾಖೆ ಮತ್ತು ಅಡ್ವೊಕೇಟ್ ಜನರಲ್ ಅವರಿಗೆ ಸಂಪೂರ್ಣ ಅಧ್ಯಯನ ಮಾಡುವಂತೆ ತಿಳಿಸಿದ್ದೇನೆ ಎಂದು ಬೊಮ್ಮಾಯಿ ಹೇಳಿದರು.

'ಸುಪ್ರೀಂಕೋರ್ಟ್ ಆದೇಶದ ಪ್ರತಿ ನಮಗೆ ಬಂದಿಲ್ಲ. ನ್ಯಾಯಾಲಯ ಮತ್ತು ಚುನಾವಣಾ ಆಯೋಗ ಏನು ತೀರ್ಮಾನ ಮಾಡುತ್ತವೆಯೋ ಅದನ್ನು ಪಾಲಿಸಬೇಕಾಗುತ್ತದೆ. ಸುಪ್ರೀಂಕೋರ್ಟ್ ಆದೇಶ ಎಲ್ಲಾ ರಾಜ್ಯಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುತ್ತದೆ ಎಂದು ಹೇಳಲಾಗಿದ್ದು, ಚುನಾವಣಾ ಆಯೋಗದೊಂದಿಗೆ ಚರ್ಚೆ ಮಾಡಲಾಗುವುದು. ಅವರ ಸೂಚನೆಯಂತೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಬೊಮ್ಮಾಯಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪ್ರಶ್ನೆಪತ್ರಿಕೆ ಸೋರಿಕೆ: ಮಾಜಿ ಸಚಿವ ಬಂಧನ

ಅಮರಾವತಿ (ಪಿಟಿಐ): ಹತ್ತನೇ ತರಗತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಡಿಪಿಯ ಮಾಜಿ ಸಚಿವ ಹಾಗೂ ನಾರಾಯಣ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಪಿ. ನಾರಾಯಣ ಅವರನ್ನು ಚಿತ್ತೂರು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಸರ್ಕಾರಿ ಶಿಕ್ಷಕರು ಸೇರಿದಂತೆ ಇದುವರೆಗೆ ಏಳು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಾರಾಯಣ ಅವರ ಬಂಧನವನ್ನು ತೆಲುಗು ದೇಶಂ ಪಕ್ಷವು ಖಂಡಿಸಿದೆ. ಎರಡು ವರ್ಷದ ಬಳಿಕ ನಡೆಸಲಾದ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಗಳಲ್ಲಿ 'ಪ್ರಶ್ನೆಪತ್ರಿಕೆಗಳ ಸೋರಿಕೆ ಅಥವಾ ಸಾಮೂಹಿಕ ನಕಲು ನಡೆದಿಲ್ಲ' ಎಂದು ಶಿಕ್ಷಣ ಸಚಿವ ಬೋತ್ಸಾ ಸತ್ಯನಾರಾಯಣ ಅವರು ಈಚೆಗಷ್ಟೇ ಹೇಳಿಕೆ ನೀಡಿದ್ದರು.

ದೇಣಿಗೆಗಾಗಿ ನಿಯಮ ಉಲ್ಲಂಘನೆ ಆರೋಪ: ಸಿಬಿಐ ಕಾರ್ಯಾಚರಣೆ


ನವದೆಹಲಿ: 'ವಿದೇಶಿ ದೇಣಿಗೆ ಪಡೆಯುವಲ್ಲಿ ನಿಯಮಗಳ ಉಲ್ಲಂಘನೆಗೆ ಅನುಕೂಲ ಮಾಡಿಕೊಟ್ಟ ಆರೋಪದ ಮೇಲೆ ಕೇಂದ್ರ ಗೃಹ ಸಚಿವಾಲಯದ ಅಧಿಕಾರಿಗಳು, ಎನ್‌ಜಿಒ ಪ್ರತಿನಿಧಿಗಳು ಮತ್ತು ಮಧ್ಯವರ್ತಿಗಳ ವಿರುದ್ಧ ಸಿಬಿಐ ದೇಶದಾದ್ಯಂತ ಕಾರ್ಯಾಚರಣೆ ಕೈಗೊಂಡಿದೆ' ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ದೆಹಲಿ, ಚೆನ್ನೈ, ಹೈದರಾಬಾದ್, ಕೊಯಮತ್ತೂರು, ಮೈಸೂರು ಮತ್ತು ರಾಜಸ್ಥಾನದ ಕೆಲವು ಸ್ಥಳಗಳು ಸೇರಿದಂತೆ ಸುಮಾರು 40 ಸ್ಥಳಗಳಲ್ಲಿ ವಿದೇಶಿ ಕೊಡುಗೆ (ನಿಯಂತ್ರಣ) ಕಾಯ್ದೆಯ ಉಲ್ಲಂಘನೆಗಳ ಕುರಿತು ಸಂಘಟಿತ ಕಾರ್ಯಾಚರಣೆ ನಡೆಯುತ್ತಿದೆ' ಎಂದೂ ಅವರು ಹೇಳಿದ್ದಾರೆ. 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಕೇಂದ್ರ ಗೃಹ ಸಚಿವಾಲಯದ ಅಧಿಕಾರಿಗಳು ಮತ್ತು ಎನ್‌ಜಿಒ ಪ್ರತಿನಿಧಿಗಳು ಸೇರಿದಂತೆ ಆರು ಜನರನ್ನು ಸಿಬಿಐ ಬಂಧಿಸಿದೆ. ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೆ ₹ 2 ಕೋಟಿ ಮೌಲ್ಯದ ಹವಾಲಾ ವಹಿವಾಟು ಕೂಡ ಬಹಿರಂಗವಾಗಿದೆ' ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

'ಅಮಿತ್ ಶಾಗೆ ₹ 850 ಬೆಲೆಯ ನೀರಿನ ಬಾಟಲು'

ಪಣಜಿ: 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದ ವೇಳೆ, ಅವರಿಗೆ ₹850 ಬೆಲೆಯ ನೀರಿನ ಬಾಟಲು ನೀಡಲಾಗಿತ್ತು' ಎಂದು ಗೋವಾ ಕೃಷಿ ಸಚಿವ ರವಿ ನಾಯ್ಕ ಹೇಳಿದ್ದಾರೆ.

ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎಷ್ಟು ಭೀಕರವಾಗಿರಲಿದೆ ಹಾಗೂ ಮಳೆ ನೀರು ಸಂಗ್ರಹದ ಅಗತ್ಯತೆ ಕುರಿತು ವಿವರಿಸುವ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಅವರು, 'ಫೆಬ್ರುವರಿಯಲ್ಲಿ ನಡೆದ ಚುನಾವಣೆ ವೇಳೆ ರಾಜ್ಯಕ್ಕೆ ಭೇಟಿ ನೀಡಿದ್ದ ಶಾ ಅವರು ಹಿಮಾಲಯ ಬ್ರ್ಯಾಂಡ್‌ನ ಬಾಟಲು ನೀಡುವಂತೆ ಹೇಳಿದ್ದರು' ಎಂದರು.



ಸುಭಾಷಿತ

ನಿಮ್ಮ ಪಾಲ್ಗೊಳ್ಳುವಿಕೆ ಇಲ್ಲದಿದ್ದರೆ ಸಂಘರ್ಷ ಮುಂದುವರಿಯಲಾರದು.

-ವೇನ್ ಡಯರ್

ಸೆಕ್ಷನ್ 124(ಎ): ಸವಕಲು ಕಾನೂನು ಶಾಶ್ವತವಾಗಿ ಅಳಿಸಿಹಾಕಲು ಸಕಾಲ

ಆಲೋಚನೆಗಳು ಮುಕ್ತವಾಗಿ ಹರಿಯಬೇಕಿರುವುದು ಪ್ರಜಾತಂತ್ರ ವ್ಯವಸ್ಥೆಗೆ ಅತ್ಯಗತ್ಯ. ಆಲೋಚನೆಗಳು, ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶ ಇದ್ದಾಗ ಮಾತ್ರ ಪ್ರಜೆಗಳಿಗೆ ವ್ಯವಸ್ಥೆಯ ಬಗ್ಗೆ ಸರಿಯಾದ ಮಾಹಿತಿ ಇರುತ್ತದೆ. ಆಗ ಆಡಳಿತವು ಹೆಚ್ಚು ಉತ್ತಮವಾಗುತ್ತದೆ. ಇದು ಸಾಧ್ಯವಾಗಬೇಕು ಎಂದಾದರೆ ಅಧಿಕಾರಸ್ಥರ ಒಲವು-ನಿಲುವುಗಳಿಗೆ ವಿರುದ್ಧವಾದ ಇನ್ನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ ಒಂದೇ ಕಾರಣಕ್ಕೆ ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಭೀತಿ ಜನರಲ್ಲಿ ಇರಬಾರದು. ಇದೇ ನೆಲೆಯ ಮಾತನ್ನು ಎಸ್. ಜಿ. ವೊಂಬತ್ಕೆರೆ ಮತ್ತು ಕನ್ಹಯ್ಯಾಲಾಲ್ ಹಾಗೂ ಇತರರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಮುಕ್ತ ಅಭಿವ್ಯಕ್ತಿಗೆ ಇಂದು ದೊಡ್ಡ ಅಪಾಯವಾಗಿ ನಿಂತಿರುವುದು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124(ಎ). ಈ ಸೆಕ್ಷನ್ ಬಳಸಿ ರಾಜಕೀಯ ವಿರೋಧಿಗಳ ಮೇಲೆ, ಸಾಮಾಜಿಕ ಕಾರ್ಯಕರ್ತರ ಮೇಲೆ ಸರ್ಕಾರಗಳು ಪ್ರಕರಣಗಳನ್ನು ದಾಖಲಿಸುತ್ತಿವೆ. ಸಾಮಾಜಿಕ ಕಳಕಳಿಯಿಂದ ಕೆಲಸ ಮಾಡುವ ವ್ಯಕ್ತಿಗಳಿಗೆ 'ದೇಶದ್ರೋಹಿ' ಎಂಬ ಪಟ್ಟ ಕಟ್ಟಲು ಇದೇ ಸೆಕ್ಷನ್ ಬಳಕೆಯಾಗಿದೆ. ಸಮುದಾಯಕ್ಕೆ ಮೀಸಲಾತಿ ಬೇಕು ಎಂದು ಹೋರಾಟ ನಡೆಸಿದವರ ವಿರುದ್ಧ, ಹನುಮಾನ್ ಚಾಲೀಸಾ ಪಠಿಸಲು ಮುಂದಾದವರ ವಿರುದ್ಧ ಕೂಡ 'ದೇಶದ್ರೋಹ'ದ ಆರೋಪವನ್ನು ಈ ಸೆಕ್ಷನ್ ಬಳಸಿ ಹೊರಿಸಲಾಗಿದೆ. ನಾಗರಿಕರ ಹಕ್ಕುಗಳನ್ನು ದಮನ ಮಾಡುವ ರೀತಿಯಲ್ಲಿಯೂ ಈ ಸೆಕ್ಷನ್ ಬಳಕೆಯಾಗಿದೆ. ಆದರೆ, ಈಗ ಈ ಸೆಕ್ಷನ್ ಬಗ್ಗೆ ಪುನರ್‌ಪರಿಶೀಲನೆ ನಡೆಸುವುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಾತು ಕೊಟ್ಟಿರುವುದು ಸ್ವಾಗತಾರ್ಹ ನಡೆ. ಮರುಪರಿಶೀಲನೆ ಪೂರ್ಣಗೊಳ್ಳುವವರೆಗೆ, ದೇಶದ್ರೋಹದ ಕಾನೂನಿನ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳುವುದನ್ನು ತಡೆಹಿಡಿಯಬಹುದೇ ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.



ವಸಾಹತು ಕಾಲದಲ್ಲಿ ರೂಪುಗೊಂಡ ಈ ಸೆಕ್ಷನ್‌ನ ಧೋರಣೆಯು ಇಂದಿನ ಸಂದರ್ಭಕ್ಕೆ ಸರಿಹೊಂದುವುದಿಲ್ಲ. ಸರ್ಕಾರದ ವಿರುದ್ಧ ದ್ವೇಷ ಮೂಡಿಸಲು ಯತ್ನಿಸುವುದು, ಸರ್ಕಾರದ ವಿರುದ್ಧ ಅತೃಪ್ತಿ ಮೂಡಿಸಲು ಯತ್ನಿಸುವುದು ದೇಶದ್ರೋಹಕ್ಕೆ ಸಮ ಎಂದು ಹೇಳುವುದು ಸರಿಯಲ್ಲ. ಈ ರೀತಿ ಹೇಳುವುದರಿಂದ ನಾವು ಕಟ್ಟಿರುವ ಪ್ರಜಾತಂತ್ರ ವ್ಯವಸ್ಥೆಯನ್ನು ಅವಮಾನಿಸಿದಂತೆ ಆಗುತ್ತದೆ. 'ಪ್ರಭುತ್ವ ಅಥವಾ ಪ್ರಭುತ್ವದ ಸಂಸ್ಥೆಗಳನ್ನು ಕಟುವಾಗಿ ಟೀಕಿಸುವುದು ದೇಶದ್ರೋಹ ಆಗಲು ಸಾಧ್ಯವಿಲ್ಲ. ಏಕೆಂದರೆ, ಯಾವುದೇ ಒಂದು ಸಂಸ್ಥೆ ಅಥವಾ ಒಂದು ಅಂಗ ಮಾತ್ರವೇ ಇಡೀ ದೇಶದ ಮೂರ್ತ ರೂಪವಾಗಿ ಇರುವುದಿಲ್ಲ' ಎಂಬ ಮಾತನ್ನು ಕೇಂದ್ರ ಕಾನೂನು ಆಯೋಗವು ಸೆಕ್ಷನ್ 124(ಎ) ಕುರಿತಾಗಿ 2018ರಲ್ಲಿ ಹೇಳಿದೆ. ದೇಶದ ಸ್ವಾತಂತ್ರ್ಯ ಹೋರಾಟದ ಮುಖಂಡರು, ಸಾಂಸ್ಕೃತಿಕ ನಾಯಕರು ಸರ್ಕಾರಗಳನ್ನು, ಮಂತ್ರಿಗಳನ್ನು, ಸರ್ಕಾರದ ವಿವಿಧ ಸಂಸ್ಥೆಗಳನ್ನು ಉಗ್ರವಾಗಿ ಟೀಕಿಸಿದ ನಿದರ್ಶನಗಳು ಬಹಳಷ್ಟು ಇವೆ. ಅವರ ಟೀಕೆಗಳನ್ನು ದೇಶದ್ರೋಹ ಎಂದು ಪರಿಗಣಿಸಲು ಆಗದು, ಅವುಗಳನ್ನು ಸದುದ್ದೇಶದ ಆಗ್ರಹಗಳು ಎಂದು ಪರಿಗಣಿಸಬೇಕಾಗುತ್ತದೆ. ಪ್ರಭುತ್ವದ ರೀತಿಯಲ್ಲಿಯೇ ಎಲ್ಲರೂ ಆಲೋಚಿಸಬೇಕು ಎಂದು ಬಯಸುವುದು ದೇಶಪ್ರೇಮವಾಗುವುದಿಲ್ಲ. ಸಮಾಜವನ್ನು ಬೇರೆಯದೇ ರೀತಿಯಲ್ಲಿ ಗ್ರಹಿಸುವುದು, ಭಿನ್ನವಾಗಿ ಆಲೋಚಿಸುವುದು ದೇಶದ್ರೋಹಕ್ಕೆ ಸಮ ಆಗುವುದಿಲ್ಲ. ಆದರೆ, ಸದ್ಯದ ಕಾನೂನಿನ ಹಿನ್ನೆಲೆಯಲ್ಲಿ ದೇಶಪ್ರೇಮಕ್ಕೆ ವ್ಯಾಖ್ಯಾನ ನೀಡಲು ಬಯಸುವವರಿಗೆ ಈ ಸೂಕ್ಷ್ಮ ಅರ್ಥವಾಗಬೇಕು.

> ಸ್ವಾತಂತ್ರ್ಯವನ್ನು ದಮನ ಮಾಡಲು ಬಳಕೆಯಾಗುತ್ತಿರುವ ಈ ಸೆಕ್ಷನ್ ಅನ್ನು ಕಾನೂನಿನ ಪುಸ್ತಕದಿಂದ ತೆಗೆದುಹಾಕಲು ಇದು ಸರಿಯಾದ ಸಂದರ್ಭ

1962ರಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪೊಂದನ್ನು ನೀಡಿದೆ. ಕೇದಾರನಾಥ ಸಿಂಗ್ ಪ್ರಕರಣದಲ್ಲಿ ನೀಡಿರುವ ಈ ತೀರ್ಪು, 'ಯಾವುದೇ ಕ್ರಿಯೆಯು ದೇಶದ್ರೋಹಕ್ಕೆ ಸಮ ಎಂಬುದಾಗಿ ಪರಿಗಣಿತ ಆಗಬೇಕಾದರೆ, ಅದು ಹಿಂಸಾ ಮಾರ್ಗ ಅನುಸರಿಸಿ ಸರ್ಕಾರವನ್ನು ಬುಡಮೇಲು ಮಾಡುವ ಪರಿಣಾಮ ಹೊಂದಿರಬೇಕು. ಹಿಂಸೆ ಸೃಷ್ಟಿಸಿ, ಸಾರ್ವಜನಿಕ ಶಾಂತಿಗೆ ಧಕ್ಕೆ ತರುವಂತಹದ್ದಾಗಿರಬೇಕು. ಈ ಆಯಾಮಗಳನ್ನು ಹೊಂದಿಲ್ಲದ ಅನಿಸಿಕೆ, ಅಭಿಪ್ರಾಯವನ್ನು ದೇಶದ್ರೋಹದ ವ್ಯಾಪ್ತಿಗೆ ತರುವಂತಿಲ್ಲ' ಎಂದು ಸ್ಪಷ್ಟವಾಗಿ ಹೇಳಿದೆ. ವಾಸ್ತವದಲ್ಲಿ ಈ ತೀರ್ಪು ಐಪಿಸಿಯ ಸೆಕ್ಷನ್ 124(ಎ) ಬಳಕೆಯ ಮೇಲೆ ಸ್ಪಷ್ಟ ಮಿತಿಗಳನ್ನು ಹೇರಿತು. ಹೀಗಿದ್ದರೂ, ಸೆಕ್ಷನ್ 124(ಎ) ದುರ್ಬಳಕೆ ಕೊನೆಗೊಳ್ಳಲಿಲ್ಲ. ಸರ್ಕಾರವನ್ನು ಬುಡಮೇಲು ಮಾಡುವ ಪರಿಣಾಮ ಹೊಂದಿರದ ಮಾತುಗಳನ್ನು ಆಡಿದವರ ವಿರುದ್ಧ, ಪ್ರಧಾನಿಗೆ ಪತ್ರ ಬರೆದವರ ವಿರುದ್ಧ ದೇಶದ್ರೋಹದ ಆರೋಪ ಹೊರಿಸಿದ್ದಿದೆ. ಈಚಿನ ವರ್ಷಗಳಲ್ಲಿ ಈ ಕಾನೂನನ್ನು ರಾಜಕೀಯ ಹಾಗೂ ಸೈದ್ಧಾಂತಿಕ ವಿರೋಧಿಗಳನ್ನು ಹಣಿಯಲಿಕ್ಕೆ ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಸ್ವಾತಂತ್ರ್ಯವನ್ನು ದಮನ ಮಾಡಲು ಬಳಕೆಯಾಗುತ್ತಿರುವ ಈ ಸೆಕ್ಷನ್ ಅನ್ನು ಕಾನೂನಿನ ಪುಸ್ತಕದಿಂದ ಅಳಿಸಿಹಾಕಲು ಇದು ಸರಿಯಾದ ಸಂದರ್ಭ. ಐಪಿಸಿಯನ್ನು ರೂಪಿಸಿದ ಬ್ರಿಟಿಷರು, ಇಂತಹ ಕರಾಳ ಕಾನೂನನ್ನು ಜಾರಿಯಲ್ಲಿ ಇಟ್ಟಿರುವ ದೇಶ ತಮ್ಮದು ಎಂದು ಹೇಳಿಸಿಕೊಳ್ಳಲು ತಾವು ಬಯಸುವುದಿಲ್ಲ ಎಂದು ತಮ್ಮ ನೆಲದಲ್ಲಿ ದೇಶದ್ರೋಹಕ್ಕೆ ಸಂಬಂಧಿಸಿದ ಕಾನೂನನ್ನು ಕೆಲವು ವರ್ಷಗಳ ಹಿಂದೆ ರದ್ದು ಮಾಡಿದ್ದಾರೆ. ಬ್ರಿಟಿಷರು ಭಾರತೀಯರ ದನಿಯನ್ನು ಅಡಗಿಸಲು ಈ ಸೆಕ್ಷನ್ ಜಾರಿಗೆ ತಂದಿದ್ದರು. ಅವರೇ ಈ ಕಾನೂನನ್ನು ರದ್ದು ಮಾಡಿರುವಾಗ, ನಾವು ಇನ್ನೂ ಇದನ್ನು ಉಳಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ರಾಜಕೀಯ ಲಾಭ, ನಷ್ಟಗಳ ಲೆಕ್ಕಾಚಾರಕ್ಕೆ ಮುಂದಾಗದೆ ಈ ಕಾನೂನನ್ನು ಶಾಶ್ವತವಾಗಿ ಅಳಿಸಿಹಾಕಬೇಕು. ಈ ಕೆಲಸ ಕಾಲಮಿತಿಯಲ್ಲಿ ಆಗಬೇಕು.

ದಿನದ ಟ್ವೀಟ್

ಎಚ್ಚರಿಕೆಯ ಪಾಠ



ಅಗತ್ಯ ವಸ್ತುಗಳ ವಿಪರೀತ ಬೆಲೆ ಏರಿಕೆ, ಭ್ರಷ್ಟಾಚಾರ, ಸ್ವಜನ-ಪಕ್ಷಪಾತ, ದುರಾಡಳಿತ & ಸರ್ವಾಧಿಕಾರಿ ಧೋರಣೆಯಂತಹ ಸಂಗತಿಗಳು ಎಲ್ಲ ಕಾಲಕ್ಕೂ ಜನಸಾಮಾನ್ಯರನ್ನು ಬಾಧಿಸುತ್ತವೆ. ಈ ಗಂಭೀರ ವಿಷಯವನ್ನು ಮರೆಮಾಚಲು ಜನಾಂಗೀಯ ತಾರತಮ್ಯ & ಹಿಂಸಾತ್ಮಕ ನೀತಿಯನ್ನು ಅನುಸರಿಸಿದ ಶ್ರೀಲಂಕಾ ದಯನೀಯವಾಗಿ ಸೋತಿದೆ. ಇದು ನಮಗೆ ಕೂಡ ಎಚ್ಚರಿಕೆಯ ಪಾಠದಂತಿದೆ!

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ



ದೇಶದ್ರೋಹಕ್ಕೆ ಸಂಬಂಧಿಸಿದ ಕಾನೂನನ್ನು ಮರುಚಿಂತನೆಗೆ ಒಳಪಡಿಸುವ ಮೋದಿ ನೇತೃತ್ವದ ಸರ್ಕಾರದ ಹಠಾತ್ ನಿರ್ಧಾರ ಹೃದಯಸ್ಪರ್ಶಿಯಾಗಿದೆ. ಆದರೆ ಇದರಿಂದ ಸುಪ್ರೀಂ ಕೋರ್ಟ್ ವಿಚಲಿತಗೊಳ್ಳಬಾರದು. ದಿನ ದೂಡುವುದು ಕಾರ್ಯಾಂಗದ ಅತ್ಯಂತ ಹಳೆಯ ತಂತ್ರ. ವಸಾಹತುಶಾಹಿ ಕಾಲದ ಭೀಕರವಾದ ಕಾನೂನು, ಸಾಂವಿಧಾನಿಕ ಮಾನದಂಡಗಳಿಗೆ ಅನುಗುಣವಾಗಿ ಇದೆಯೇ ಎಂಬುದನ್ನು ನ್ಯಾಯಮೂರ್ತಿಗಳು ಈಗಲೇ ನಿರ್ಧರಿಸಬೇಕು.

ಶೇಖರ್ ಗುಪ್ತಾ, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 11-5-1997

- **ಜನತಾದಳ ರಾಜ್ಯ ಘಟಕಕ್ಕೆ ಬಿ.ಎಲ್.ಶಂಕರ್ ಅಧ್ಯಕ್ಷ**

ಬೆಂಗಳೂರು, ಮೇ 10– ಭಿನ್ನಮತೀಯರ ತೀವ್ರ ಅಸಮಾಧಾನದ ನಡುವೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು, ಚುನಾವಣಾ ಕಣದಲ್ಲಿದ್ದ ಇಬ್ಬರು ಅಭ್ಯರ್ಥಿಗಳ ಮನವೊಲಿಸಿದ ಫಲವಾಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಆಪ್ತ ಸಂಸದ ಬಿ.ಎಲ್.ಶಂಕರ್ ಅವರು ಜನತಾದಳದ ರಾಜ್ಯ ಘಟಕದ ಅಧ್ಯಕ್ಷರಾಗಿ ಅವಿರೋಧವಾಗಿ ಇಂದು ಆಯ್ಕೆಯಾದರು.

ಈ ಆಯ್ಕೆಯೊಂದಿಗೆ ಕಳೆದ ಒಂದು ವಾರದಿಂದ ಕಾಡಿದ್ದ ಪಕ್ಷದಲ್ಲಿನ ಗೊಂದಲಕ್ಕೆ ಅಂತಿಮ ತೆರೆ ಎಳೆದಂತಾಗಿದೆ.

ಭಿನ್ನಮತೀಯ ಮುಖಂಡ ಹಾಗೂ ಮಾಜಿ ಸಚಿವ ಬಿ.ಆರ್.ಯಾವಗಲ್ ಹಾಗೂ ಮಾಜಿ ಶಾಸಕ ಬಿ.ಆರ್.ನೀಲಕಂಠಪ್ಪ ಅವರು ಸ್ಪರ್ಧೆಯಿಂದ ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡರು.

- **ಇರಾನ್ ಭೂಕಂಪ: 1 ಸಾವಿರ ಸಾವು**

ದುಬೈ, ಮೇ 10 (ಪಿಟಿಐ)– ಇರಾನಿನ ಖೋರಸಾನ್ ಪ್ರಾಂತ್ಯದಲ್ಲಿ ಇಂದು ಮಧ್ಯಾಹ್ನ ಸಂಭವಿಸಿದ ಭಾರಿ ಭೂಕಂಪದಲ್ಲಿ ಸಾವಿರಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 11-5-1972

- **1700 ವಿದ್ಯುತ್ ಮಗ್ಗಗಳು ಸ್ತಬ್ಧ: 7 ಸಹಸ್ರ ಕಾರ್ಮಿಕರಿಗೆ ನಿರುದ್ಯೋಗ**

ಬಿಜಾಪುರ, ಮೇ 10– ಬನಹಟ್ಟಿ, ರಬಕವಿ ಮತ್ತು ಮಹಾಲಿಂಗಪುರಗಳಲ್ಲಿರುವ ವಿದ್ಯುತ್ ಮಗ್ಗಗಳ ಕಾರ್ಖಾನೆಗಳು ಮುಚ್ಚಿದ್ದು, ಸುಮಾರು ಏಳು ಸಹಸ್ರ ಮಂದಿ ವಿದ್ಯುತ್ ಮಗ್ಗ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆ. ಉದ್ಯೋಗ ಒದಗಿಸಿಕೊಡಬೇಕೆಂದು ಚಳವಳಿಯನ್ನೂ ಆರಂಭಿಸಿ ಅನೇಕರು ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ.

ವಿದ್ಯುತ್ ಮಗ್ಗಗಳು ಸೀರೆ, ರವಿಕೆ ಮುಂತಾದ ಬಣ್ಣದ ಬಟ್ಟೆಗಳನ್ನು ತಯಾರಿಸಬಾರದೆಂದೂ, ಕೇವಲ ಬಿಳಿ ಬಟ್ಟೆಗಳನ್ನೇ ತಯಾರಿಸಬೇಕೆಂದೂ ಸರ್ಕಾರ ಆದೇಶ ನೀಡಿರುವುದರ ವಿರುದ್ಧ ಪ್ರತಿಭಟಿಸಿ 1700 ವಿದ್ಯುತ್ ಮಗ್ಗಗಳು ಕೆಲಸವನ್ನು ನಿಲ್ಲಿಸಿವೆ.

- **ರಾಜ್ಯದಲ್ಲಿ ಇನ್ನೊಂದು ವಿಶ್ವವಿದ್ಯಾಲಯ ಶೀಘ್ರದಲ್ಲೇ ಆರಂಭ**

ಬೆಂಗಳೂರು, ಮೇ 10– ಮೈಸೂರು ರಾಜ್ಯದಲ್ಲಿ ನಾಲ್ಕನೇ ವಿಶ್ವವಿದ್ಯಾಲಯ ಶೀಘ್ರದಲ್ಲಿಯೇ ಜನ್ಮತಾಳಲಿದೆ.

ಇನ್ನೊಂದು ವಿಶ್ವವಿದ್ಯಾಲಯ ಅಗತ್ಯವಿದೆ ಎಂಬ ತತ್ವವನ್ನು ಬೆಂಗಳೂರು, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಒಪ್ಪಿದ್ದಾರೆ.

ಪ್ರಾಥಮಿಕ ಶಿಕ್ಷಣವು ವಿಶಾಲ ದೃಷ್ಟಿಕೋನದ ಮಾರ್ಗಸೂಚಿ ಹೊಂದಿರಲಿ

ಬುನಾದಿ ಶಿಕ್ಷಣಕ್ಕೆ ಬೇಕು ಭದ್ರ ಬುನಾದಿ



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಪ್ರಾಥಮಿಕ ಅಥವಾ ಬುನಾದಿ ಶಿಕ್ಷಣವೆಂದರೆ ಮಕ್ಕಳನ್ನು ಒಂದೆಡೆ ತರಗತಿ ಕೋಣೆಯಲ್ಲಿ ಕೂಡಿಹಾಕಿ, ನೆನಪಿಟ್ಟುಕೊಳ್ಳಬೇಕಾದ ವಿಷಯವನ್ನು ಕಂಠಪಾಠದ ಮೂಲಕ ಬಲವಂತವಾಗಿ ತುರುಕುವ ಮೊದಲ ಹಂತವೆಂದು ನಮ್ಮಲ್ಲಿ ಅನೇಕರು ಪರಿಭಾವಿಸಿದ್ದಾರೆ. ಪ್ರಾಥಮಿಕ ಹಂತದಲ್ಲಿ ಸಾಕ್ಷರತೆ ಮೂಲಕ ನಿರ್ದಿಷ್ಟಗೊಳಿಸಿದ ಮೂಲ ಕೌಶಲಗಳನ್ನು ಪಡೆಯುವ ಸಾಮರ್ಥ್ಯವನ್ನು ಬೋಧಿಸುವುದು ಹಾಗೂ ಆ ಸಾಮರ್ಥ್ಯವನ್ನು ಪರೀಕ್ಷೆಯ ಮೂಲಕ ಅಳೆಯುವುದೇ ಬುನಾದಿ ಶಿಕ್ಷಣ ಎಂದು ಪ್ರತಿಪಾದಿಸಲಾಗುತ್ತಿದೆ.

ಇದಕ್ಕೆ ಹೊರತಾಗಿ, ರವೀಂದ್ರನಾಥ ಟ್ಯಾಗೋರ್ ಅವರು ಪ್ರತಿಪಾದಿಸಿದಂತೆ, ಸ್ವತಂತ್ರ ಹಾಗೂ ನಿರ್ಭಯದ ವಾತಾವರಣದಲ್ಲಿ ಮಾತ್ರ ನಿಜವಾದ ಜ್ಞಾನವನ್ನು ಪಡೆಯಬಹುದು. ಟ್ಯಾಗೋರ್ ಅವರು ಮೂರು ಅಂಶಗಳನ್ನು ದೃಢವಾಗಿ ನಂಬಿದ್ದರು. ಅವೆಂದರೆ, ಎಲ್ಲಾ ಹಂತಗಳಲ್ಲಿ ಬೋಧನಾ ಮಾಧ್ಯಮ ಮಾತೃಭಾಷೆ ಆಗಿರಬೇಕು, ಜ್ಞಾನದ ಶ್ರೀಮಂತ ಮೂಲ ಪ್ರಕೃತಿ ಆಗಿರುತ್ತದೆ ಮತ್ತು ಜ್ಞಾನವನ್ನು ಪಡೆಯುವಲ್ಲಿ ಸೃಜನಾತ್ಮಕ ಚಟುವಟಿಕೆಗಳು ಪ್ರಧಾನ ಪಾತ್ರ ವಹಿಸುತ್ತವೆ.

ಟ್ಯಾಗೋರ್ ಅವರ ಚಿಂತನೆಯಿಂದ ಪ್ರಭಾವಿತರಾಗಿದ್ದ ಮಹಾತ್ಮ ಗಾಂಧಿ, 1944ರಲ್ಲಿ ಸೇವಾಗ್ರಾಮದಲ್ಲಿ ನಡೆದ ಶಿಕ್ಷಣ ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ ಮೂಲ ಶಿಕ್ಷಣ ಕುರಿತಂತೆ ಹೀಗೆಂದಿದ್ದರು: 'ನಮ್ಮ ವರ್ತಮಾನದೊಂದಿಗೆ ನಾವು ತೃಪ್ತರಾಗಬಾರದು. ನಾವು ಮಕ್ಕಳ ಮನೆಗಳಿಗೆ ನುಗ್ಗಬೇಕು, ಅವರ ಪಾಲಕರಿಗೆ ಶಿಕ್ಷಣ ಕೊಡಿಸಬೇಕು. ಮೂಲ ಶಿಕ್ಷಣವು ಅಕ್ಷರಶಃ ಜೀವನಕ್ಕೆ ಶಿಕ್ಷಣವಾಗಬೇಕು. ಮೂಲ ಶಿಕ್ಷಣದ ವ್ಯಾಪ್ತಿಯನ್ನು ಅಗಾಧವಾಗಿ ವಿಸ್ತರಿಸಬೇಕು. ಮೂಲ ಶಿಕ್ಷಣದ ಶಾಲಾ ಶಿಕ್ಷಕ ತನ್ನನ್ನು ತಾನು ಸಾರ್ವತ್ರಿಕ ಎಂದು ಪರಿಭಾವಿಸಬೇಕು. ಅವನ ಗ್ರಾಮವೇ ಅವನ ವಿಶ್ವವಾಗಬೇಕು'.

ಆದರೆ, ಈಗಿನ ನಮ್ಮ ಶಿಕ್ಷಣ ವ್ಯವಸ್ಥೆಯು ಪ್ರಾಥಮಿಕ ಶಿಕ್ಷಣವನ್ನು ಅತ್ಯಂತ ಸಂಕುಚಿತ ದೃಷ್ಟಿಕೋನದಿಂದ ನೋಡುತ್ತಾ, ಕೇವಲ ಬುನಾದಿ ಶಿಕ್ಷಣ ಮತ್ತು ಸಂಖ್ಯಾಜ್ಞಾನ ಎಂದು ಅರ್ಥೈಸಿಕೊಂಡಿದೆ. ದುರದೃಷ್ಟವೆಂದರೆ, 2020ರ ರಾಷ್ಟ್ರೀಯ ಶಿಕ್ಷಣ ನೀತಿಯೂ ಇದೇ ಚೌಕಟ್ಟಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಅರ್ಥೈಸುತ್ತಿದೆ. ಅದರ ಭಾಗವಾಗಿ, ಪ್ರಾಥಮಿಕ ಶಾಲೆಯಲ್ಲಿನ ಹೆಚ್ಚಿನ ವಿದ್ಯಾರ್ಥಿಗಳು ಬುನಾದಿ ಶಿಕ್ಷಣ ಹಾಗೂ ಸಂಖ್ಯಾಜ್ಞಾನವನ್ನು ಪಡೆದಿಲ್ಲ ಎಂದು ನೀತಿಯು ಅಭಿಪ್ರಾಯಪಟ್ಟಿದೆ. ಹೀಗಾಗಿ, ಪ್ರಾಥಮಿಕ ಶಿಕ್ಷಣದ ಪ್ರಾರಂಭಿಕ ತಿಳಿವಳಿಕೆಯೇ ತಪ್ಪು ತರ್ಕದಿಂದ ಕೂಡಿದೆ.

ತಾತ್ವಿಕ, ಪ್ರಾಯೋಗಿಕ, ಸಂಶೋಧನಾತ್ಮಕ, ನೀತಿ ನಿರೂಪಕ ದೃಷ್ಟಿಯಿಂದ ಪ್ರಾಥಮಿಕ ಅಥವಾ ಪ್ರಾರಂಭಿಕ ಶಿಕ್ಷಣವು ಒಂದು ಸಂಕೀರ್ಣವಾದ ಸಾಮಾಜಿಕ ಹಾಗೂ ಸೃಜನಾತ್ಮಕ ಪ್ರಕ್ರಿಯೆಯಾಗಿದ್ದು, ಅದನ್ನು ಕೇವಲ ಅಕ್ಷರ ಮತ್ತು ಸಂಖ್ಯಾಜ್ಞಾನಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಪ್ರಾಥಮಿಕ ಶಿಕ್ಷಣವು ಈ ಸಂಕುಚಿತ ಚೌಕಟ್ಟನ್ನು ಮೀರಿದ್ದಾಗಿದೆ. ಅದು ಹಲವಾರು ವಿಭಿನ್ನ ಅಂಶಗಳು ಹಾಗೂ ಆಯಾಮಗಳ ಮಿಶ್ರಣವಾಗಿದೆ. ಬುನಾದಿ ಶಿಕ್ಷಣವು ಭಾವನಾತ್ಮಕ, ಶೈಕ್ಷಣಿಕ, ದೈಹಿಕ, ನೈತಿಕ, ಸೌಂದರ್ಯ ಮತ್ತು ಆಧ್ಯಾತ್ಮಿಕ ಆಯಾಮಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿಗಳು ಹಾಗೂ ಸಮಾಜದ ನಡುವಣ ಪರಸ್ಪರ ಸಾಮಾಜಿಕ ಸಂಬಂಧಗಳನ್ನು ಬೆಸೆಯುವ ಮನೋಧರ್ಮದ ಬೆಳವಣಿಗೆಯಲ್ಲಿ ಅದು ನಿರ್ಣಾಯಕವಾಗಿದೆ. ಜೊತೆಗೆ, ಮಕ್ಕಳು ಕೇಳಬಹುದಾದ, ಊಹೆಗೆ ನಿಲುಕದ ಎಲ್ಲಾ ಬಗೆಯ ಕಠಿಣ ಪ್ರಶ್ನೆಗಳನ್ನೂ ಒಳಗೊಂಡಿರುತ್ತದೆ. ಅವುಗಳಲ್ಲಿ ಹಲವು ಪ್ರಶ್ನೆಗಳು ಉತ್ತರಕ್ಕೆ ನಿಲುಕದಂತೆ ಸಂಕೀರ್ಣವಾದವೂ ಕೆಲವೊಮ್ಮೆ ವಿವಾದಾತ್ಮಕವೂ ಆಗಿರುತ್ತವೆ.

ಪ್ರಾಥಮಿಕ ಶಿಕ್ಷಣವೆಂದರೆ ಬರೀ ಕಂಠಪಾಠ, ಸ್ಮರಣೆ, ಬೋಧನೆ, ಉಪದೇಶ, ಏಕಮುಖ ಕಲಿಕೆ ಇತ್ಯಾದಿಗಳ ಮೂಲಕ ಮಕ್ಕಳಿಗೆ ಮಾಹಿತಿ ನೀಡಿ, ಪರೀಕ್ಷೆಗಳಲ್ಲಿ ಪುನರ್ ಒಪ್ಪಿಸುವ ಪ್ರಕ್ರಿಯೆಯಲ್ಲ. ಬದಲಿಗೆ, ಮಕ್ಕಳು ಶಾಲೆಗೆ ಬರುವ ಮುನ್ನವೇ ಕುಟುಂಬ, ಸಮುದಾಯ ಹಾಗೂ ಸಹಪಾಠಿಗಳ ಒಡನಾಟದಿಂದ ಕಲಿತು ಹೊತ್ತು ತಂದಿರುವ ಬುನಾದಿ ಜ್ಞಾನದ ಮೂಟೆಯನ್ನು ಬಿಚ್ಚಿಡುವ ಮೂಲಕ ಹೊಸ ಜ್ಞಾನವನ್ನು ಕಟ್ಟಿಕೊಡುವ, ವಿಸ್ತರಿಸುವ ಹಾಗೂ ಹೊಸದನ್ನು ಸೃಷ್ಟಿಸುವ ಪ್ರಕ್ರಿಯೆಯಾಗಬೇಕು. ಈ ಪ್ರಕ್ರಿಯೆ ಒಂದು ಜಂಟಿ ಹಾಗೂ ಸಾಮೂಹಿಕ ಪ್ರಕ್ರಿಯೆಯಾಗಿದ್ದು, ಇಲ್ಲಿ ಶಿಕ್ಷಕರ ಪಾತ್ರ ವಿಭಿನ್ನವಾಗಿರುತ್ತದೆ. ಶಿಕ್ಷಣ ಒಂದು ಸಾಮಾಜಿಕ ಪ್ರಕ್ರಿಯೆ. ಶಿಕ್ಷಣ ವ್ಯವಸ್ಥೆಯು ಅಲ್ಲಿನ ಸಾಮಾಜಿಕ ಸನ್ನಿವೇಶದ ಭಾಗವಾಗಿರುತ್ತದೆ. ಆದ್ದರಿಂದಲೇ, ಶಾಲೆಯನ್ನು ನಾವು ಒಂದು ಪುಟ್ಟ ಸಮಾಜವೆಂದು ಪರಿಭಾವಿಸಿದ್ದೇವೆ.

ಸಮಾಜದಲ್ಲಿನ ಜಾತಿ, ಆರ್ಥಿಕ ಸ್ಥಿತಿಗತಿ, ಲಿಂಗ ಸಂಬಂಧಿ ಶ್ರೇಣಿಗಳು, ಸಾಂಸ್ಕೃತಿಕ ವೈವಿಧ್ಯದಂತಹ ಸಂಗತಿಗಳು ಜ್ಞಾನ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದು ವಿವಿಧ ಸಾಮಾಜಿಕ ಮತ್ತು ಆರ್ಥಿಕ ಗುಂಪುಗಳ ನಡುವಿನ ತೀಕ್ಷ್ಣವಾದ ಅಸಮಾನತೆಗಳಲ್ಲಿ ಪ್ರತಿಫಲಿಸುತ್ತದೆ. ಶಾಲಾ ದಾಖಲಾತಿ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವವರ ಅಂಕಿ-ಅಂಶಗಳಲ್ಲಿ ಕಂಡುಬರುತ್ತದೆ. ಹೀಗಾಗಿ, ಗ್ರಾಮೀಣ ಮತ್ತು ನಗರ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಮಕ್ಕಳು ಶೈಕ್ಷಣಿಕವಾಗಿ ಹೆಚ್ಚು ದುರ್ಬಲರಾಗಿರುತ್ತಾರೆ. ನಗರ ಪ್ರದೇಶಗಳಲ್ಲಿ ಮತ್ತು ಅನೇಕ ಹಳ್ಳಿಗಳಲ್ಲಿ ಶಾಲಾ ವ್ಯವಸ್ಥೆಯು ಸ್ವತಃ ಶ್ರೇಣೀಕೃತವಾಗಿದ್ದು ಮಕ್ಕಳಿಗೆ ಗಮನಾರ್ಹವಾದ ವಿಭಿನ್ನ ಸಾಮಾಜಿಕ, ಶೈಕ್ಷಣಿಕ ಅನುಭವಗಳನ್ನು ನೀಡುತ್ತದೆ. ಇಂತಹ ಸಾಮಾಜಿಕ ಸನ್ನಿವೇಶದಲ್ಲಿ, ಕಲಿಕೆಯ ಸಮಾನ ಅವಕಾಶಗಳು ಲಭ್ಯವಾಗುವುದಿಲ್ಲ.



ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿದು, ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ ಹೆಚ್ಚಿದ ಕಾರಣ, ಸಾಮೂಹಿಕ ಕಲಿಕೆಯ ವಿಧಾನದಲ್ಲಿ ಕಲಿಸುವಾಗ ವೈಯಕ್ತಿಕವಾಗಿ ಕಲಿಕೆಯಲ್ಲಿ ಹಿಂದೆ ಬೀಳಬಹುದಾದ ಸಾಧ್ಯತೆ ಇರುತ್ತದೆ. ಇಂತಹ ಮಕ್ಕಳಿಗೆ ಪೂರಕ ಕಲಿಕಾ ವ್ಯವಸ್ಥೆಯ ಬಗ್ಗೆಯೂ ಸಮಾನವಾದ ಕಾಳಜಿ ಮತ್ತು ಮಹತ್ವ ನೀಡಬೇಕಾದ ಅವಶ್ಯಕತೆಯಿದೆ. ಈ ಎಲ್ಲ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಪ್ರಾಥಮಿಕ ಶಿಕ್ಷಣವು ಅಕ್ಷರ ಮತ್ತು ಸಂಖ್ಯಾಜ್ಞಾನದ ಸಾಕ್ಷರತೆಯ ಪರಿಧಿಯನ್ನು ಮೀರಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬುನಾದಿಯಾಗಬೇಕಿದೆ. ಶಿಕ್ಷಣಶಾಸ್ತ್ರದ ದೃಷ್ಟಿಯಿಂದ, ನಮ್ಮ ಪಠ್ಯಕ್ರಮದ ಪರಿಕಲ್ಪನೆಗಳು, ಸಾಮಗ್ರಿಗಳು ಹಾಗೂ ಕಲಿಕಾ ವಾತಾವರಣವು ಸಾಕ್ಷರತೆಯ ಚೌಕಟ್ಟಿನಿಂದ ಹೊರಬಂದು ಹೊಸದಾಗಿ ರೂಪುಗೊಳ್ಳಬೇಕಿದೆ.

ಈ ಹಿನ್ನೆಲೆಯಲ್ಲಿ, ಪ್ರಾಥಮಿಕ ಶಿಕ್ಷಣದಲ್ಲಿ ಜ್ಞಾನದ ಪರಿಕಲ್ಪನೆಯನ್ನು ಮಾನವೀಯ ನೆಲೆಯಲ್ಲಿ ಸಾಮಾಜಿಕ ಮೌಲ್ಯಗಳಾದ ಸಹಿಷ್ಣುತೆ, ಸಹಕಾರ, ಸೌಹಾರ್ದ, ಪ್ರೀತಿ, ಸಹಬಾಳ್ವೆ ಮತ್ತು ಎಲ್ಲರ ಒಳಿತಿಗಾಗಿ ಎಲ್ಲರೂ ಎಂಬ ದೃಢ ಮನಃಸ್ಥಿತಿಯನ್ನು ಕಟ್ಟಿಕೊಡುವ ಹೊಸ ಬಗೆಯ ಶಿಕ್ಷಣವನ್ನಾಗಿ ನೋಡಬೇಕಿದೆ. ಈ ಬಗೆಯ ಶಿಕ್ಷಣವು ಎಲ್ಲಾ ಹಂತದಲ್ಲಿ ಎಲ್ಲರ ಒಳಗೊಳ್ಳುವಿಕೆ ಹಾಗೂ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಕಲಿಕಾ ಅನುಭವಗಳನ್ನು ಕಟ್ಟಿಕೊಡಬೇಕಿದೆ. ಜೊತೆಗೆ, ನಮ್ಮ ಪಠ್ಯಕ್ರಮ, ಪಠ್ಯವಸ್ತು ಹಾಗೂ ಪಠ್ಯಪುಸ್ತಕಗಳ ಆಯ್ಕೆಯು ಒಳಗೊಳ್ಳುವಿಕೆ, ಸಾಮೂಹಿಕ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಜಾಗರೂಕವಾಗಿರುವ ಶಿಕ್ಷಣ ಅಭ್ಯಾಸಗಳನ್ನು ಒದಗಿಸುವಂತೆ ಇರಬೇಕಿದೆ. ಕೇವಲ ಪರೀಕ್ಷೆಗಾಗಿ ಕಲಿಕೆ ಎನ್ನುವ ಬದಲು, ಆತ್ಮವಿಶ್ವಾಸ, ವಿಮರ್ಶಾತ್ಮಕ ಅರಿವು, ಹೊಸದನ್ನು ನಿರ್ಮಿಸುವ ಮತ್ತು ಸಮುದಾಯದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅನುವಾಗುವ ರೀತಿಯಲ್ಲಿ ರೂಪುಗೊಳ್ಳಬೇಕಿದೆ. ಇದು ಸಾಕ್ಷರತೆಗಿಂತ ದೊಡ್ಡ ಸವಾಲು ಎಂಬುದನ್ನು ನೀತಿ ನಿರೂಪಕರು ಮನಗಾಣಬೇಕಿದೆ.

ಒಟ್ಟಾರೆ, ಬುನಾದಿ ಪ್ರಾಥಮಿಕ ಶಿಕ್ಷಣದ ಗುರಿ ಹಾಗೂ ಶೈಕ್ಷಣಿಕ ಪ್ರಕ್ರಿಯೆಗಳನ್ನು ಕೇವಲ ಅಕ್ಷರ ಮತ್ತು ಸಂಖ್ಯಾಜ್ಞಾನದ ಸಾಕ್ಷರತೆಗೆ ಸೀಮಿತಗೊಳಿಸದೆ ವಿಶಾಲವಾದ ಮಾರ್ಗಸೂಚಿಗಳನ್ನು ಅವು ಹೊಂದಿರಬೇಕು. ಈ ಬುನಾದಿ ಹಂತದ ಶಿಕ್ಷಣದ ಗುರಿಗಳು ಸಮಾಜದ ಪ್ರಸ್ತುತ ಅಗತ್ಯ, ಆಕಾಂಕ್ಷೆ, ಮಾನವೀಯ ಮೌಲ್ಯ ಹಾಗೂ ಎಲ್ಲ ಸಮುದಾಯಗಳ ತಕ್ಷಣದ ಕಾಳಜಿಗಳನ್ನು ಪ್ರತಿಬಿಂಬಿಸುತ್ತ, ಬಹುತ್ವ, ಬಹುಭಾಷೆ, ಶಾಂತಿಯುತ ಸಹಬಾಳ್ವೆ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಮಕ್ಕಳಲ್ಲಿ ರೂಪಿಸುವ ಸೃಜನಶೀಲ ಪ್ರಕ್ರಿಯೆಯಾಗಬೇಕು.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ಚುರುಮುರಿ



ಹುದ್ದೆ ಖರೀದಿ

• ಮಣ್ಣೆರಾಜು

ತಮ್ಮ ಮಗನಿಗೊಂದು ಉದ್ಯೋಗ ಖರೀದಿಸಲು ಶಂಕ್ರಿ, ಸುಮಿ ಹುದ್ದೆ ಅಂಗಡಿಗೆ ಬಂದಿದ್ದರು.

'ಗುಣಮಟ್ಟದ, ದೀರ್ಘ ಬಾಳಿಕೆ ಬರುವ ಹುದ್ದೆ ತೋರಿಸಿ...' ಎಂದ ಶಂಕ್ರಿ.

'ಖಾಕಿ ಕಲರ್‌ನ ಪೊಲೀಸ್ ಆಫೀಸರ್, ವೈಟ್ ಕಲರ್‌ನ ಡಾಕ್ಟರ್ ಹುದ್ದೆ ತೋರಿಸಲಾ?' ಅಂಗಡಿಯವ ಕೇಳಿದ.

'ಬೇರೆ ಕಲರ್, ಡಿಸೈನಿನ ಹುದ್ದೆಗಳಿಲ್ಲವಾ?' ಸುಮಿ ಕೇಳಿದಳು.

'ಎಲ್ಲಾ ಕಲರ್‌ಗಳಲ್ಲಿ ಎಂಜಿನಿಯರ್, ಲೆಕ್ಚರರ್, ಗೆಜೆಟೆಡ್ ಆಫೀಸರ್ ಹೀಗೆ ವೆರೈಟಿ ಹುದ್ದೆಗಳು ನಮ್ಮಲ್ಲಿವೆ' ಎಂದ.

'ಮಮ್ಮಿ, ನನಗೆ ಎಂಜಿನಿಯರ್ ಬೇಡ, ಡಾಕ್ಟರ್ ಹುದ್ದೆ ಕೊಡಿಸಿ' ಮಗ ಹಟ ಮಾಡಿದ.

'ಬೇಡ್ವೋ, ಡಾಕ್ಟರ್ ಕಾಸ್ಟ್‌ಲಿ, ಬೇಕಾದ್ರೆ ವೆಟರ್ನರಿ ಡಾಕ್ಟರ್ ಹುದ್ದೆ ಕೊಡಿಸ್ತೀನಿ' ಅಂದ ಶಂಕ್ರಿ.

'ಯಾವುದೂ ಬೇಡ, ಸದ್ಯಕ್ಕೆ ಲೆಕ್ಚರರ್ ಆಗು, ಆಮೇಲೆ ಯಾವುದಾದರೂ ಯೂನಿವರ್ಸಿಟಿಯಲ್ಲಿ ಡಾಕ್ಟರೇಟ್ ಕೊಡುಸ್ತೀವಿ' ಸುಮಿ ಸಮಾಧಾನ ಹೇಳಿದಳು.

'ಬೈ ಒನ್, ಗೆಟ್ ಒನ್ ಆಫರ್ ಇದೆಯಾ?' ಶಂಕ್ರಿ ಕೇಳಿದ.

'ನನ್ನ ಮೈದುನ ಕೆಲಸವಿಲ್ಲದೆ ಪೋಲಿ ಅಲೀತಿದ್ದಾನೆ, ಅವನಿಗೊಂದು ಗುಮಾಸ್ತ ಹುದ್ದೆ ಕೊಡಿಸಿ ಜವಾಬ್ದಾರಿ ಕಳ್ಕೊಳ್ಳೋಣ ಅಂತ...' ಅಂದಳು ಸುಮಿ.

'ಕಲರ್, ಕಸುಬು ಇಷ್ಟ ಆಗದಿದ್ದರೆ ಹುದ್ದೆಯನ್ನು ಎಕ್ಸ್‌ಚೇಂಜ್ ಮಾಡಬಹುದಾ?' ಶಂಕ್ರಿ ಕೇಳಿದ.

'ನೋ ಎಕ್ಸ್‌ಚೇಂಜ್...'

'ರೀ, ನಿಮ್ಮ ಹುದ್ದೆ ಹಳೆಯದಾಗಿದೆ, ಹೊಸದನ್ನು ಕೊಂಡುಕೊಳ್ಳಿ...' ಸುಮಿ ಗಂಡನಿಗೆ ಹೇಳಿದಳು.

'ಸಾರ್, ನಿಮ್ಮ ಏಜಿಗೆ, ಸೈಜಿಗೆ ಮ್ಯಾಚಾಗುವ ಮಂತ್ರಿ, ಮುಖ್ಯಮಂತ್ರಿ ಹುದ್ದೆಗಳಿವೆ'.

'ಬೇಡಾರೀ, ಅಷ್ಟೊಂದು ದುಡ್ಡಿಲ್ಲ...'

'ಈಗ ಫಾರ್ಟಿ ಪರ್ಸೆಂಟ್ ಕೊಡಿ. ಬಾಕಿ ಹಣವನ್ನು ಕಂತುಗಳಲ್ಲಿ ಪಾವತಿಸಬಹುದು...' ಅಂಗಡಿಯವ ಆಫರ್ ಕೊಟ್ಟ...

ಮಲಗಿದ್ದ ಶಂಕ್ರಿಯ ನಿದ್ರೆ ಭಂಗ ಮಾಡಿದ ಸುಮಿ, 'ರೀ, ಇವತ್ತು ಟೀವಿ ಸಾಲದ ಕಂತು ಕಟ್ಟಬೇಕು...' ಎಂದು ಜ್ಞಾಪಿಸಿದಳು.

ಸಂಗತ

ಜೀವದಾಯಿನಿಯರು ಜೀವ ಕಳೆದುಕೊಂಡಾರು!

ನೀರಿಗೆ ಹಾಹಾಕಾರ ತಪ್ಪಿಸಲು ಪಾರಂಪರಿಕ ಜಲಮೂಲಗಳನ್ನು ಕಾಪಿಟ್ಟುಕೊಳ್ಳಬೇಕಾದ ತುರ್ತು ಹೊಣೆಗಾರಿಕೆ ಎಲ್ಲರ ಮೇಲಿದೆ

• ರೂಪ ಹಾಸನ

ಹಿಂದೆ ಮಳೆಯ ಪ್ರಮಾಣ ಕಡಿಮೆ ಇದ್ದ ಬಯಲುಸೀಮೆಯ ಪ್ರದೇಶಗಳಲ್ಲಿ ಕೂಡ ಈ ಕೆಲ ವರ್ಷಗಳಲ್ಲಿ ಅಕಾಲಿಕವಾಗಿ ವಿಪರೀತ ಮಳೆ! ಆದರೆ ಇದಾದ ಕೆಲವೇ ತಿಂಗಳಲ್ಲಿ ಮತ್ತೆ ಜಲಮೂಲಗಳಲ್ಲಿ ನೀರು ಒಣಗಿ ಹಾಹಾಕಾರ. ಹಾಗಿದ್ದರೆ ಆ ಪ್ರಮಾಣದಲ್ಲಿ ಬಿದ್ದ ಮಳೆನೀರು ಏನಾಯಿತು? ನಾವು ಅದನ್ನು ಪರಿಣಾಮಕಾರಿಯಾಗಿ ಹಿಡಿದಿಡುವ ತಯಾರಿಯನ್ನೇ ತಕ್ಕಮಟ್ಟಿಗೆ ಮಾಡಿಕೊಂಡಿಲ್ಲ!

ಕೆಲ ಪ್ರಮಾಣದಲ್ಲಿ ಅಣೆಕಟ್ಟೆಗಳಲ್ಲಿ ನೀರನ್ನು ಹಿಡಿದಿಡುತ್ತಿರಬಹುದು. ಆದರೆ ಹಾಗೆ ಬೃಹತ್ ಅಣೆಕಟ್ಟೆಯಲ್ಲಿ ನೀರು ಕೂಡಿಡುವುದೇ ಅನೇಕ ಬಗೆಯಲ್ಲಿ ಗಂಡಾಂತರಕಾರಿಯಾಗಿ ಪರಿಣಮಿಸುತ್ತಿರುವುದನ್ನು ಜಗತ್ತಿನಾದ್ಯಂತ ಕಾಣುತ್ತಿದ್ದೇವೆ. ಕಾಲಾಂತರದಲ್ಲಿ ಅಲ್ಲಿ ಶೇಖರವಾಗುವ ಅಗಾಧ ಹೂಳೂ ಸಮಸ್ಯೆಯೇ. ಹೀಗಾಗೇ ಬಿದ್ದ ಮಳೆ ನೀರನ್ನು ಸ್ಥಳೀಯ ಮಟ್ಟದಲ್ಲಿ ಹಿಡಿದಿಡುವ ನಮ್ಮ ಪಾರಂಪರಿಕ ಜಲಮೂಲಗಳು ಜೀವದಾಯಿನಿಯರಾಗಿ ಗೋಚರಿಸುತ್ತಿವೆ!

ಕರ್ನಾಟಕದಲ್ಲಿ ಮಳೆ ನೀರು ಸಂಗ್ರಹಕ್ಕೆಂದೇ ಪಾರಂಪರಿಕ ಜಲಮೂಲಗಳಾದ 39,179 ಕೆರೆಗಳು, ಲೆಕ್ಕವಿಲ್ಲದಷ್ಟು ತಲಪರಿಕೆ, ಬಾವಲಿ, ಬಾವಿ, ಜೋಹಡ್, ಕಟ್ಟೆ, ಕೊಳ, ಕಲ್ಯಾಣಿ, ಮದಗ, ಕಟ್ಟಗಳಿವೆ. ದುರಂತವೆಂದರೆ, ಈ ಪಾರಂಪರಿಕ ಜಲಮೂಲಗಳಲ್ಲಿ ಕೆಲವಷ್ಟನ್ನು ಅಭಿವೃದ್ಧಿ ಹೆಸರಿನಲ್ಲಿ ಒತ್ತುವರಿ ಮಾಡಲಾಗಿದೆ, ಮತ್ತೆ ಕೆಲವು ಪಾಳು ಬಿದ್ದಿವೆ.

ಹೀಗಾಗಿ ನೀರಿನ ತೀವ್ರ ಸಂಕಷ್ಟಕ್ಕೆ ಪರಿಹಾರವಾಗಿ ಸರ್ಕಾರಕ್ಕೆ ಬೃಹತ್ ಯೋಜನೆಗಳ ಬಗ್ಗೆಯೇ ಹೆಚ್ಚಿನ ಆಸ್ಥೆ. ಯಾವುದೇ ನದಿಗೆ ಅಣೆಕಟ್ಟೆ ನಿರ್ಮಾಣ, ನದಿಗಳನ್ನು ತಿರುಗಿಸಿ ನೀರೆತ್ತುವುದು, ನದಿಗಳಿಂದ ದೂರದ ಪ್ರದೇಶಕ್ಕೆ ನೀರು ಕೊಂಡೊಯ್ಯುವುದು ಅಥವಾ ನದಿ ಜೋಡಣೆ... ಇಂತಹವೇ! ಆದರೆ ಇವೆಲ್ಲ ಪ್ರಾಕೃತಿಕವಾಗಿ ಶಾಶ್ವತ ಹಾನಿಯುಂಟು ಮಾಡುವಂತಹವು. ಮತ್ತಿವುಗಳ ಅನುಷ್ಠಾನಕ್ಕೆ ದಶಕಗಳೇ ಬೇಕು. ಆರ್ಥಿಕವಾಗಿಯಂತೂ ಬಲು ದುಬಾರಿ. ಜೊತೆಗೆ ಬೃಹತ್ ಭ್ರಷ್ಟಾಚಾರಕ್ಕೂ ದಾರಿ. ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಹಲವು ಗ್ರಾಮಗಳ ಮುಳುಗಡೆ, ಜನಜೀವನಕ್ಕೆ ಅಪಾರ ಸಂಕಷ್ಟ. ಜನರ, ಗ್ರಾಮಗಳ ಸ್ಥಳಾಂತರ ಮತ್ತು ಸ್ಥಿತ್ಯಂತರದಿಂದ ಸಂತ್ರಸ್ತ ಕುಟುಂಬಗಳಿಗೆ ಶಾಶ್ವತ ಯಾತನೆ.

ಅರಣ್ಯವನ್ನು ಒಳಗೊಂಡು ಯೋಜನೆ ಅನುಷ್ಠಾನ ಆಗುವಂತೆ ಇದ್ದರೆ ದಟ್ಟಕಾಡು ನಾಶವಾಗುತ್ತದೆ. ಯೋಜನೆ ಅನುಷ್ಠಾನದಿಂದ ಕಾಡಿನಲ್ಲಿ ಅಲ್ಲೋಲ ಕಲ್ಲೋಲವಾಗಿ ಜೀವವ್ಯವಸ್ಥೆಯೇ ದಿಕ್ಕಾಪಾಲಾಗುತ್ತದೆ. ಅರಣ್ಯವಾಸಿಗಳು ಅನಾಥರಾಗುತ್ತಾರೆ. ಅರಣ್ಯದ ಪ್ರಮಾಣ ಕಡಿಮೆಯಾದಂತೆ, ವನ್ಯಜೀವಿ– ಮನುಷ್ಯ ಸಂಘರ್ಷಕ್ಕೆ ಕಾರಣವಾಗುತ್ತದೆ. ತೀವ್ರವಾದ ಹವಾಮಾನ ವೈಪರೀತ್ಯ, ತಾಪಮಾನ ಏರಿಕೆಯಿಂದ ಭೂಮಿ ಮತ್ತು ಸಕಲ ಚರಾಚರಗಳು ಜರ್ಜರಿತವಾಗುತ್ತಿರುವ ಈ ಕಠೋರ ಸಂದರ್ಭದಲ್ಲಂತೂ ಪ್ರಕೃತಿ ನಾಶದ ಇಂತಹ ಎಲ್ಲ ಯೋಜನೆಗಳನ್ನೂ ಸರ್ಕಾರಗಳು ಶತಾಯಗತಾಯ ಕೈಗೆತ್ತಿಕೊಳ್ಳುವುದಿಲ್ಲವೆಂದು ಶಪಥ ಮಾಡಬೇಕಿದೆ. 'ಪ್ರಕೃತಿಯ ಸಕಲ ಸಂರಚನೆಗೂ ಜೀವವಿದೆ' ಎನ್ನುವ ಉದಾತ್ತ ಮನೋಭಾವ ನಮ್ಮ ಕಾನೂನಿಗೆ ಹಾಗೂ ಜನಪ್ರತಿನಿಧಿಗಳಿಗೆ ತುರ್ತಾಗಿ ಬರಬೇಕಿದೆ.

ದಶಕಗಳಿಂದ ಕೊಳವೆಬಾವಿಗಳನ್ನು ಸಾವಿರಗಟ್ಟಲೆ ಅಡಿ ಆಳದವರೆಗೆ ಕೊರೆಯುತ್ತಿರುವುದರಿಂದ ಅಂತರ್ಜಲದ ಪ್ರಮಾಣ ಕ್ಷೀಣಿಸಿದೆ. ಜೊತೆಗೆ ಇದರಲ್ಲಿ ರಾಸಾಯನಿಕ ವಿಷಯುಕ್ತ ನೀರು ಉತ್ಪತ್ತಿಯಾಗುತ್ತಿದೆ. ಅದನ್ನೇ ಕುಡಿದು, ಅನೇಕ ಭಾಗಗಳಲ್ಲಿ ಜನ- ಜಾನುವಾರುಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾಗಿದೆ. ಹೀಗಾಗಿ ಹೊಸದಾಗಿ ಕೊಳವೆ ಬಾವಿ ಕೊರೆಯುವುದನ್ನೂ ಶಾಶ್ವತವಾಗಿ ನಿರ್ಬಂಧಿಸಬೇಕೆಂದು ತಜ್ಞರು ಆಗ್ರಹಿಸುತ್ತಿದ್ದಾರೆ. ನದಿ ಜೋಡಣೆಯಂತಹ ಅನೈಸರ್ಗಿಕ ವಿಧಾನದ ಕುರಿತು ಸರ್ಕಾರಗಳು ಚರ್ಚೆ ನಡೆಸುತ್ತಿರುವುದೂ ಆತಂಕಕಾರಿ. ಏಕೆಂದರೆ ಇದು ಪ್ರಕೃತಿಯ ಚಲನೆಗೆ ವಿರುದ್ಧವಾದುದು ಮಾತ್ರವಲ್ಲ, ಈಗಾಗಲೇ ಅನೇಕ ದೇಶಗಳಲ್ಲಿ ಅನುಷ್ಠಾನಗೊಂಡ ಇಂತಹ ಯೋಜನೆಗಳು ಕಾಲಾಂತರದಲ್ಲಿ ಗಂಡಾಂತರಕಾರಿಯಾಗಿಯೂ ಪರಿಣಮಿಸಿವೆ.



ಇವೆಲ್ಲವುಗಳ ಬದಲಿಗೆ ನೈಸರ್ಗಿಕವಾದ, ಕಡಿಮೆ ಖರ್ಚಿನ ಹಾಗೂ ಪರಿಸರಕ್ಕೆ ಹೆಚ್ಚಿನ ಹಾನಿಯಾಗದಂತಹ, ಪ್ರಕೃತಿಯಿಂದಲೇ ಪ್ರಕೃತಿಯನ್ನು ಪುನರ್ ಸೃಷ್ಟಿಸುವ ಪರಿಹಾರಗಳನ್ನು ಮಾತ್ರ ನಾವಿಂದು ಅಳವಡಿಸಿಕೊಳ್ಳಬೇಕಿದೆ. ಅದಕ್ಕಾಗಿ ಸಾಧ್ಯವಾದಷ್ಟೂ ಮಳೆನೀರನ್ನು ಅದು ಬಿದ್ದಲ್ಲೇ ಪಾರಂಪರಿಕ ಜಲಮೂಲಗಳಲ್ಲಿ ಸಂಗ್ರಹ ಮಾಡಿ ಅಂತರ್ಜಲ ಹೆಚ್ಚಿಸುವುದು ನೀರಿನ ಸಂಕಷ್ಟಕ್ಕೆ ದೊಡ್ಡ ಪರಿಹಾರ. ಇದು ಭೂ ತಾಪಮಾನ, ಬರ ಮತ್ತು ನೆರೆಯನ್ನು ಏಕಕಾಲಕ್ಕೆ ಸಮರ್ಪಕವಾಗಿ, ವೈಜ್ಞಾನಿಕವಾಗಿ ನಿರ್ವಹಿಸುವ ವಿಧಾನ ಎಂಬುದೂ ಜಲತಜ್ಞರು, ಪ್ರಾಜ್ಞರ ನಿಲುವು.

ಈ ವಿವೇಕ ಕಾರ್ಯಗತಗೊಳ್ಳಲು, ನಮ್ಮ ಪ್ರತಿಯೊಂದು ಗ್ರಾಮದ ಜಲಮೂಲಗಳ ಒತ್ತುವರಿಯನ್ನು ಕಾಲಕಾಲಕ್ಕೆ ತೆರವುಗೊಳಿಸಿ, ಹೂಳೆತ್ತಬೇಕಿದೆ. ಬಿದ್ದ ಮಳೆ ನೀರನ್ನು ಮುಂದಕ್ಕೆ ಹರಿಯಲು ಬಿಡದೆ ಸಾಧ್ಯವಾದಷ್ಟೂ ಬಿದ್ದಲ್ಲೇ ಸಂಗ್ರಹಿಸಿ, ಅಂತರ್ಜಲ ಮರುಪೂರಣ ಮಾಡಬೇಕಿದೆ. ಹವಾಮಾನ ವೈಪರೀತ್ಯದಿಂದಾಗಿ ಮುಂದಿನ ದಿನಗಳಲ್ಲಿ ಇನ್ನಷ್ಟು ಅಕಾಲಿಕ ಮಳೆಯನ್ನು ಎದುರಿಸಬೇಕಾದುದಂತೂ ಶತಃಸಿದ್ಧ. ಹೀಗಾಗಿ, ಯಾವುದೇ ಕಾಲದಲ್ಲಿ ಎಲ್ಲಿಯೇ ಮಳೆ ಬೀಳಲಿ, ಅದನ್ನು ವ್ಯರ್ಥಗೊಳಿಸದೆ ಕಡ್ಡಾಯವಾಗಿ ಹಿಡಿದಿಡುವುದಕ್ಕೆ ಎಲ್ಲೆಡೆ ದೊಡ್ಡಮಟ್ಟದ ವ್ಯಾಪಕ ಸಿದ್ಧತೆ ಆಗಬೇಕಿದೆ. ಅದಕ್ಕಿದು ಸಕಾಲ.

ವಾಚಕರ ವಾಣಿ

ಸಂವೇದನಾಶೀಲ ಸೇವೆ ವಿಸ್ತರಣೆಯಾಗಲಿ

ರೈತರ ಜಾನುವಾರುಗಳಿಗೆ ಮನೆಗೇ ಬಂದು ಚಿಕಿತ್ಸೆ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಸಂಚಾರಿ ಪಶುಚಿಕಿತ್ಸಾ ವಾಹನ ಸೇವೆಯನ್ನು ರಾಜ್ಯದಲ್ಲಿ ಆರಂಭಿಸಿರುವುದು ಉತ್ತಮ ಬೆಳವಣಿಗೆ. ಪಶುಸಂಗೋಪನಾ ಇಲಾಖೆಯ ಸಹಾಯವಾಣಿ ಸಂಖ್ಯೆಗೆ ಕರೆ ಮಾಡುವ ಮೂಲಕ ಜಾನುವಾರುಗಳ ಮಾಲೀಕರು ತಮ್ಮ ಪಶುಗಳಿಗೆ ವೈದ್ಯಕೀಯ ಚಿಕಿತ್ಸೆ ಕೊಡಿಸಬಹುದಾಗಿದೆ. ಈ ಪಶುಚಿಕಿತ್ಸಾ ಆಂಬುಲೆನ್ಸ್ ಸೇವೆಯಿಂದ ಅನಾರೋಗ್ಯಪೀಡಿತ ಹಲವಾರು ಜಾನುವಾರುಗಳನ್ನು ರಕ್ಷಿಸಬಹುದಾಗಿದೆ. ಸಂವೇದನಾಶೀಲವಾಗಿರುವ ಈ ಸೇವೆಯನ್ನು ಬೀದಿ ನಾಯಿಗಳು ಮತ್ತು ಮಂಗಗಳಿಗೂ ಅನ್ವಯಿಸುವಂತಾದರೆ ಒಳ್ಳೆಯದು.

ರಾಸುಮ ಭಟ್, ಚಿಕ್ಕಮಗಳೂರು

ಲಂಚ ಕೊಡುವುದೆಂದರೆ ಸುಮ್ಮನೆಯೇ?!

₹ 40 ಲಕ್ಷದಿಂದ ಕೋಟಿಯವರೆಗೆ ಲಂಚ ಕೊಟ್ಟು ಸಬ್ಇನ್‌ಸ್ಪೆಕ್ಟರ್ ಆಗಿಬಿಡುತ್ತಿದ್ದರಲ್ಲಾ ಎಂದು ಹಿಡಿಶಾಪ ಹಾಕುವವರೇ ಎಲ್ಲರೂ... ಕೆಲಸ ಪಡೆದ ಮೇಲೆ ಅವರು ಪಡುವ ಪಾಡು ಗೊತ್ತೇನು ನಿಮಗೆ...?! ಪ್ರೊಬೇಷನರಿ ಅವಧಿಯ ಎರಡು ವರ್ಷದವರೆಗೆ ಉಸಿರು ಬಿಗಿ ಹಿಡಿದು ತುಟಿಕಚ್ಚಿಕೊಂಡಿರಬೇಕು. ಕೊಟ್ಟ ದುಡ್ಡು ಬಾಚಲು ಒಂದೊಂದು ದಿನವೂ ಮೈಯೆಲ್ಲಾ ಕಣ್ಣಾಗಿ ಹೋರಾಡಬೇಕು. ಕಾವಿಗೆ ಸಲಾಮು ಹಾಕುತ್ತಾ, ಖಾದಿಗಳಿಗೆ ಗುಲಾಮರಾಗುತ್ತಾ, ಸಾಮಾನ್ಯರನು ಸುಲಿಗೆ ಮಾಡುತ್ತಾ ಲಂಚದ ಹಣವನು ಲಂಚದಿಂದಲೇ ಮಾಡಿಕೊಳ್ಳಬೇಕು...

ಸುಳ್ಳು ಎಫ್‌ಐಆರ್, ಪೊಳ್ಳು ಎನ್‌ಕೌಂಟರ್, ಬ್ರೋಕರ್‌ಗಳೊಂದಿಗೆ ಅಂದರ್‌ಬಾಹರ್ ಆಟಗಳ ಆಡಬೇಕು, ಕಳ್ಳತನವ ಮಾಡಿಸಬೇಕು, ಒಳ್ಳೆತನಗಳ ಕೋರ್ಟಿಗಲೆಸಬೇಕು, ಎನ್‌ಕ್ವೈರಿಗೆ ಸಿದ್ಧರಾಗಿರಬೇಕು, ಸಸ್ಪೆಂಡ್‌ಗೆ ಬದ್ಧರಾಗಿರಬೇಕು, ಅಕ್ರಮ ಸಂಪಾದನೆಯ ಸಕ್ರಮ ಮಾಡಲು ವಿಕ್ರಮನಂತೆ ಪೋಸು ಕೊಡುತಿರಬೇಕು. ಎಷ್ಟು ಕಷ್ಟ ನೋಡಿ, ಲಂಚ ಕೊಟ್ಟು ಇನ್‌ಸ್ಪೆಕ್ಟರ್ ಆಗುವುದು!

ಜೆ.ಬಿ.ಮಂಜುನಾಥ, ಪಾಂಡವಪುರ

ನೇರ ನೇಮಕಾತಿ ತರವಲ್ಲ

ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗರ ಹುದ್ದೆಗಳ ನೇರ ನೇಮಕಾತಿಗೆ ಪಿಯು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳೇ ಮಾನದಂಡವಾಗಿದ್ದು, ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳು ಇರುವುದಿಲ್ಲ. ಕೊರೊನಾ ಕಾರಣಕ್ಕಾಗಿ ಕಳೆದ ಬಾರಿ ಪಿಯುವಿನಲ್ಲಿ ದಾಖಲೆಯ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಇಲ್ಲದೆ ಅತಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ಸದರಿ ನೇಮಕಾತಿಯಲ್ಲಿ ಅವರೇ ಆಯ್ಕೆಯಾಗುವ ಸಾಧ್ಯತೆ ಹೆಚ್ಚು.

ಸರ್ಕಾರದ ಪ್ರಮುಖ ಇಲಾಖೆಯಾದ ಕಂದಾಯ ಇಲಾಖೆಯಲ್ಲಿ ಈ ರೀತಿಯ ನೇಮಕಾತಿ ಭವಿಷ್ಯದಲ್ಲಿ ಅನೇಕ ಎಡರು ತೊಡರುಗಳಿಗೆ ದಾರಿಯಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಈ ನೇಮಕಾತಿ ವಿಧಾನವನ್ನು ಬದಲಿಸಿ, ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಸರ್ಕಾರ ಮುಂದಾಗಬೇಕಿದೆ.

ಮಧು ಎನ್.ಬಿ., ನಾರನಹಳ್ಳಿ, ದೊಡ್ಡಬಳ್ಳಾಪುರ

ಸಂತೂರ್ ಸವಿ ಉಣಿಸಿದ್ದ ಶಿಸ್ತುಗಾರ

ಪಂಡಿತ್ ಶಿವಕುಮಾರ್ ಶರ್ಮಾ ಅವರ ನಿಧನ ಸಂಗೀತ ಲೋಕಕ್ಕೆ ಆಘಾತ ತಂದಿದೆ. ಕಾಶ್ಮೀರದ ಪ್ರಸಿದ್ಧ ಶತತಂತ್ರಿ ವಾದ್ಯವನ್ನು ನವೀಕರಿಸಿ 'ಸಂತೂರ್' ಎಂದು ನಾಮಕರಣ ಮಾಡಿ ಸಂಗೀತ ಮತ್ತು ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಶಿವಜಿ ಅವರದು.

ನಮ್ಮ ಹುಬ್ಬಳ್ಳಿ– ಧಾರವಾಡಕ್ಕೆ ಅವರು ಅನೇಕ ಬಾರಿ ಬಂದು ತಮ್ಮ ಸಂತೂರ್ ಸವಿಯನ್ನು ನಮಗೆಲ್ಲ ಉಣಿಸಿದ್ದಾರೆ. ಅಂತೆಯೇ ವೇದಿಕೆಯ ಮೇಲೆ ಅವರ ಶಿಸ್ತು, ಸಂಯಮ ಮತ್ತು ತಾಳ್ಮೆ ಅಭಿನಂದನೀಯ. ಅಂಥ ಮಹಾನ್ ಕಲಾವಿದ ಜನಿಸುವುದು ದುರ್ಲಭ. ನಾವೆಲ್ಲರೂ ಅವರನ್ನು ನೋಡಿದ್ದೇವೆ ಮತ್ತು ಅವರ ಸಂತೂರ್ ವಾದನವನ್ನು ಆಲಿಸಿದ್ದೇವೆ ಎಂಬುದೇ ನಮ್ಮ ಪುಣ್ಯ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ರೈಲಿನಲ್ಲಿ ಕಳಪೆ ಆಹಾರ: ಲಘುವಾಗಿ ಪರಿಗಣಿಸದಿರಿ

ಕೆಲಸದ ನಿಮಿತ್ತ ಇತ್ತೀಚೆಗೆ ಸ್ನೇಹಿತರೊಂದಿಗೆ ದಾವಣಗೆರೆಯಿಂದ ಬೀರೂರಿಗೆ ಸಿದ್ಧಗಂಗಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುವಾಗ, ಬೆಳಗಿನ ಉಪಾಹಾರಕ್ಕೆಂದು ರೈಲಿನಲ್ಲಿಯೇ ಬರುವ ನಾಲ್ಕು ಪ್ಲೇಟ್ ಇಡ್ಲಿ– ವಡೆ ಖರೀದಿಸಿದೆವು. ಅದು ಯಾವ ರೀತಿಯಲ್ಲಿಯೂ ರುಚಿಸಲಿಲ್ಲ, ಗುಣಮಟ್ಟವೂ ಸರಿಯಾಗಿರಲಿಲ್ಲ. ಇಡ್ಲಿಗಳು ಸಂಪೂರ್ಣವಾಗಿ ಒಣಗಿದ್ದವು. ಇನ್ನು ಉದ್ದಿನ ವಡೆ ಹುಳಿಯಾಗಿ ತಿನ್ನಲು ಬಾರದಂತಿತ್ತು. ಅವುಗಳನ್ನು ತಿನ್ನದೆ ಕಸದ ಬುಟ್ಟಿಗೆ ಹಾಕಿದೆವು. ದರ ಮಾತ್ರ ತಲಾ ₹ 40. ಈ ಬಗ್ಗೆ ತಿಂಡಿ ಮಾರುವವರನ್ನು ಕೇಳೋಣವೆಂದರೆ, ಅವರು ಸ್ವಲ್ಪ ಹೊತ್ತಿನಲ್ಲಿಯೇ ಮರೆಯಾಗಿದ್ದರು. ಸಹಾಯವಾಣಿಗೆ ದೂರು ನೀಡೋಣವೆಂದರೆ, ನಮ್ಮ ಹತ್ತಿರ ಸಮಯವಿರಲಿಲ್ಲ. ತುರ್ತಾಗಿ ಹೋಗಲೇಬೇಕಾದ ಸಂದರ್ಭ.

ನಮ್ಮ ಜೊತೆಗೆ ಇದ್ದ ಸಹಪ್ರಯಾಣಿಕರೊಬ್ಬರು, 'ಅಣ್ಣಾ, ಕೆಲವೊಮ್ಮೆ ರಾತ್ರಿ ಉಳಿದವುಗಳನ್ನು ಬೆಳಿಗ್ಗೆ ಮಾರುತ್ತಾರೆ. ಬೆಳಿಗ್ಗೆ ಮಾಡಿದ್ದನ್ನು ಸಂಜೆಯವರೆಗೂ ಮಾರುತ್ತಾರೆ. ಒಮ್ಮೊಮ್ಮೆ 30, 20 ರೂಪಾಯಿಗೂ ಮಾರುತ್ತಾರೆ' ಎಂದು ಹೇಳಿದರು. ಆಹಾರ ಪದಾರ್ಥ ಉಳಿದಿದೆ ಎಂದ ಮಾತ್ರಕ್ಕೆ ಯಾವಾಗ ಬೇಕೋ ಆಗ ಮಾರುವುದು ಪ್ರಯಾಣಿಕರ ಆರೋಗ್ಯ ಮತ್ತು ಹಿತದೃಷ್ಟಿಯಿಂದ ಸೂಕ್ತವಲ್ಲ. ಇದರಿಂದ, ಯಾರೋ ಮಾಡಿದ ತಪ್ಪಿಗೆ ಎಲ್ಲರನ್ನೂ ಅದೇ ದೃಷ್ಟಿಯಿಂದ ನೋಡುವಂತಾಗಿದೆ. ಜೊತೆಗೆ ರೈಲ್ವೆ ಇಲಾಖೆಯ ಮಾನ ಕೂಡ ಹರಾಜಾಗುತ್ತಿದೆ. ಭವಿಷ್ಯದಲ್ಲಿ ಈ ಪ್ರಕ್ರಿಯೆ ಹೀಗೇ ಮುಂದುವರಿದರೆ, ರೈಲಿನಲ್ಲಿ ಕೊಂಡು ತಿನ್ನಲು ಯಾರೂ ಇಷ್ಟಪಡುವುದಿಲ್ಲ. ಈ ಬಗ್ಗೆ ಇಲಾಖೆ ಗಂಭೀರ ಚಿಂತನೆ ನಡೆಸಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ದೇಶದ್ರೋಹ’

ಕಾನೂನು ಮರುಪರಿಶೀಲನೆ ಸುತ್ತ

ದೇಶದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿರುವ ಭಾರತೀಯ ದಂಡ ಸಂಹಿತೆಯ (ಐಪಿಸಿ) 124ಎ ಸೆಕ್ಷನ್ ಅನ್ನು ಮರುಪರಿಶೀಲನೆ ನಡೆಸುವುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವುದಕ್ಕಾಗಿ ಬ್ರಿಟಿಷರು ಜಾರಿಗೆ ತಂದ ಈ ಕಾನೂನನ್ನು ರದ್ದುಪಡಿಸಬೇಕು ಎಂಬ ಆಗ್ರಹ ಸಂವಿಧಾನ ಕರಡು ರಚನಾ ಸಮಿತಿಯ ಸಭೆಯಲ್ಲಿಯೂ ಕೇಳಿ ಬಂದಿತ್ತು. ಆದರೆ, ಈ ಕಾನೂನು ಈವರೆಗೆ ಉಳಿದುಕೊಂಡು ಬಂದಿದೆ. ಕಾನೂನು ದುರ್ಬಳಕೆಯಾಗಿದೆ ಮತ್ತು ಆಗುತ್ತಿದೆ ಎಂಬ ಆರೋಪ ಹಿಂದಿನಿಂದಲೂ ಇದೆ. ಕಾನೂನಿನ ಬಳಕೆ, ದುರ್ಬಳಕೆಗೆ ತಡೆ, ಮರುಪರಿಶೀಲನೆಯ ಒತ್ತಾಯಕ್ಕೆ ಸಂಬಂಧಿಸಿದ ವಿವರಗಳು ಇಲ್ಲಿವೆ

ಹೋರಾಟಗಳ ವಿರುದ್ಧ ದೇಶದ್ರೋಹ

ಸರ್ಕಾರ, ಸರ್ಕಾರದ ನೀತಿ, ಸರ್ಕಾರದ ಮುಖ್ಯಸ್ಥರು ಮತ್ತು ಸರ್ಕಾರದ ಯೋಜನೆಗಳನ್ನು ವಿರೋಧಿಸಿ ನಡೆಸಿದ ಪ್ರತಿಭಟನೆ ಮತ್ತು ಹೋರಾಟಗಳ ವಿರುದ್ಧ ದೇಶದ್ರೋಹ ಪ್ರಕರಣಗಳನ್ನು ದಾಖಲಿಸಲಾಗಿದೆ. 2014ರ ನಂತರ ಇಂತಹ ಪ್ರವೃತ್ತಿ ಹೆಚ್ಚಾಗಿದೆ. ಹೋರಾಟಗಳನ್ನು ಹತ್ತಿಕ್ಕಲು ದೇಶದ್ರೋಹ ಕಾನೂನನ್ನು ಪ್ರಯೋಗಿಸುವುದು ಸಾಮಾನ್ಯವೆಂಬಂತೆ ಆಗಿದೆ ಎಂದು ವಿಶ್ಲೇಷಿಸಲಾಗಿದೆ.

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರುದ್ಧ ನಡೆದ ಹೋರಾಟದಲ್ಲಿ 3,800ಕ್ಕೂ ಹೆಚ್ಚು ಜನರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಸರ್ಕಾರದ ವಿರುದ್ಧ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗಿದವರ ಮೇಲೆ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಸರ್ಕಾರದ ಈ ನೀತಿಯ ವಿರುದ್ಧ ಕವನ ಕಟ್ಟಿ ಹಾಡಿದವರು, ನಾಟಕ ಪ್ರದರ್ಶಿಸಿದವರ ವಿರುದ್ಧವೂ ದೇಶದ್ರೋಹದ ಆರೋಪ ಹೊರಿಸಲಾಗಿದೆ. 2019-2020ರ ಒಟ್ಟು ಐದು ತಿಂಗಳಲ್ಲಿ ನಡೆದ ಈ ಹೋರಾಟಕ್ಕೆ ಸಂಬಂಧಿಸಿದಂತೆ, ದೇಶದಾದ್ಯಂತ 27 ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳಲ್ಲಿ ಗುರುತಿಸಲಾದ ಆರೋಪಿಗಳ ಸಂಖ್ಯೆ 109. ಆದರೆ ಗುರುತೇ ಇಲ್ಲದ 3,753 ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕೇಂದ್ರದ ಬಿಜೆಪಿ ಸರ್ಕಾರವು ಜಾರಿಗೆ ತಂದಿದ್ದ ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸಿದ ಹೋರಾಟದಲ್ಲಿ ಭಾಗಿಯಾಗಿದ್ದವರ ವಿರುದ್ಧವೂ ದೇಶದ್ರೋಹ ಪ್ರಕರಣ ದಾಖಲಾಗಿದೆ. ಈ ಸಂಬಂಧ ಒಟ್ಟು 8 ಪ್ರಕರಣ ದಾಖಲಿಸಲಾಗಿದೆ. ಒಟ್ಟು 133 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಉತ್ತರ ಪ್ರದೇಶದ ಹಾಥರಸ್‌ನಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣಗಳ ವಿರುದ್ಧ ದೊಡ್ಡಮಟ್ಟದ ಹೋರಾಟ ನಡೆದಿತ್ತು. ಈ ಹೋರಾಟದಲ್ಲಿ ಭಾಗಿಯಾಗಿದ್ದ ಪ್ರತಿಭಟನಕಾರರನ್ನು ದೇಶದ್ರೋಹ ಪ್ರಕರಣಕ್ಕೆ ಗುರಿ ಮಾಡಲಾಗಿತ್ತು.

ಪತ್ರಕರ್ತರೂ ಗುರಿ: ಈ ಮೂರೂ ಹೋರಾಟಗಳಲ್ಲಿ, ಹೋರಾಟದ ವರದಿಗಾರಿಕೆಗೆ ತೆರಳಿದ್ದ ಪತ್ರಕರ್ತರು, ಸಂತ್ರಸ್ತರ ಬಗ್ಗೆ ಅನುಕಂಪ ತೋರಿದ್ದ ಪತ್ರಕರ್ತರ ವಿರುದ್ಧವೂ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ರಾಜಕಾರಣಿಗಳು ಮತ್ತು ಸಾಮಾಜಿಕ ಹೋರಾಟಗಾರರೂ ಇದಕ್ಕೆ ಹೊರತಲ್ಲ. ರೈತ ಹೋರಾಟಕ್ಕೆ ಬೆಂಬಲ ಸೂಚಿಸಿದ್ದ ಸಂಸದ ಶಶಿ ತರೂರ್, ಹಿರಿಯ ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ, ‘ನ್ಯಾಷನಲ್ ಹೆರಾಲ್ಡ್’ನ ಮೃಣಾಲ್ ಪಾಂಡೆ, ‘ಕೌಮಿ ಆವಾಜ್’ನ ಜಾಫರ್ ಆಘಾ, ‘ದಿ ಕ್ಯಾರವಾನ್’ ಸುದ್ದಿ ಸಮೂಹದ ಅನಂತ್ ನಾಥ್ ಮತ್ತು ವಿನೋದ್ ಜೋಶ್ ವಿರುದ್ಧ ದೇಶದ್ರೋಹ ಸೆಕ್ಷನ್ ಅಡಿ ಎಫ್‌ಐಆರ್ ದಾಖಲಾಗಿದೆ. ಹಾಥರಸ್ ಅತ್ಯಾಚಾರ ವಿರುದ್ಧದ ಹೋರಾಟದ ವರದಿಗಾರಿಕೆಗೆ ತೆರಳಿದ್ದ ಕೇರಳದ ಪತ್ರಕರ್ತ ಸಿದ್ದಿಕಿ ಕಪ್ಪನ್ ಸಹ ಈ ಆರೋಪಕ್ಕೆ ಗುರಿಯಾಗಿದ್ದಾರೆ.

ಪಾಟೀದಾರ್ ಹೋರಾಟವೂ ಹೊರತಲ್ಲ: ಗುಜರಾತ್‌ನಲ್ಲಿ ಪಾಟೀದಾರ್ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಹಾರ್ದಿಕ್ ಪಟೇಲ್ ಅವರು 2015ರಲ್ಲಿ ಬೃಹತ್ ಹೋರಾಟ ನಡೆಸಿದ್ದರು. ಈ ವೇಳೆ ಅವರ ವಿರುದ್ಧ ದೇಶದ್ರೋಹ ಆರೋಪ ಹೊರಿಸಿ ಜೈಲಿಗೆ ಕಳುಹಿಸಲಾಗಿತ್ತು. ಗಲಭೆ ಮತ್ತು ಪಿತೂರಿ ನಡೆಸಿದ ಆರೋಪ ಅವರ ಮೇಲಿದ್ದವು.

ಕೂಡಂಕುಳಂ ಪ್ರತಿಭಟನೆ: ತಮಿಳುನಾಡಿನ ಕೂಡಂಕುಳಂನಲ್ಲಿ ಅಣುಸ್ಥಾವರ ಸ್ಥಾಪನೆಯನ್ನು ವಿರೋಧಿಸಿ 2010-11ರಲ್ಲಿ ಪ್ರತಿಭಟನೆ ನಡೆಸಿದ ಆರೋಪ ಮೇಲೆ ಒಟ್ಟು 8,856 ಜನರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ.


ಸೆಕ್ಷನ್ 124 ಎ


ಭಾರತೀಯ ದಂಡ ಸಂಹಿತೆಯ ‘ಸೆಕ್ಷನ್ 124 ಎ’ ದೇಶದ್ರೋಹ ಏನು ಎಂಬುದನ್ನು ವ್ಯಾಖ್ಯಾನಿಸುತ್ತದೆ. ಸರ್ಕಾರದ ವಿರುದ್ಧ ಅಸಮಾಧಾನವನ್ನು ಪ್ರಚೋದಿಸುವ ಪ್ರಯತ್ನಗಳು ದೇಶದ್ರೋಹ ಪ್ರಕರಣ ಎನಿಸಿಕೊಳ್ಳುತ್ತವೆ. ಅಂದರೆ ಯಾವುದೇ ವ್ಯಕ್ತಿಯು ಮಾತಿನಿಂದ, ಬರವಣಿಗೆಯ ಮೂಲಕ ಅಥವಾ ಸಂಕೇತಗಳ ಮೂಲಕ ಸರ್ಕಾರದ ವಿರುದ್ಧ ದ್ವೇಷವನ್ನು ಅಥವಾ ತಿರಸ್ಕಾರವನ್ನು ಹುಟ್ಟಿಸಲು ಯತ್ನಿಸಿದರೆ ಅಥವಾ ಅದಕ್ಕೆ ಪ್ರಚೋದಿಸಿದರೆ ಅದು ದೇಶದ್ರೋಹ ಎನಿಸಿಕೊಳ್ಳುತ್ತದೆ. ಆದರೆ ದ್ವೇಷ, ತಿರಸ್ಕಾರ ಅಥವಾ ಅಸಮಾಧಾನವನ್ನು ಪ್ರಚೋದಿಸದ ಮತ್ತು ಉತ್ತೇಜಿಸದ ಹೇಳಿಕೆಗಳು ಈ ವಿಭಾಗದ ಅಡಿಯಲ್ಲಿ ಅಪರಾಧ ಎನಿಸುವುದಿಲ್ಲ.

ಶಿಕ್ಷೆ: ದೇಶದ್ರೋಹದಡಿ ದಾಖಲಾಗುವ ಪ್ರಕರಣವು ಜಾಮೀನುರಹಿತ ಅಪರಾಧ ವಾಗಿದೆ. ಸೆಕ್ಷನ್ 124 ಎ ಅಡಿ 3 ವರ್ಷದವರೆಗೆ ಶಿಕ್ಷೆ ವಿಧಿಸಬಹುದು. ಜೀವಾವಧಿವರೆಗಿನ ಶಿಕ್ಷೆಯನ್ನೂ ನೀಡಬಹುದು. ದಂಡವನ್ನೂ ಹಾಕಬಹುದು. ಈ ಕಾನೂನಿನಡಿಯಲ್ಲಿ ಆರೋಪ ಹೊರಿಸಲಾದ ವ್ಯಕ್ತಿಗೆ ಸರ್ಕಾರಿ ಉದ್ಯೋಗವನ್ನು ನಿರ್ಬಂಧಿಸಲಾಗಿದೆ. ಅಗತ್ಯವಿದ್ದಾಗ ನ್ಯಾಯಾಲಯಕ್ಕೆ ಹಾಜರಾಗಬೇಕು.

ಎನ್‌ಡಿಎ ಅವಧಿಯಲ್ಲಿ ಅಧಿಕ ಪ್ರಕರಣ


2010ರಿಂದ 2021ರವರೆಗೆ ದಾಖಲಾದ ಪ್ರಕರಣಗಳ ಪೈಕಿ ಯುಪಿಎ-2 ಅವಧಿಯಲ್ಲಿ ಶೇ 36ರಷ್ಟು, ಎನ್‌ಡಿಎ ಅಧಿಕಾರಕ್ಕೆ ಬಂದ ನಂತರ ಶೇ 63ರಷ್ಟು ಪ್ರಕರಣಗಳು ದಾಖಲಾಗಿವೆ. ಈ ದತ್ತಾಂಶವು ಆರ್ಟಿಕಲ್ 14 ಜಾಲತಾಣದಲ್ಲಿ ಪ್ರಕಟವಾಗಿದ್ದು, ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) ವಾರ್ಷಿಕ ವರದಿಯಲ್ಲಿ ಉಲ್ಲೇಖವಾಗದ ಕೆಲವು ಪ್ರಕರಣಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.





ಆರೋಪಿಗಳ ಸಂಖ್ಯೆ ಭಾರಿ ಏರಿಕೆ

2010ರಿಂದ 2021ರ ಅವಧಿಯಲ್ಲಿ 13,306 ಆರೋಪಿಗಳ ಮೇಲೆ ದೇಶದ್ರೋಹ ಕಾನೂನಿನ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಪೈಕಿ ಎನ್‌ಡಿಎ ಅವಧಿಯಲ್ಲಿ ಶೇ 70ರಷ್ಟು ಆರೋಪಿಗಳು ಕಾರಾಗೃಹ ಸೇರಿದ್ದಾರೆ. ಯುಪಿಎ ಅವಧಿಯಲ್ಲಿ ಶೇ 30ರಷ್ಟು ಆರೋಪಿಗಳ ವಿರುದ್ಧ ಈ ಕಾನೂನು ದಾಖಲಿಸಲಾಗಿದೆ. ಕಳೆದ ಅಕ್ಟೋಬರ್‌ನಲ್ಲಿ ನಡೆದ ವಿಶ್ವಕಪ್ ಟಿ-20 ಕ್ರಿಕೆಟ್‌ನಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ತಂಡ ಜಯ ಗಳಿಸಿದ್ದನ್ನು ಸಂಭ್ರಮಿಸಿದ್ದ ಆರೋಪದ ಮೇಲೆ ಕಾಶ್ಮೀರದ ಮೂವರು ವಿದ್ಯಾರ್ಥಿಗಳ ವಿರುದ್ಧ ಈ ಕಾನೂನಿನಡಿ ಪ್ರಕರಣ ದಾಖಲಿಸಲಾಗಿದೆ.



1962ರ ತೀರ್ಪಿನ ಬಲ

ಕೇದಾರನಾಥ ಮತ್ತು ಬಿಹಾರ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 1962ರಲ್ಲಿ ಮಹತ್ವದ ತೀರ್ಪು ನೀಡಿ, ಸೆಕ್ಷನ್ 124ಎಯನ್ನು ಎತ್ತಿ ಹಿಡಿದಿದೆ. ಆದರೆ, ದುರ್ಬಳಕೆ ತಡೆಯುವುದಕ್ಕಾಗಿ ಕಾನೂನಿನ ಬಳಕೆಗೆ ಹಲವು ನಿರ್ಬಂಧಗಳನ್ನು ಹೇರಿತು. ಯಾವುದು ದೇಶದ್ರೋಹ ಮತ್ತು ಯಾವುದು ದೇಶದ್ರೋಹ ಅಲ್ಲ ಎಂಬುದನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನೂ ಮಾಡಿತು.

ಹಿಂಸಾಚಾರದ ಮೂಲಕ ಸರ್ಕಾರ ಉರುಳಿಸಲು ಯತ್ನಿಸುವುದು ಅಥವಾ ಸಾರ್ವಜನಿಕ ಅಶಾಂತಿ ಸೃಷ್ಟಿಸಲು ಯತ್ನಿಸುವುದು ದೇಶದ್ರೋಹದ ವ್ಯಾಖ್ಯಾನದೊಳಗೆ ಬರುತ್ತದೆ ಎಂದು ಐವರು ನ್ಯಾಯಮೂರ್ತಿಗಳ ಪೀಠವು ಹೇಳಿತು. ಹಿಂಸೆಯ ಮೂಲಕ ಸರ್ಕಾರವನ್ನು ಬುಡಮೇಲು ಮಾಡುವ, ಕ್ರಾಂತಿ ಎಂಬ ಪರಿಕಲ್ಪನೆಯೊಳಗೆ ಬರುವ ಮೌಖಿಕ ಅಥವಾ ಲಿಖಿತವಾದ ಯಾವುದೇ ಮಾತು ಸೆಕ್ಷನ್ 124ಎಯ ವ್ಯಾಪ್ತಿಗೆ ಬರುತ್ತದೆ ಎಂದು ಪೀಠವು ಸ್ಪಷ್ಟಪಡಿಸಿತು.

ಆದರೆ, ಸರ್ಕಾರದ ಕ್ರಮಗಳು ಸುಧಾರಣೆಯಾಗಲಿ ಅಥವಾ ಬದಲಾಗಲಿ ಎಂಬ ಉದ್ದೇಶದಿಂದ ಕಾನೂನುಬದ್ಧ ಮಾರ್ಗಗಳ ಮೂಲಕ ಅಸಮ್ಮತಿ ತೋರುವುದು ದೇಶದ್ರೋಹ ಅಲ್ಲ. ಸರ್ಕಾರದ ನಡವಳಿಕೆಯ ಕುರಿತು ಎಷ್ಟೇ ಕಟುವಾದ ಪದಗಳಲ್ಲಿ ಅಭಿವ್ಯಕ್ತಿಸುವ ಅಭಿಪ್ರಾಯವು, ಸಾರ್ವಜನಿಕ ಸುವ್ಯವಸ್ಥೆಯನ್ನು ಹಿಂಸೆಯ ಮೂಲಕ ಕೆಡಿಸುವ ಉದ್ದೇಶ ಹೊಂದಿಲ್ಲದಿದ್ದರೆ ದೇಶದ್ರೋಹದ ವ್ಯಾಖ್ಯೆಯೊಳಗೆ ಬಾರದು ಎಂದು ಕೋರ್ಟ್ ಹೇಳಿತು.

ಅಹಿತಕರ ಅಭಿವ್ಯಕ್ತಿ ದೇಶದ್ರೋಹವಲ್ಲ: ಕಾನೂನು ಆಯೋಗದ 2018ರ ವರದಿ

ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಒಂದೇ ಅಭಿಪ್ರಾಯವನ್ನು ಹೊಂದಿರಬೇಕು ಎಂಬುದು ದೇಶಪ್ರೇಮದ ಮಾನದಂಡವಲ್ಲ. ದೇಶದ ಮೇಲಿನ ಪ್ರೀತಿಯನ್ನು ತೋರಿಸಲು ಜನರು ತಮ್ಮದೇ ರೀತಿಯನ್ನು ಅನುಸರಿಸುವ ಸ್ವಾತಂತ್ರ್ಯ ಇರಬೇಕು. ಸರ್ಕಾರವನ್ನು ರಚನಾತ್ಮಕವಾಗಿ ಟೀಕಿಸುವ ಮೂಲಕ ಅಥವಾ ಸರ್ಕಾರದ ನೀತಿಯಲ್ಲಿರುವ ಲೋಪಗಳನ್ನು ಎತ್ತಿ ತೋರಿಸುವ ಮೂಲಕವೂ ದೇಶಪ್ರೇಮವನ್ನು ತೋರಬಹುದು. ಈ ರೀತಿಯ ಚಿಂತನೆಯ ಅಭಿವ್ಯಕ್ತಿಯು ಕೆಲವರಿಗೆ ಒರಟು ಮತ್ತು ಅಹಿತಕರ ಅನ್ನಿಸಬಹುದು. ಆದರೆ, ಇಂತಹ ಅಭಿವ್ಯಕ್ತಿಗೆ ದೇಶದ್ರೋಹ ಎಂಬ ಹಣೆಪಟ್ಟಿ ಕಟ್ಟಲಾಗದು. ಸಾರ್ವಜನಿಕ ಸುವ್ಯವಸ್ಥೆಯನ್ನು ಹಾಳುಗೆಡಹುವ ಅಥವಾ ಹಿಂಸೆ ಮತ್ತು ಕಾನೂನುಬಾಹಿರ ಮಾರ್ಗದ ಮೂಲಕ ಸರ್ಕಾರ ಉರುಳಿಸುವ ಉದ್ದೇಶದ ಕೃತ್ಯಗಳಲ್ಲಿ ಮಾತ್ರ 124ಎ ಸೆಕ್ಷನ್ ಅನ್ವಯ ಮಾಡಬೇಕು ಎಂದು ಕಾನೂನು ಆಯೋಗದ 2018ರ ವರದಿಯಲ್ಲಿ ಹೇಳಲಾಗಿದೆ.

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬೇಜವಾಬ್ದಾರಿಯಿಂದ ಬಳಸಿದ ಪ್ರತಿಯೊಂದೂ ಪ್ರಕರಣವನ್ನು ದೇಶದ್ರೋಹ ಎನ್ನಲಾಗದು. ಸರ್ಕಾರದ ನೀತಿಯೊಂದಿಗೆ ಸಮರಸವಿಲ್ಲದ ಅಭಿವ್ಯಕ್ತಿಯನ್ನು ದೇಶದ್ರೋಹ ಎಂದು ಹೇಳಲು ಸಾಧ್ಯವಿಲ್ಲ. ದೇಶದ ಪರಿಸ್ಥಿತಿಯ ಕುರಿತ ಹತಾಶೆಯ ಅಭಿವ್ಯಕ್ತಿ ಕೂಡ ದೇಶದ್ರೋಹ ಅಲ್ಲ. ಉದಾಹರಣೆಗೆ, ‘ಇದು ಮಹಿಳೆಯರು ಜೀವಿಸಲು ಯೋಗ್ಯವಾದ ದೇಶವಲ್ಲ’ ಎಂದು ಹೇಳುವುದು ದೇಶ ಎಂಬ ಪರಿಕಲ್ಪನೆಗೆ ಯಾವ ಬೆದರಿಕೆಯನ್ನೂ ಒಡ್ಡುವುದಿಲ್ಲ. ಹಾಗಾಗಿ ಇಂಥವುಗಳನ್ನು ದೇಶದ್ರೋಹ ಎಂದು ಪರಿಗಣಿಸಲಾಗದು. ದೇಶದಲ್ಲಿ ಸಕಾರಾತ್ಮಕ ವಿಮರ್ಶೆಗೆ ಅವಕಾಶವಿಲ್ಲದಿದ್ದರೆ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯನಂತರಕ್ಕೆ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ತನ್ನದೇ ಇತಿಹಾಸವನ್ನು ಟೀಕಿಸುವ ಹಕ್ಕು ಮತ್ತು ಕೋಪಗೊಳ್ಳುವ ಹಕ್ಕುಗಳಿಗೆ ವಾಕ್ ಸ್ವಾತಂತ್ರ್ಯದ ಅಡಿಯಲ್ಲಿ ರಕ್ಷಣೆ ಇದೆ ಎಂದು ವರದಿ ವಿಶ್ಲೇಷಿಸಿದೆ.

ದೇಶದ ಒಗ್ಗಟ್ಟಿನ ರಕ್ಷಣೆ ಅತ್ಯಗತ್ಯ. ಆದರೆ, ಅದು ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ರೀತಿಯಲ್ಲಿ ದುರ್ಬಳಕೆ ಆಗಬಾರದು. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೇರುವ ಪ್ರತಿಯೊಂದು ನಿರ್ಬಂಧವನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಬೇಕು ಎಂದು ವರದಿಯು ಅಭಿಪ್ರಾಯಪಟ್ಟಿದೆ.

ಮರುಪರಿಶೀಲನೆಯ ಸಂದರ್ಭದಲ್ಲಿ ಏನನ್ನು ಗಮನದಲ್ಲಿ ಇರಿಸಿಕೊಳ್ಳಬೇಕು ಎಂಬುದನ್ನೂ ವರದಿಯಲ್ಲಿ ಚರ್ಚಿಸಲಾಗಿದೆ. ಮುಖ್ಯ ಅಂಶಗಳು ಹೀಗಿವೆ:

- ಬ್ರಿಟನ್, ದೇಶದ್ರೋಹ ಕಾನೂನನ್ನು ಕೆಲವರ್ಷಗಳ ಹಿಂದೆ ರದ್ದುಪಡಿಸಿದೆ. ಭಾರತೀಯರನ್ನು ದಮನಿಸುವ ಅಸ್ತ್ರವಾಗಿ ಬ್ರಿಟಿಷರು ಈ ಕಾನೂನನ್ನು ರೂಪಿಸಿದ್ದರು. ಹೀಗಿರುವಾಗ ಈಗಲೂ ಐಪಿಸಿಯ 124ಎ ಸೆಕ್ಷನ್ ಅನ್ನು ಉಳಿಸಿಕೊಳ್ಳುವುದಕ್ಕೆ ಇರುವ ಸಮರ್ಥನೆ ಏನು?
- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಅಗತ್ಯ ಭಾಗವಾಗಿದ್ದು, ಸಂವಿಧಾನವು ಮೂಲಭೂತ ಹಕ್ಕು ಎಂದು ಪರಿಗಣಿಸಿದೆ. ಭಾರತದಂತಹ ದೇಶದಲ್ಲಿ ದೇಶದ್ರೋಹವನ್ನು ಮರುವ್ಯಾಖ್ಯಾನಿಸಲು ಸಾಧ್ಯವಿಲ್ಲವೇ?
- ದೇಶದ್ರೋಹ ಎಂಬ ಪದಕ್ಕೆ ಪರ್ಯಾಯ ಪದವನ್ನು ಬಳಸುವುದು ಸೂಕ್ತವಲ್ಲವೇ ಮತ್ತು ಅದಕ್ಕೆ ಅನುಗುಣವಾಗಿ ಶಿಕ್ಷೆಯನ್ನು ನಿಗದಿ ಮಾಡಬಹುದಲ್ಲವೇ?
- ವ್ಯವಸ್ಥೆಯ ವಿರುದ್ಧ ಎಷ್ಟರವರೆಗೆ ಕೋಪಿಸಿಕೊಳ್ಳುವ ಹಕ್ಕನ್ನು ಜನರಿಗೆ ನೀಡಬಹುದು?
- ಕೋಪಿಸಿಕೊಳ್ಳುವ ಹಕ್ಕಿನ ಚಲಾವಣೆಯು ಯಾವ ಹಂತದಲ್ಲಿ ದ್ವೇಷ ಭಾಷಣವಾಗಿ ಪರಿವರ್ತನೆ ಆಗಬಹುದು?
- ಸೆಕ್ಷನ್ 124ಎ ಹಾಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ನಡುವೆ ಹೇಗೆ ಸಮತೋಲನ ಕಾಯ್ದುಕೊಳ್ಳಬಹುದು?
- ಈ ಹಿಂದೆ, ದೇಶದ್ರೋಹ ಎಂದು ಪರಿಗಣಿಸಲಾಗಿದ್ದ ಹಲವು ಕೃತ್ಯಗಳಿಗೆ ಸಂಬಂಧಿಸಿ ಹಲವು ಕಾನೂನುಗಳು ರೂಪುಗೊಂಡಿವೆ. ಹಾಗಾಗಿ, ಐಪಿಸಿಯಲ್ಲಿ 124ಎ ಸೆಕ್ಷನ್ ಉಳಿಸಿಕೊಳ್ಳುವುದರಿಂದ ಪ್ರಯೋಜನ ಇದೆಯೇ?
- ವ್ಯಕ್ತಿ ಮತ್ತು/ ಅಥವಾ ಸಮಾಜದ ವಿರುದ್ಧದ ವಿವಿಧ ಅಪರಾಧಗಳಿಗೆ ಸಂಬಂಧಿಸಿ ಈಗಾಗಲೇ ಹಲವು ಕಾನೂನುಗಳು ರೂಪುಗೊಂಡಿವೆ. ಹಾಗಾಗಿ, 124ಎ ಸೆಕ್ಷನ್ ಅನ್ನು ದುರ್ಬಲಗೊಳಿಸುವುದು ಅಥವಾ ರದ್ದುಪಡಿಸುವುದು ದೇಶಕ್ಕೆ ಹಾನಿಕಾರಕವೇ ಅಥವಾ ಅನುಕೂಲಕರವೇ?
- ನ್ಯಾಯಾಂಗ ನಿಂದನೆಗೆ ಶಿಕ್ಷೆ ಇರುವ ದೇಶದಲ್ಲಿ ಕಾನೂನು ಪ್ರಕಾರ ಸ್ಥಾಪನೆಯಾದ ಸರ್ಕಾರವನ್ನು ನಿಂದಿಸಿದರೆ ಶಿಕ್ಷೆ ನೀಡುವುದು ಬೇಡವೇ?
- 124ಎ ಸೆಕ್ಷನ್ ದುರ್ಬಳಕೆ ತಡೆಗೆ ಇರುವ ಮಾರ್ಗಗಳು ಯಾವುವು?

ಸರ್ಕಾರದ ಮುಖ್ಯಸ್ಥರ ಟೀಕೆಯೂ ದೇಶದ್ರೋಹ

2014ರಿಂದ ಈಚೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಟೀಕಿಸಿದ್ದಕ್ಕೆ, ತೆಗಳಿದ್ದಕ್ಕೆ 290ಕ್ಕೂ ಹೆಚ್ಚು ದೇಶದ್ರೋಹ ಪ್ರಕರಣಗಳನ್ನು ದಾಖಲಿಸಲಾಗಿದೆ.

ದೇಶದಲ್ಲಿ ನಡೆಯುತ್ತಿದ್ದ ಗುಂಪುಹಲ್ಲೆ ಮತ್ತು ಹತ್ಯೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದ 48 ಗಣ್ಯರಲ್ಲಿ ಹಲವರು ಈ ಪ್ರಕರಣಕ್ಕೆ ಗುರಿಯಾಗಿದ್ದಾರೆ. ರಾಮಚಂದ್ರ ಗುಹಾ, ಅಡೂರು ಗೋಪಾಲಕೃಷ್ಣನ್, ಮಣಿರತ್ನಂ, ಅಪರ್ಣಾ ಸೆನ್ ಮತ್ತಿತರರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಮರಾಠರ ವಿರುದ್ಧ ಪರಿಶಿಷ್ಟರು ಯುದ್ಧದಲ್ಲಿ ಜಯಗಳಿಸಿದ ಭೀಮಾ ಕೋರೆಗಾಂವ್ ವಿಜಯೋತ್ಸವದ 200ನೇ ವರ್ಷಾಚರಣೆ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ದೇಶದ 19 ಗಣ್ಯರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿತ್ತು. ಇವರಲ್ಲಿ ತೆಲುಗು ಕವಿ ವರವರ ರಾವ್, ಮಾನವ ಹಕ್ಕುಗಳ ಹೋರಾಟಗಾರರಾದ ಗೌತಮ್ ನವಲಖಾ, ಸುಧಾ ಭಾರದ್ವಾಜ್, ಸ್ಟ್ಯಾನ್‌ಸ್ವಾಮಿ ಸೇರಿದಂತೆ 19 ಜನರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಹತ್ಯೆಗೆ ಸಂಚು, ಸರ್ಕಾರ ಉರುಳಿಸಲು ಸಂಚು ಆರೋಪದಲ್ಲಿ ದೇಶದ್ರೋಹದ ಪ್ರಕರಣವನ್ನು ದಾಖಲಿಸಲಾಗಿದೆ. ಈ ಪ್ರಕರಣದ ತನಿಖೆ ಪ್ರಗತಿಯಲ್ಲಿ ಇದೆ. ಆದರೆ, ವಿಚಾರಣೆ ಎದುರಿಸದಯೇ ಸ್ಟ್ಯಾನ್‌ಸ್ವಾಮಿ ಅವರು ನ್ಯಾಯಾಂಗ ಬಂಧನದಲ್ಲಿ ಮೃತಪಟ್ಟಿದ್ದಾರೆ.

ಆಧಾರ: ಆರ್ಟಿಕಲ್ 14 ಇಂಡಿಯಾ, ಕಾನೂನು ಆಯೋಗದ 2018ರ ವರದಿ, ಭಾರತದಲ್ಲಿ ಅಪರಾಧ ವರದಿ-2014, 2015, 2016, 2017, 2018, 2019 ಮತ್ತು 2020, ಐಪಿಸಿ ಸೆಕ್ಷನ್ 124ಎ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 117

ನವನಿಧಿ ಅಧಿಪತಿ ಕುಬೇರ

ಪಾರ್ವತಿಯನ್ನು ನೆಟ್ಟ ನೋಟದಿಂದ ನೋಡಿ ಎಡಗಣ್ಣು ಕಳೆದುಕೊಂಡ ಕುಬೇರ. ಮತ್ತೆ ಬಲಗಣ್ಣಿನಿಂದಲೂ ಪಾರ್ವತಿ ದೇವಿಯನ್ನು ನೆಟ್ಟ ನೋಟದಿಂದಲೇ ನೋಡುವುದನ್ನು ಮುಂದುವರೆಸಿದ. ಶಿಕ್ಷೆ ಅನುಭವಿಸಿದರೂ, ಬುದ್ಧಿ ಬಾರದ ಕುಬೇರನ ದುರ್ವರ್ತನೆಯಿಂದ ಪಾರ್ವತಿ ಮತ್ತಷ್ಟು ಕೋಪಗೊಂಡು, ‘ನಾಥ! ಈ ದುಷ್ಟ ತಪಸ್ವಿಯು ನನ್ನನ್ನು ಪುನಃ ಪುನಃ ನೋಡುತ್ತಾ ಏನು ಹೇಳುತ್ತಿದ್ದಾನೆ? ತನಗೆ ತಪಶ್ಶಕ್ತಿಯನ್ನು ನೀಡು ಅಂತ ಅವನು ಮತ್ತೆ ಮತ್ತೆ ಬಲಗಣ್ಣಿನಿಂದ ನನ್ನನ್ನೇ ನೋಡುತ್ತಿದ್ದಾನೆ. ಇವನು ನನ್ನ ರೂಪವನ್ನೂ ಪ್ರೇಮವನ್ನೂ ಸೌಭಾಗ್ಯವನ್ನೂ ಸಂಪತ್ತನ್ನೂ ಕಂಡು ಸಹಿಸದೆ ಕರುಬುತ್ತಿದ್ದಾನೆ’ ಎಂದು ಸಿಡುಕಿದಳು.

ಮಡದಿ ಪಾರ್ವತಿ ಆಡಿದ ಮಾತನ್ನು ಕೇಳಿ ಪ್ರಭುವಾದ ಶಿವನು ನಗುತ್ತಾ, ‘ಉಮೆ, ಇವನು ನಿನ್ನ ಮಗನು. ಇವನು ಕೆಟ್ಟ ದೃಷ್ಟಿಯಿಂದ ನೋಡುತ್ತಿಲ್ಲ. ಬದಲಿಗೆ ನೀನು ಮಾಡಿದ ತಪಸ್ಸಿನ ವೈಭವವನ್ನು ಆಶ್ಚರ್ಯದಿಂದ ವರ್ಣಿಸುತ್ತಲಿದ್ದಾನೆ’ ಎಂದು ದೇವಿಯನ್ನು ಸಂತೈಸಿದ. ನಂತರ ಆ ಕುಬೇರನಿಗೆ ಹೇಳಿದ. ‘ಓ ಯಜ್ಞದತ್ತಪುತ್ರ, ನೀನು ಮಹಾಭಕ್ತ! ನಿನ್ನ ಈ ತಪಸ್ಸಿಗೆ ನಾನು ಮೆಚ್ಚಿದೆ. ನಿನಗೆ ಬೇಕಾದ ವರಗಳನ್ನೀಯುವೆನು. ನೀನು ನವವಿಧಿಗಳಿಗೂ ಒಡೆಯನಾಗು. ಗುಹ್ಯಕರಿಗೂ ಯಕ್ಷರಿಗೂ ಕಿನ್ನರರಿಗೂ ಅಧಿಪತಿಯಾಗಿರು. ರಾಜರಿಗೂ ರಾಜನಾಗು. ನೀನು ವ್ರತಶೀಲನೂ ರಾಕ್ಷಸರಿಗೆಲ್ಲಾ ಪ್ರಭುವೂ, ಎಲ್ಲರಿಗೂ ಹಣವನ್ನು ಕೊಡುವವನೂ ಆಗು. ನಿನಗೂ ನನಗೂ ಶಾಶ್ವತವಾದ ಸ್ನೇಹವುಂಟಾಗಲಿ. ನಿನ್ನ ಪ್ರೀತಿಯು ಹೆಚ್ಚಾಗಲೆಂದು ಅಲಕಾನಗರದ ಬಳಿಯಲ್ಲಿಯೇ ನಿನ್ನ ಹತ್ತಿರದಲ್ಲೇ ನಾನು ವಾಸಮಾಡುವೆ. ಇಲ್ಲಿ ಬಾ, ಇವಳ ಕಾಲಿಗೆ ಬೀಳು. ಇವಳು ನಿನಗೆ ತಾಯಿ, ಹರ್ಷಚಿತ್ತವನ್ನು ತಾಳು’ ಎಂದು ಶಿವನು, ಶ್ರೀದನಿಗೆ ವರಗಳನ್ನಿತ್ತ.

‘ಧನ್ಯನಾದೆ’ ಎನ್ನುತ್ತಾ ಕುಬೇರನು ಪಾರ್ವತಿಯ ಕಾಲಿಗೆ ಬಿದ್ದು ನಮಸ್ಕರಿಸಿದ. ಆಗ ಶಿವನು ಸರ್ವಮಂಗಳೆಗೆ ‘ದೇವಿ, ಈ ಬಡಪಾಯಿಯಾದ ನಿನ್ನ ಮಗನಲ್ಲಿ ಪ್ರಸನ್ನಳಾಗು. ಇವನು ಕೆಟ್ಟವನಲ್ಲ. ಅತಿಯಾದ ಸಂತೋಷದಿಂದ ಮೈಮರೆತು ನೋಡಿದ್ದಾನೆ ಅಷ್ಟೆ’ ಎಂದು ಉಮಾಮಹೇಶ್ವರಿಯನ್ನು ಸಾಂತ್ವನಪಡಿಸಿದ.

ಉಮೆಯು ಪ್ರಸನ್ನಹೃದಯಳಾಗಿ ಆ ಯಜ್ಞದತ್ತ ಸುತನನ್ನು ‘ವತ್ಸ, ಯಾವಾಗಲೂ ನಿನಗೆ ಶಿವನಲ್ಲಿ ನಿಷ್ಕಳಂಕವಾದ ಭಕ್ತಿಯುಂಟಾಗಲಿ, ನಿನ್ನ ಎಡಗಣ್ಣು ಬಿರಿದು ಹೋದುದರಿಂದ ಏಕಪಿಂಗನೆಂಬ ಹೆಸರಿನಿಂದಲೇ ಪ್ರಖ್ಯಾತನಾಗು. ಪ್ರಭುವಾದ ಶಿವನು ಅನುಗ್ರಹಿಸಿದ ವರಗಳೆಲ್ಲವೂ ಈಡೇರಲಿ. ನನ್ನ ರೂಪವನ್ನು ಕಂಡು ಅಸೂಯೆಪಟ್ಟುದರಿಂದ ನೀನು ಕುಬೇರನೆಂದೇ ಹೆಸರಾಗು’ ಎಂದು ಆಶೀರ್ವಾದಿಸುತ್ತಾಳೆ.

ಪಾದ್ಮಕಲ್ಪದಲ್ಲಿ ಯಜ್ಞದತ್ತ ದೀಕ್ಷಿತನ ಮಗನಾಗಿ ಜನಿಸಿದ ಗುಣನಿಧಿ ಮಹಾಜೂಜುಗಾರನಾಗಿ ಪಾಪ ಮಾಡಿದರೂ, ಸಾಯುವ ಕೊನೆ ಗಳಿಗೆಯಲ್ಲಿ ತನ್ನ ಬಟ್ಟೆ ಅಂಚಿನಿಂದ ಶಿವದೇಗುಲದ ದೀಪ ಬೆಳಗಿ ಕೈಲಾಸವಾಸಿಯಾದ. ಈ ಪುಣ್ಯದಿಂದ ಕಳಿಂಗದ ರಾಜನಾಗಿ, ರಾಜ್ಯದೆಲ್ಲೆಡೆ ಶಿವದೇಗುಲದಲ್ಲಿ ದೀಪ ಬೆಳಗುವಂತೆ ಮಾಡಿ ಮತ್ತಷ್ಟು ಪುಣ್ಯ ಸಂಪಾದಿಸಿದ, ಬ್ರಹ್ಮನ ಮಾನಸಪುತ್ರನಾದ ಪುಲಸ್ತ್ಯನ ಮಗನಾದ ವಿಶ್ರವಸ್ಸುಗೆ ವೈಶ್ರವಣ ಎಂಬ ಮಗನಾಗಿ ಜನಿಸಿ, ವಿಶ್ವಕರ್ಮ ನಿರ್ಮಿಸಿದ ಅಲಕಾನಗರಿಯಲ್ಲಿ ಸುಖವಾಗಿ ಬದುಕಿದ. ಪದ್ಮಕಲ್ಪ ಕಳೆದ ಮೇಲೆ, ಮೇಘವಾಹನ ಕಲ್ಪದಲ್ಲಿ ಶ್ರೀದ ಎಂಬುವನಾಗಿ ಹುಟ್ಟಿ, ತನ್ನ ಪುಣ್ಯಫಲ ಮತ್ತಷ್ಟು ಹೆಚ್ಚಿಸಿಕೊಳ್ಳಲು ಘೋರ ತಪಸ್ಸನ್ನು ಮಾಡಿ ಶಿವ-ಪಾರ್ವತಿಯರ ದರ್ಶನ ಮಾಡಿದ. ಇದರ ಫಲದಿಂದ ಅವನ ಅಲಕಾನಗರಿ ಪಕ್ಕದಲ್ಲೆ ಕೈಲಾಸಪರ್ವತ ಸೃಷ್ಟಿಯಾಗಿದ್ದಲ್ಲದೆ, ಅತುಲೈಶ್ವರ್ಯಕ್ಕೆ ಒಡೆಯನಾಗಿ ‘ಕುಬೇರ’ ಎನಿಸಿದ.

ಈ ರೀತಿ ಕುಬೇರನು ಶಿವನ ಸಖ್ಯವನ್ನು ಸಂಪಾದಿಸಿದ ಮತ್ತು ಶಂಕರನೂ ತನ್ನ ಮಾತಿನಂತೆ ಅಲಕಾನಗರಿಯ ಬಳಿಯಲ್ಲಿಯೇ, ತನ್ನ ನಿವಾಸವಾದ ಕೈಲಾಸವನ್ನು ಸ್ಥಾಪಿಸಿದ ಕಥೆಯನ್ನು ಬ್ರಹ್ಮ ನಾರದನಿಗೆ ಹೇಳುವಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ, ಎರಡನೆಯ ಸಂಹಿತೆಯಾದ ರುದ್ರಸಂಹಿತೆಯಲ್ಲಿ ಮೊದಲನೆಯ ಖಂಡವಾದ ಸೃಷ್ಟಿ ಉಪಾಖ್ಯಾನದಲ್ಲಿ ಕುಬೇರ-ಶಿವಸಖ್ಯ ವರ್ಣನ ಎಂಬ ಹತ್ತೊಂಬತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ದಶಮಿ ಗಂ. 19-32 ನಕ್ಷತ್ರ: ಪೂರ್ವಫಲ್ಗುನಿ ಗಂ. 19-28 ಯೋಗ: ವ್ಯಾಘಾತ ಗಂ. 19-24, ಕರಣ: ತೈತಿಲ ಗಂ. 07-34, ಮೇಷ ಮಾಸದ 27 ನೇ ದಿನ.
ರಾಹುಕಾಲ: ಮಧ್ಯಾಹ್ನ 12:00-01:30
ಸೂರ್ಯೋದಯ: 06-09 ಸೂರ್ಯಾಸ್ತ: 06-45
ಮುಸ್ಲಿಂ ದಿನಾಂಕ: 09 ಶವ್ವಾಲ್
ಅದೃಷ್ಟ ಸಂಖ್ಯೆ: 3, 7

ಮೇಷ: ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಉತ್ತಮಗೊಳ್ಳುವುದು. ಔದ್ಯೋಗಿಕ ವ್ಯವಹಾರದಲ್ಲಿ ನಿರೀಕ್ಷೆಗೆ ತಕ್ಕ ಅಥವಾ ಅದಕ್ಕೂ ಮಿಗಿಲಾದ ಫಲಗಳು ದೊರೆತು ನೆಮ್ಮದಿ.

ವೃಷಭ: ಇಂದು ಮಕ್ಕಳಿಂದ ಅಚ್ಚರಿಯ ಸುದ್ದಿ ಕೇಳುವಿರಿ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ಮಹತ್ವದ ನಿರ್ಧಾರ ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ.

ಮಿಥುನ: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ಜಾಣತನದಿಂದ, ತಾಳ್ಮೆಯಿಂದ ಸಂಪೂರ್ಣವಾಗಿ ಓದಿ ತಿಳಿದು ಒಪ್ಪಿಕೊಳ್ಳಿ. ಹಿರಿಯರೊಂದಿಗೆ ವ್ಯಾಪಾರದ ವಿಚಾರದಲ್ಲಿ ಗಂಭೀರ ಚರ್ಚೆ.

ಕರ್ಕಾಟಕ: ಇಂದು ನಿಮ್ಮ ಆದಾಯ ವೆಚ್ಚಗಳನ್ನು ಸರಿದೂಗಿಸಿಕೊಳ್ಳುವಿರಿ. ವೃತ್ತಿ ಜೀವನದಲ್ಲಿ ಯಶಸ್ಸು ಕಾಣುವಿರಿ. ಅನಾವಶ್ಯಕ ದೂರದ ಪ್ರಯಾಣದ ಸಾಧ್ಯತೆ ಇದೆ. ಮಂಜುನಾಥನ ದರ್ಶನ ಭಾಗ್ಯದಿಂದ ಕಾರ್ಯಾನುಕೂಲವಾಗಲಿದೆ.

ಸಿಂಹ: ಶ್ರದ್ಧೆ, ತಾಳ್ಮೆಯಿಂದ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠದಿಂದ ಇಂದು ನಿಮ್ಮ ಪಾಲಿನ ಕಾರ್ಯ ಸಿದ್ಧಿಯಾಗುವುದು. ಕೆಲಸವನ್ನು ಹೊರಗುತ್ತಿಗೆ ನೀಡುವ ಆಲೋಚನೆಯು ಇನ್ನಷ್ಟು ಸಮಸ್ಯೆಗೆ ದಾರಿಯಾಗುವುದು.

ಕನ್ಯಾ: ದೈವಾನುಗ್ರಹ ನಿಮ್ಮ ಪಾಲಿಗೆ ಸಂಪೂರ್ಣವಿದ್ದು ತೊಂದರೆ ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕವಾಗುತ್ತದೆ. ಉದ್ಯೋಗದಲ್ಲಿ ಪ್ರಗತಿ. ಸಾಮಾಜಿಕ ಜನೋಪಕಾರದಿಂದ ಶ್ಲಾಘನೆ ಲಭಿಸಲಿದೆ.

ತುಲಾ: ರಾಜಕೀಯ ವಿದ್ಯಮಾನದಿಂದ ಓಡಾಟ ಅಧಿಕಗೊಳ್ಳುವುದು. ರಿಯಲ್ ಎಸ್ಟೇಟುದಾರರಿಗೆ ವ್ಯವಹಾರ ವೃದ್ಧಿ. ವೃತ್ತಿ ಜೀವನದಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು.

ವೃಶ್ಚಿಕ: ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾಕಟಾಕ್ಷ ಗಳಿಸಬೇಕಾಗುವುದು. ಖಾದಿ ಉದ್ಯಮದವರಿಗೆ ಸೌಲಭ್ಯಗಳು ದೊರೆಯಲಿದೆ.

ಧನು: ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ವ್ಯಾಪಾರದಲ್ಲಿ ಸಾಧಾರಣ ಲಾಭ. ನೆರೆಯವರ ಸಹಕಾರ ಕೇಳುವ ಸಂದರ್ಭ ಬರಲಿದೆ. ಆಪ್ತರೊಬ್ಬರ ನೆರವಿನಿಂದ ಮಗನ ವಿದ್ಯಾಭ್ಯಾಸಕ್ಕೆ ಸಹಾಯವಾಗಲಿದೆ.

ಮಕರ: ನಿಮ್ಮ ಆಲೋಚನೆಯಂತೆ ನೂತನ ಮನೆಕೊಳ್ಳಲು ಹಣದ ವ್ಯವಸ್ಥೆಯಾಗುವುದು. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ. ವೃತ್ತಿ ಪರವಾಗಿ ವಿದೇಶಯಾನದ ಅವಕಾಶ.

ಕುಂಭ: ಭಾಷಾ ಅಧ್ಯಾಪಕರಿಗೆ ಉದ್ಯೋಗದಲ್ಲಿ ಅಸ್ಥಿರತೆ. ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಮನೆಯಲ್ಲಿ ನಡೆಯಲಿದೆ. ಶ್ರೀ ಮಹಾಗಣಪತಿಯ ದರ್ಶನ ಮತ್ತು ಅನುಗ್ರಹ ಪಡೆದುಕೊಳ್ಳಿ.

ಮೀನ: ಪಾಲುದಾರಿಕೆ ವ್ಯವಹಾರಗಳು ಸರಾಗವಾಗಿ ನಡೆದು ಲಾಭವಿರುವುದು. ಯುವ ಕಲಾವಿದರುಗಳಿಗೆ ಹೆಚ್ಚು ಪ್ರೋತ್ಸಾಹ ಅವಕಾಶ. ಸತ್ಯಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಬಿಟ್ಟೇನೆಂದರೂ ಬಿಡದ ಪ್ರಪಂಚ

ಕೆಟ್ಟ ಪ್ರಪಂಚವಿದು, ಸುಟ್ಟ ಕರಿಮನಸು |
ಬಿಟ್ಟುಬಿಡಲರಿದದನು, ಕಟ್ಟಿಕೊಳೆ ಮಷ್ಟು ||
ಮುಟ್ಟಿ ಮುಟ್ಟದವೋಲುಪಾಯದಿಂ ನೋಡದನು |
ಗಟ್ಟಿ ಪುರುಳೇನಲ್ಲ – ಮಂಕುತಿಮ್ಮ || 625 ||

ಪದ-ಅರ್ಥ: ಬಿಟ್ಟುಬಿಡಲರಿದದನು = ಬಿಟ್ಟು ಬಿಡಲು + ಅರಿದ + ಅದನು, ಕಟ್ಟಿಕೊಳೆ = ಕಟ್ಟಿಕೊಂಡರೆ, ಮಷ್ಟು = ಕೊಳೆ, ಮುಟ್ಟಿ ಮುಟ್ಟದವೋಲುಪಾಯದಿಂ = ಮುಟ್ಟಿ + ಮುಟ್ಟದ ವೋಲ್(ಮುಟ್ಟದಂತೆ) + ಉಪಾಯದಿಂ, ನೋಡದನು = ನೋಡು + ಅದನು, ಪುರುಳೇನಲ್ಲ = ಪುರುಳು(ವಸ್ತು) + ಏನಲ್ಲ.

ವಾಚ್ಯಾರ್ಥ: ಇದು ಕೆಟ್ಟ ಪ್ರಪಂಚ. ಮನಸ್ಸು ಸುಟ್ಟು ಕರಿಯಾಗಿದೆ. ಆದರೆ ಇದನ್ನು ಬಿಟ್ಟು ಬಿಡಲು ಆಗದು. ಇದನ್ನು ಕಟ್ಟಿಕೊಂಡರೆ ಕೊಳೆ ತುಂಬಿಕೊಳ್ಳುತ್ತದೆ. ಮುಟ್ಟಿಯೂ ಮುಟ್ಟದ ಹಾಗೆ ಉಪಾಯದಿಂದ ಅದನ್ನು ನೋಡು. ಯಾಕೆಂದರೆ ಇದು ಗಟ್ಟಿ ವಸ್ತುವೇನಲ್ಲ.

ವಿವರಣೆ: ನಮ್ಮ ಸುತ್ತಮುತ್ತ ನಡೆಯುತ್ತಿರುವುದನ್ನು ಗಮನಿಸುತ್ತಿದ್ದರೆ ಪ್ರಪಂಚ ತುಂಬ ಕೆಟ್ಟು ಹೋಗಿದೆ ಎನ್ನಿಸುತ್ತದೆ. ಯಾವುದೋ ಒಂದು ವೈರಾಣು ಇಡೀ ಪ್ರಪಂಚವನ್ನೇ ಆಸ್ಪತ್ರೆ, ಮಸಣವನ್ನಾಗಿಸಿತು. ಪ್ರಜೆಗಳು ಶಾಂತಿಯನ್ನು ಜಯಸಿದರೂ ಒಬ್ಬ ಯುದ್ಧದಾಹಿ ನಾಯಕ ಸಹಸ್ರಾರು ಅಮಾಯಕರ ಪ್ರಾಣಹರಣವಾಗುವಂತೆ ಮಾಡಿದ. ಒಂದಿಬ್ಬರು ಅಧಿಕಾರದಾಹಿ ರಾಜಕಾರಣಿಗಳು ಒಂದು ತೀರ ಸಣ್ಣದಾದ ವಿಷಯವನ್ನು ಧಾರ್ಮಿಕ ಸಂಗತಿಯೆಂದು ಬಿಂಬಿಸಿ, ಸಮುದಾಯಗಳನ್ನು ಒಡೆದು ಅಶಾಂತಿಯನ್ನು ತುಂಬಿದರು. ಇದು ಸಾಲದೆಂಬಂತೆ ವೈಯಕ್ತಿಕ ಸ್ವಾರ್ಥ, ಹಣದಾಸೆಗಳು ಪರಿಸ್ಥಿತಿಯನ್ನು ಹದಗೆಡಿಸಿವೆ. ಕಗ್ಗ ಮೊದಲನೆಯ ಸಾಲಿನಲ್ಲಿ ಮೊದಲರ್ಧದಲ್ಲಿ ಫಲಿತಾಂಶವನ್ನು ಹೇಳುತ್ತ, ಎರಡನೆಯ ಅರ್ಧದಲ್ಲಿ ಕಾರಣವನ್ನು ತಿಳಿಸುತ್ತದೆ. ಈ ಪ್ರಪಂಚ ಕೆಡುವುದಕ್ಕೆ ಕಾರಣವೇನು? ಅದೇ ಸುಟ್ಟ ಕರಿ ಮನಸು.

ಪ್ರಪಂಚ ತಾನಾಗಿಯೇ ಕೆಡುವುದಿಲ್ಲ. ಅದು ತನ್ನಷ್ಟಕ್ಕೆ ತಾನೇ ಸಮಸ್ಥಿತಿಯನ್ನು ಹೊಂದಲು ಪ್ರಯತ್ನಿಸುತ್ತದೆ. ಆದರೆ ಈ ಸುಟ್ಟು ಕರಕಾದ ಮನಸುಗಳಿವೆಯಲ್ಲ, ಅವೇ ಪ್ರಪಂಚವನ್ನು ಕೆಡಿಸುವುದು. ಅವು ಎಂಥ ಮನಸುಗಳು ಎಂಬುದನ್ನು ಹದಿನೆಂಟನೆ ಶತಮಾನದ, ಹೇಮಗಲ್ಲದ, ವಚನಕಾರ ಹೇಮಗಲ್ಲ ಹಂಪ, ಸುಂದರವಾಗಿ ತಿಳಿಸುತ್ತಾನೆ.

‘ಸದಾ ಚಣಚಣಕೊಂದೊಂದನೆಣಿಸಿನೆಣಿಸಿ ಕಾಡೂದೀ ಬಡಗುಮನ, ಜಣಗುಮನ, ಠಕ್ಕಮನ, ಟುಕ್ಕಮನ, ಕೋಪಿಮನ, ಜಾಪಿಮನ’


ಇಷ್ಟು ತರಹದ ವಿಕಾರವಾದ ಮನಸುಗಳು ಪ್ರಪಂಚವನ್ನು ಕೆಟ್ಟದಾಗಿಸುತ್ತವೆ. ಈ ಪ್ರಪಂಚವನ್ನೇ ಬಿಟ್ಟು ಹೋಗಬೇಕೆಂದರೆ ಸಾಧ್ಯವೆ? ಬಿಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿಯೇ ಇರೋಣವೆಂದರೆ, ಅದರ ಕೊಳಕು ನಮಗೂ ಅಂಟಿಕೊಳ್ಳುತ್ತದೆ. ಹಾಗಾದರೆ ಇಲ್ಲಿ ಬದುಕುವುದು ಹೇಗೆ ಎನ್ನುವುದನ್ನು ಕಗ್ಗ ತಿಳಿಸುತ್ತದೆ. ಇಲ್ಲಿ ಅಂಟಿಯೂ ಅಂಟದಂತೆ ಇರಬೇಕಂತೆ, ನೀರಿನಲ್ಲೇ ಇದ್ದೂ ನೀರನ್ನು ಅಂಟಿಸಿಕೊಳ್ಳದ ಕಮಲದ ಎಲೆಯಂತೆ. ಪ್ರಪಂಚದ ಜವಾಬ್ದಾರಿಗಳನ್ನು ನಡೆಸುತ್ತಲೇ ಇರಬೇಕು, ಆದರೆ ಇದೊಂದು ಆಟ ಮಾತ್ರ ಎಂಬುದನ್ನು ನೆನಪಿಡಬೇಕು. ಕಗ್ಗ ಬಹುದೊಡ್ಡ ಚಿಂತನೆಯನ್ನು ಕೊನೆಯ ಸಾಲಿನಲ್ಲಿ ಕೊಡುತ್ತದೆ. ಈ ಪ್ರಪಂಚ ಗಟ್ಟಿಯಾದದ್ದಲ್ಲ. ಇದು ತಾತ್ಪೂರ್ತಿಕವಾದದ್ದು. ಇದಕ್ಕಿಂದ ಗಟ್ಟಿಯಾದದ್ದು, ಶಾಶ್ವತವಾದದ್ದು ಮೇಲಿದೆ. ಕೆಲವೇ ದಿನಗಳ ಕಾಲ ಇದ್ದು ಹೋಗುವ ತಾತ್ಪೂರ್ತಿಕವಾದ, ಗಟ್ಟಿಯಲ್ಲದ ಪ್ರಪಂಚದಲ್ಲಿ ಅತಿಥಿ ಇದ್ದ ಹಾಗೆ ಇದ್ದರೆ, ಜಗತ್ತನ್ನು ಬಿಡಲೂ ಬೇಕಲ್ಲ, ಅದರ ಕೊಳೆಯೂ ಅಂಟುವುದಿಲ್ಲ.

ಪದಬಂಧ 4954

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹರಕು ಬಟ್ಟೆ ತೊಟ್ಟಿರುವ ವಾರಸುದಾರ! (4)
3.ಹರಸಾಹಸ ಪಟ್ಟಾಗ ದೊರೆತ ಗೆಳೆತನ! (4)
5.ಜಾತಿಯಲ್ಲೇ ರೇಖಾಗಣಿತ ಬಂದಿದೆ! (3)
6.ಈತ ಕುರಿ ಕಾಯುವವನು (3)
8.ಸನ್ಯಾಸ ಪಡೆದವನ ರಚನೆ! (3)
9.ದಖನ್‌ಭೂಮಿಯಲ್ಲಿ ಹೆಣ ಮಣ್ಣು ಮಾಡುವುದು (3)
10.ನಕಲು ಎಂದಾಗ ಕೋಪಗೊಳ್ಳು (3)
11.ಲಕ್ಷ ಹಣ ನೀಡಿದರೂ ತೋರಿಸಿದ ಅನಾದರ! (3)
12.ದಾಯಾದಿಯನ್ನು ಬೀಳ್ಕೊಡುವುದು (3)
13.ಚಡಪಡಿಸುತ್ತಾ ಹಾಕಿರುವ ಹಾಸುಗಲ್ಲು (3)
14.ಮುಸಲ್ಮಾನರ ಪ್ರಾರ್ಥನಾ ಮಂದಿರ (3)
16.ಶಕೆ ಬಂದಾಗ ಮುತ್ತುವ ಸೊಳ್ಳೆ (3)
18.ಬೇಡದ ರೀತಿ ದೊರೆತ ಟ್ರೈನಿಂಗ್! (4)
19.ಹಂಚಿಕೆದಾರ ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ
1.ಲಾಯಕ್ಕು ಎನ್ನಿಸಿದ್ದೆಲ್ಲಾ ಬರೀ ನಷ್ಟ! (3)
2.ಜಾಗರಣೆಯಲ್ಲಿ ಸಿಕ್ಕಿರುವ ಬಿಡುವು (2)
3.ಸಮಿತಿಯಲ್ಲಿರುವ ಹೆಂಡತಿ (2)
4.ತಿಂಗಳ ಕೊನೆಯಲ್ಲಿ ಒಂದಾಗಿ ಸೇರಿಸಿದುದು (3)
7.ಬಯಲಲ್ಲಿದ್ದ ಮಾವುತನ ಪ್ರತ್ಯುತ್ತರ (5)
8.ಬ್ರಹ್ಮನ ಕಟ್ಟಳೆಯಿದು (5)
13.ನಿರ್ವಿವಾದವಾಗಿ ಅಗಿದು ನುರಿಸಿದುದು (3)
15.ಅಂಕಣದಲ್ಲಿ ಕಾಣಿಸಿದ ತೇದಿ (3)
16.ಕುಶಾಗ್ರಮತಿಯ ಬುದ್ಧಿ (2)
17.ಕವನವನ್ನು ಬರೆದವನು (2)



4953ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮನ್ವಂತರ 3.ಪಿಳ್ಳಂಗೋವಿ 5.ತಿಲಕ 7.ಮಿತ್ರ 9.ವನಪಾಲಕ 11.ಸ್ಥಳಪುರಾಣ 13.ತರಿ 16.ಗಾಯಕ 18.ಸನ್ನಿಧಾನ 19.ಸರಿತ್ವತಿ

ಮೇಲಿಂದ ಕೆಳಕ್ಕೆ: 1.ಮರುಭೂಮಿ 2.ರತಿ 3.ಪಿಕ 4.ವಿದ್ವಾಂಸ 6.ಲಶುನ 8.ತ್ರಯಸ್ಥ 10.ಕಡಿತ 12.ರಾಧೇಯ 14.ರಿಯಾಯಿತಿ 15.ಪ್ರಯಾಸ 16.ಗಾನ 17.ಕಸ

ಸುಡೊಕು 5340


				9			1	8
1			8			5		2
		2		6				
		7			9	6		
4	2			3				9
6			7		8		2	
2		5	4		7	9		6
								5
9		6	3		5		4	1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5339 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಶೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,307
ಇಂದಿನ ಅಂತ್ಯ	16,240
▼	61
ದಿನದ ಕನಿಷ್ಠ	16,404

ವಿನಿಮಯ ದರ

$ ಡಾಲರ್	77.34
£ ಪೌಂಡ್	95.32
€ ಯುರೊ	81.85
¥ ಯೆನ್ (100ಕ್ಕೆ)	59.34

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹385
12 ಮೊಟ್ಟೆಗೆ ₹55
ಮೈಸೂರು
100 ಮೊಟ್ಟೆಗೆ ₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1630)
ಸೋಯಾ (ರಿಫೈನ್ಡ್)	₹1560 (1565)
ಸೂರ್ಯಕಾಂತಿ (ರಿಫೈನ್ಡ್)	₹1870 (1870)
ಪಾಮೋಲಿನ್	₹1556 (1567)

ಕೊಬ್ಬರಿ ಧಾರಣೆ

ತುರುವೇಕೆರೆ
₹15600-15700

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-25000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹168
ಆರ್‌ಎಸ್‌ಎಸ್-5 ₹162
ಗುಡ್ ಲಾಟ್ ₹158

ಕ್ಯಾಬ್ ಕಂಪನಿಗಳಿಗೆ ಕೇಂದ್ರದ ಎಚ್ಚರಿಕೆ

ನವದೆಹಲಿ (ಪಿಟಿಐ): ಗ್ರಾಹಕರಿಂದ ಬರುತ್ತಿರುವ ದೂರುಗಳನ್ನು ಇತ್ಯರ್ಥಪಡಿಸದೆ ಇದ್ದರೆ, ತಮ್ಮ ವ್ಯವಸ್ಥೆಯನ್ನು ಸುಧಾರಿಸಿಕೊಳ್ಳದೆ ಇದ್ದರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರವು ಓಲಾ, ಉಬರ್‌ನಂತಹ ಕ್ಯಾಬ್ ಸೇವಾ ಕಂಪನಿಗಳಿಗೆ ಮಂಗಳವಾರ ಎಚ್ಚರಿಕೆ ನೀಡಿದೆ.

ಕ್ಯಾಬ್ ಚಾಲಕರು ಗ್ರಾಹಕರಿಂದ ಬರುವ ಬುಕಿಂಗ್ ಸ್ವೀಕರಿಸಿದ ನಂತರದಲ್ಲಿ, ಟ್ರಿಪ್ ರದ್ದು ಮಾಡುವಂತೆ ಗ್ರಾಹಕರನ್ನು ಒತ್ತಾಯಿಸುತ್ತಾರೆ. ಇದರಿಂದಾಗಿ ಗ್ರಾಹಕರು ದಂಡ ಪಾವತಿಸಬೇಕಾಗುತ್ತದೆ. ಕೆಲವು ಕ್ಯಾಬ್ ಸೇವಾ ಕಂಪನಿಗಳು ನ್ಯಾಯಸಮ್ಮತವಲ್ಲದ ರೀತಿಯಲ್ಲಿ ವಹಿವಾಟು ನಡೆಸುತ್ತಿವೆ ಎಂಬ ದೂರುಗಳು ಗ್ರಾಹಕರಿಂದ ಬಂದಿದ್ದವು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಕ್ಯಾಬ್ ಸೇವಾ ಕಂಪನಿಗಳ ಜೊತೆ ಮಂಗಳವಾರ ಸಭೆ ನಡೆಸಿದೆ.

'ಗ್ರಾಹಕರಿಂದ ಬರುತ್ತಿರುವ ದೂರುಗಳು ಹೆಚ್ಚಾಗುತ್ತಿರುವ ಬಗ್ಗೆ ನಾವು ಕಂಪನಿಗಳಿಗೆ ಅಂಕಿ–ಅಂಶಗಳನ್ನು ನೀಡಿದ್ದೇವೆ. ವ್ಯವಸ್ಥೆ ಸುಧಾರಿಸಿಕೊಳ್ಳಬೇಕು ಎಂದು ಸೂಚಿಸಿದ್ದೇವೆ' ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.



ಕ್ಯಾಬ್ ಸೇವಾ ಕಂಪನಿಗಳು ಪರಿಹಾರ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು ಎಂದು ಕೇಂದ್ರ ಗ್ರಾಹಕರ ಹಿತರಕ್ಷಣಾ ಪ್ರಾಧಿಕಾರದ ಮುಖ್ಯ ಆಯುಕ್ತೆ ನಿಧಿ ಖರೆ ಹೇಳಿದ್ದಾರೆ. ನ್ಯಾಯಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಳ್ಳುವುದನ್ನು ಸಹಿಸಿಕೊಳ್ಳಲಾಗದು ಎಂಬುದನ್ನು ಕಂಪನಿಗಳಿಗೆ ತಿಳಿಸಲಾಗಿದೆ ಎಂದು ಖರೆ ಹೇಳಿದ್ದಾರೆ.

ಓಲಾ, ಉಬರ್, ಮೇರು, ರ್‍ಯಾಪಿಡೊ ಮತ್ತು ಜುಗ್ನು ಕಂಪನಿಯ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಆದರೆ ಅವರು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಲಿಲ್ಲ.

ಒಂದೆಡೆಯಿಂದ ಇನ್ನೊಂದೆಡೆ ಪ್ರಯಾಣಿಸಲು ಕೊಡಬೇಕಿರುವ ಶುಲ್ಕವು ಬೇರೆ ಬೇರೆ ಸಂದರ್ಭಗಳಲ್ಲಿ ಬದಲಾಗುವುದು ಏಕೆ ಎಂದು ಕೇಂದ್ರವು ಕಂಪನಿಗಳನ್ನು ಪ್ರಶ್ನಿಸಿದೆ.

'ಪಂಜಾಬ್ ಪೊಲೀಸ್ ಗುಪ್ತಚರ ಕಚೇರಿ ಮೇಲೆ ದಾಳಿ: ಬಂಧನ'

ಚಂಡಿಗಡ: ಮೊಹಾಲಿಯಲ್ಲಿರುವ ಪಂಜಾಬ್ ಪೊಲೀಸ್‌ನ ಗುಪ್ತಚರ ವಿಭಾಗದ ಕೇಂದ್ರ ಕಚೇರಿ ಮೇಲೆ ನಡೆದ ರಾಕೆಟ್ ಚಾಲಿತ ಗ್ರೆನೇಡ್ (ಆರ್‌ಪಿಜಿ) ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವರನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮಂಗಳವಾರ ತಿಳಿಸಿದ್ದಾರೆ.

'ಘಟನೆಯ ಸಂಬಂಧ ಇನ್ನಷ್ಟು ಮಂದಿಯನ್ನು ಬಂಧಿಸಲಾಗುವುದು. ರಾಜ್ಯದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸು ವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗು ವುದು' ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ. 'ಮಹತ್ವದ ಸುಳಿವು ಲಭಿಸಿದ್ದು, ಶೀಘ್ರವೇ ಪ್ರಕರಣವನ್ನು ಭೇದಿಸ ಲಾಗುವುದು' ಎಂದು ಪಂಜಾಬ್ ಡಿಜಿಪಿ ವಿ.ಕೆ. ಭಾವರಾ ಹೇಳಿದ್ದಾರೆ. ದಾಳಿಗೆ ಟಿಎನ್‌ಟಿ (ಟ್ರಿನಿಟ್ರೋಟೊಲ್ಯೂನ್) ಸ್ಫೋಟಕ ಬಳಸಿರುವ ಸಾಧ್ಯತೆ ಇದೆ. ದಾಳಿ ವೇಳೆ ಕೋಣೆಯಲ್ಲಿ ಯಾರೂ ಇರಲಿಲ್ಲ. ಕೋಣೆಯ ಗೋಡೆಗಳಿಗೆ ಹಾನಿಯಾಗಿದೆ. ಕಿಟಕಿಯ ಗಾಜುಗಳು ಪುಡಿಪುಡಿಯಾಗಿವೆ ಎಂದು ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹288-497
ದ್ವಿತಳಿ (ಬಿ.ವಿ) ₹245-678

ಮುಂಬೈ ಧಾರಣೆ

ಶೇಂಗಾ

10-5-2022

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9550-6900
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	10000-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1640)
ಒಂದು ವಾರದ ಡೆಲಿವರಿ	1610 (1635)
ಸೋಯಾ ಕಚ್ಚಾ	1545 (1552)
ಪಾಮ್ ವಾರದ ಡೆಲಿವರಿ	1554 (1565)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,290 (51,200)
ಬೆಳ್ಳಿ ಕೆ.ಜಿ 61,475 (61,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 500

ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-54000
ಭದ್ರಾವತಿ
ರಾಶಿ 43599-50899
ಚನ್ನಗಿರಿ
ರಾಶಿ 48439-50599
ಚಿತ್ರದುರ್ಗ
ಅಪಿ 50019-50429
ಬೆಟ್ಟೆ 39110-39569
ಕೆಂಪುಗೋಟು 32209-32699
ರಾಶಿ 49539-49989
ಕಾರ್ಕಳ
ಹೊಸತು 40000-45000
ಹಳತು 46000-54000
ಮಂಗಳೂರು
ಕೋಕ 20000-25000
ಪುತ್ತೂರು
ಹೊಸತು 27500-45000
ಸಾಗರ
ಬಿಳಿಗೋಟು 28579-29499
ಚಾಲಿ 38299-38609
ಕೋಕ 29290-35699
ಕೆಂಪುಗೋಟು 35709-35709
ರಾಶಿ 47699-50419
ಸಿಪ್ಪೆಗೋಟು 21300-21400
ಶಿವಮೊಗ್ಗ
ಬೆಟ್ಟೆ 50369-53499
ಗೊರಬಲು 18000-37499
ರಾಶಿ 46000-50832
ಸರಕು 58000-79796
ಸಿದ್ದಾಪುರ
ಬಿಳಿಗೋಟು 26099-32089
ಚಾಲಿ 35489-39999
ಕೋಕ 21900-30900
ಕೆಂಪುಗೋಟು 30909-31509
ರಾಶಿ 45599-50507
ತಟ್ಟಿಬೆಟ್ಟೆ 40399-43269
ಶಿರಸಿ
ಬೆಟ್ಟೆ 33821-44699
ಬಿಳಿಗೋಟು 16391-33399
ಚಾಲಿ 37298-40399
ರಾಶಿ 41679-50199
ಯಲ್ಲಾಪುರ
ಬಿಳಿಗೋಟು 28012-34092
ಚಾಲಿ 36259-40399
ಕೋಕ 18899-30899
ಕೆಂಪುಗೋಟು 30599-34599
ರಾಶಿ 47809-55019
ತಟ್ಟಿಬೆಟ್ಟೆ 37609-46899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15600	15700	206.10 ಸೆಂಟ್ಸ್
ಎಸಿ	8900	8500	8400	
ಆರ್‌ಪಿ	9500	9800	9850	ಲಂಡನ್
ಆರ್‌ಸಿ	4500	4200	4350	2020 ಡಾಲರ್ಸ್

ಠೇವಣಿ ಬಡ್ಡಿ ದರ ಹೆಚ್ಚಿಸಿದ ಎಸ್‌ಬಿಐ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ ₹ 2 ಕೋಟಿಗಿಂತ ಹೆಚ್ಚಿನ ಮೊತ್ತದ ವಿವಿಧ ಅವಧಿ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇಕಡ 0.40ರಿಂದ ಶೇ 0.90ರವರೆಗೆ ಹೆಚ್ಚಿಸಿದೆ. ಇದು ಮಂಗಳವಾರದಿಂದ ಜಾರಿಗೆ ಬಂದಿದೆ.

ಒಂದು ವರ್ಷಕ್ಕಿಂತ ಹೆಚ್ಚಿನ, ಎರಡು ವರ್ಷಕ್ಕಿಂತ ಕಡಿಮೆ ಅವಧಿಯ ಠೇವಣಿ ಮೇಲಿನ ಬಡ್ಡಿ ದರವನ್ನು ಶೇ 0.40ರಷ್ಟು ಹೆಚ್ಚಿಸಲಾಗಿದೆ. ಎರಡು ವರ್ಷಕ್ಕಿಂತ ಹೆಚ್ಚಿನ ಹಾಗೂ ಮೂರು ವರ್ಷದವರೆಗಿನ ಠೇವಣಿಯ ಬಡ್ಡಿ ದರ ಶೇ 0.65ರಷ್ಟು, ಮೂರು ವರ್ಷಕ್ಕಿಂತ ಹೆಚ್ಚಿನ ಹಾಗೂ ಹತ್ತು ವರ್ಷದವರೆಗಿನ ಠೇವಣಿ ಬಡ್ಡಿ ದರ ಶೇ 0.90ರಷ್ಟು ಜಾಸ್ತಿ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಹೂಡಿಕೆದಾರರಿಗೆ ₹ 11.22 ಲಕ್ಷ ಕೋಟಿ ನಷ್ಟ


ನವದೆಹಲಿ (ಪಿಟಿಐ): ಷೇರುಗಳಲ್ಲಿ ಹೂಡಿಕೆ ಮಾಡಿರುವವರ ಸಂಪತ್ತು ಮೌಲ್ಯವು ಮೂರು ದಿನಗಳ ವಹಿವಾಟಿನಲ್ಲಿ ಒಟ್ಟು ₹ 11.22 ಲಕ್ಷ ಕೋಟಿಯಷ್ಟು ಕರಗಿದೆ.

ದೇಶದ ಷೇರುಪೇಟೆ ಸೂಚ್ಯಂಕಗಳು ಸತತ ಮೂರನೆಯ ದಿನವೂ ಇಳಿಕೆ ಕಂಡಿವೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರ 105 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 61 ಅಂಶ ಇಳಿಕೆ ಕಂಡಿವೆ.

ಸೆನ್ಸೆಕ್ಸ್ ಮೂರು ದಿನಗಳಲ್ಲಿ 1,337 ಅಂಶ ಕುಸಿದಿದೆ. 'ಬಡ್ಡಿ ದರ ಹೆಚ್ಚಾಗುತ್ತಿರುವುದು, ಆರ್ಥಿಕ ಬೆಳವಣಿಗೆಯು ನಿಧಾನಗತಿಯಲ್ಲಿ ಇರುತ್ತದೆ ಎಂಬ ಕಳವಳ, ಚೀನಾದಲ್ಲಿ ಕೋವಿಡ್ ಸಂಬಂಧಿತ ನಿರ್ಬಂಧಗಳು ಬಿಗಿಗೊಂಡಿರುವುದು ಹೂಡಿಕೆದಾರರ ಮೇಲೆ ಪ್ರಭಾವ ಬೀರಿವೆ. ಈ ಕಾರಣಗಳಿಂದಾಗಿ ಷೇರು ಮಾರುಕಟ್ಟೆಗಳಲ್ಲಿ ಅಸ್ಥಿರ ವಹಿವಾಟು ನಡೆಯುತ್ತಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

ಬ್ಯಾಂಕ್, ಹಣಕಾಸು ಮತ್ತು ಎಫ್‌ಎಂಸಿಜಿ ವಲಯದ ಸೂಚ್ಯಂಕಗಳು ತುಸು ಏರಿಕೆ ಕಂಡಿವೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಮಂಗಳವಾರ 10 ಪೈಸೆಯಷ್ಟು ಏರಿಕೆ ಕಂಡಿದ್ದು, 77.34ಕ್ಕೆ ತಲುಪಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಹೇಶ್ ಎಲ್., ಕುಮ್ಮೂರು, ಬ್ಯಾಡಗಿ

● **ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಬಹಳ ಬೇಗ ಹಣ ವೃದ್ಧಿಯಾಗುತ್ತದೆ ಎಂದು ಬರೆದಿದ್ದೀರಿ. ಆದರೆ ಇದರಲ್ಲಿ ಹೇಗೆ, ಯಾವ ತರಹ ಹೂಡಿಕೆ ಮಾಡಬೇಕು? ನಾನು ಸರ್ಕಾರಿ ನೌಕರ. ತಿಂಗಳಿಗೆ ಸುಮಾರು ₹ 1,000ದಿಂದ ₹ 2,000ವರೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು. ಸುಮಾರು 15 ವರ್ಷ ಹೂಡಿಕೆ ಮಾಡಬಹುದೇ? ಎಸ್‌ಐಪಿ ಒಳ್ಳೆಯದೇ?**

ಉತ್ತರ: ನೀವು ದೀರ್ಘಕಾಲದ ಹೂಡಿಕೆಯ ಉದ್ದೇಶ ಹೊಂದಿರುವುದು ಶ್ಲಾಘನೀಯ. ನಿಮ್ಮ ತಿಂಗಳ ಹೂಡಿಕೆ ₹ 2,000 ಆಗಿದ್ದಲ್ಲಿ, ಈ ಮೊತ್ತವನ್ನು ಬ್ಯಾಂಕ್‌ಗಳಲ್ಲಿ ಆರ್.ಡಿ. ರೂಪದಲ್ಲಿ ಹೂಡಿಕೆ ಮಾಡಿದರೆ ಗರಿಷ್ಠ ವಾರ್ಷಿಕ ಸರಾಸರಿ ಬಡ್ಡಿ ದರದಂತೆ (ಶೇಕಡ 8) ಲೆಕ್ಕ ಹಾಕಿದರೂ 15 ವರ್ಷಗಳಲ್ಲಿ ಸಂಗ್ರಹವಾಗುವ ಅಸಲು ಮೊತ್ತ ₹ 3.60 ಲಕ್ಷ ಹಾಗೂ ಬಡ್ಡಿ ಮೊತ್ತ ₹ 2.91 ಲಕ್ಷ.

ಆದರೆ ಮ್ಯೂಚುವಲ್ ಫಂಡ್‌ನಲ್ಲಿ ಇದೇ ಮೊತ್ತ ಹೂಡಿಕೆ ಮಾಡಿದರೆ (ಇದುವರೆಗಿನ ಲಾಭದ ಲೆಕ್ಕದಲ್ಲಿ ಹೇಳುವುದಾದರೆ) ವಾರ್ಷಿಕ ಸರಾಸರಿ ಶೇ 10ರಿಂದ ಶೇ 14ರಷ್ಟು ಗಳಿಕೆ ಬರುವ ಸಾಧ್ಯತೆ ಇದೆ. ಪ್ರತಿ ನಾಲ್ಕೈದು ವರ್ಷಗಳಿಗೊಮ್ಮೆ ಆರ್ಥಿಕತೆ ಮುಗ್ಗರಿಸುವ ಸಾಧ್ಯತೆ ಇಲ್ಲದ್ದಿಲ್ಲ. ಇಂತಹ ಸಂದರ್ಭಗಳು ಹೊಸ ಹೂಡಿಕೆಗೆ ಉತ್ತಮ ಅವಕಾಶವನ್ನು ಕೊಡುತ್ತವೆ. ಇತ್ತೀಚಿನ ಆರೇಳು ತಿಂಗಳ ಅವಧಿಯಲ್ಲಿ ಮಾರುಕಟ್ಟೆ ಒಂದಿಷ್ಟು ಕುಸಿತ ಕಂಡಿದ್ದರೂ ದೀರ್ಘಾವಧಿ ಹೂಡಿಕೆಗೆ ಇದು ಸಕಾಲ. ಕೆಲವೊಮ್ಮೆ ಮಾರುಕಟ್ಟೆಯನ್ನು ಅವಲೋಕಿಸಿದಾಗ ವರ್ಷದಿಂದ ವರ್ಷಕ್ಕೆ ಹೂಡಿಕೆಯ ಮೊತ್ತ ದ್ವಿಗುಣಗೊಂಡಿದ್ದೂ ಇದೆ.

ನೀವು ಹೂಡಿಕೆ ಮಾಡುವ ಮುನ್ನ ನಿಮ್ಮ ಕೆವೈಸಿ ದಾಖಲೆಗಳನ್ನು ಮೊದಲು ಸಂಗ್ರಹಿಸಿ. ಸಮೀಪದ ಜಿಲ್ಲಾ ಕೇಂದ್ರದ ಯಾವುದೇ ಮ್ಯೂಚುವಲ್ ಫಂಡ್ ಹೌಸ್‌ನಲ್ಲಿ ನಿಮ್ಮ ಖಾತೆಯನ್ನು ನೇರವಾಗಿ ತೆರೆಯಬಹುದು. ನಿಮ್ಮ ಬ್ಯಾಂಕ್ ಖಾತೆ ವಿವರ, ಕ್ಯಾನ್ಸಲ್ ಮಾಡಿದ ಚೆಕ್ ಪ್ರತಿ ಅಗತ್ಯ. ನೋಂದಾಯಿತ ಬ್ರೋಕಿಂಗ್ ಏಜೆಂಟ್‌ಗಳ ಮೂಲಕವೂ ಖಾತೆ ತೆರೆಯಬಹುದು. ನೀವು ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡುವುದರಲ್ಲಿ ಪರಿಣತರಿದ್ದರೆ ಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕವೇ ಖಾತೆ ತೆರೆಯಬಹುದು.

ಎಸ್‌ಐಪಿಗೂ ಇಲ್ಲಿ ಅವಕಾಶವಿದೆ. ತಿಂಗಳ ನಿರ್ದಿಷ್ಟ ದಿನ ಮ್ಯೂಚುವಲ್ ಫಂಡ್ ಖಾತೆಗೆ ಹಣ ವರ್ಗಾವಣೆಯಾಗಲು ಅಗತ್ಯವಿರುವ ಹಣ ನಿಮ್ಮ ಬ್ಯಾಂಕ್ ಖಾತೆಯಲ್ಲಿ ಇರುವಂತೆ ನೋಡಿಕೊಳ್ಳಿ. ಆದಾಯ ವೃದ್ಧಿಯಾದಂತೆ ನಿಮ್ಮ ಹೂಡಿಕೆಯ ಮೊತ್ತವನ್ನೂ ಹೆಚ್ಚಿಸುವ ಗುರಿ ಹೊಂದಿರಿ. ಗಳಿಸಿದ ಡಿವಿಡೆಂಡ್, ಲಾಭಾಂಶದ ಮೇಲೆ ತೆರಿಗೆ ಇದೆ ಎನ್ನುವುದೂ ಗಮನದಲ್ಲಿರಲಿ. ನಿರ್ದಿಷ್ಟ ಹೂಡಿಕೆಯ ಬಗೆಗಿನ ಹೆಚ್ಚಿನ ಮಾಹಿತಿಗೆ ಸಮೀಪದ ಫಂಡ್ ಹೌಸ್ ಅಥವಾ ನೋಂದಾಯಿತ ಏಜೆಂಟರನ್ನು ಸಂಪರ್ಕಿಸಿ.

ನಾಗೇಶ ಎಂ.ಆರ್, ಹೆಗ್ಗನಹಳ್ಳಿ, ಬೆಂಗಳೂರು

● **ನಾನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕೆಂದಿರುವೆ. ಆದರೆ ಅದರಲ್ಲಿ ಈಕ್ವಿಟಿ, ಡೆಟ್, ಲಿಕ್ವಿಡ್ ಇತ್ಯಾದಿ ಅನೇಕ ವಿಧಗಳಿವೆ ಎಂದು ತಿಳಿದಿದ್ದೇನೆ. ಇವುಗಳಲ್ಲಿ ನಾವು ಹೇಗೆ ಆಯ್ಕೆ ಮಾಡಬೇಕು ಎಂದು ತಿಳಿಸಿ. ಯಾವ ಸಂದರ್ಭಗಳಲ್ಲಿ ನಾವು 'ಸ್ವಿಚ್' ಮಾಡಬಹುದು ಎಂದೂ ತಿಳಿಸಿ.**

ಉತ್ತರ: ಹೂಡಿಕೆಯ ಉದ್ದೇಶ ಹಾಗೂ ಹೂಡಿಕೆದಾರರು ತಾಳಿಕೊಳ್ಳಬಹುದಾದ ರಿಸ್ಕ್‌ಗೆ ತಕ್ಕಂತೆ ಮ್ಯೂಚುವಲ್ ಫಂಡ್ ಹೌಸ್‌ಗಳು ವಿವಿಧ ಯೋಜನೆಗಳನ್ನು ರೂಪಿಸುತ್ತವೆ. ನಮಗೆ ಅನುಕೂಲವಾಗುವ ಯೋಜನೆ ಆಯ್ಕೆ ಹೇಗೆ ಮಾಡಬೇಕೆನ್ನುವುದು ಸಹಜ ಪ್ರಶ್ನೆ. ಮೊದಲು ನಮ್ಮ ಹೂಡಿಕೆಯ ಅವಧಿ, ಹೂಡಿಕೆಗೆ ಹೊಂದಿಸಬಹುದಾದ ಮೊತ್ತ, ನಮ್ಮ ನಿರೀಕ್ಷೆಗಳನ್ನು ನಿರ್ಧರಿಸಬೇಕು. ನಿರೀಕ್ಷೆಯು ಲಾಭಗಳಿಸುವುದೇ ಆದರೂ ಮಾರುಕಟ್ಟೆ ತಿರುಗಿಬಿದ್ದಾಗ ಸಂಭವಿಸಬಹುದಾದ ನಷ್ಟವನ್ನು ಯಾವ ಹಂತದವರೆಗೆ ತಡೆದುಕೊಳ್ಳುವ ಶಕ್ತಿ ನಮಗಿದೆ, ಅನಿರೀಕ್ಷಿತವಾಗಿ ಹಣಕಾಸು ಬಿಕ್ಕಟ್ಟು ಉಂಟಾದಾಗ ಹೂಡಿಕೆಯ ಹಣವನ್ನು ನಷ್ಟದಲ್ಲಿ ಹಿಂಪಡೆಯದೆ ಇರಲು ಸಾಧ್ಯವೇ ಎಂಬುದನ್ನು ಗಮನಿಸಬೇಕು. ಹೂಡಿಕೆಯಲ್ಲಿ ಹೆಚ್ಚು ಲಾಭದ ನಿರೀಕ್ಷೆ ಹೊಂದಿದವರು ಹೆಚ್ಚಿನ ರಿಸ್ಕ್ ತೆಗೆದುಕೊಳ್ಳಲು ತಯಾರಿರಬೇಕು. ಅದೇ ರೀತಿ ಮಾರುಕಟ್ಟೆ ಅಪಾಯ ಎದುರಿಸುವ ಮನಸ್ಸು ತೋರದವರು ಅತಿ ಕಡಿಮೆ ಪ್ರಮಾಣದ ಲಾಭದಲ್ಲಿ ತೃಪ್ತಿ ಹೊಂದಲು ಸಿದ್ಧರಿರಬೇಕು.

ಈಕ್ವಿಟಿ ಯೋಜನೆಗಳು ಹೆಚ್ಚು ಲಾಭವನ್ನೂ ಮಾರುಕಟ್ಟೆ ಅಪಾಯವನ್ನೂ ಹೊಂದಿವೆ. ಕಾರಣ ಇಲ್ಲಿ ಸಂಗ್ರಹವಾಗುವ ಹೆಚ್ಚಿನ ಮೊತ್ತವನ್ನು ನೇರವಾಗಿ ಷೇರುಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಡೆಟ್ ಫಂಡ್‌ಗಳು ಹೆಚ್ಚಾಗಿ ಕಾರ್ಪೊರೇಟ್ ಬಾಂಡ್, ಸರ್ಕಾರಿ ಬಾಂಡ್, ನಿಖರ ಆದಾಯ ನೀಡುವ ಯೋಜನೆಗಳಲ್ಲಿ ಹೂಡಿಕೆ ಮಾಡುತ್ತವೆ. ಹೀಗಾಗಿ ಅಪಾಯ ಹಾಗೂ ಲಾಭಾಂಶ ಇಲ್ಲಿ ಕಡಿಮೆ. ಲಿಕ್ವಿಡ್ ಫಂಡ್‌ಗಳು ನಿಯಮಿತ ಆದಾಯ ನೀಡುವ, ತಕ್ಷಣಕ್ಕೆ ಹಿಂಪಡೆಯಬಹುದಾದ ಹೂಡಿಕೆಗಳು. ಸಮತೋಲಿತ ಯೋಜನೆಯ (ಬ್ಯಾಲೆನ್ಸ್ಡ್) ಹೂಡಿಕೆಗಳು ಈ ಮೇಲಿನ ಹೂಡಿಕೆಗಳ ಮಿಶ್ರಣ. ಮಧ್ಯಮ ಅಥವಾ ದೀರ್ಘಾವಧಿಯಲ್ಲಿ ಒಂದಿಷ್ಟು ಅಪಾಯಗಳನ್ನು ತೆಗೆದುಕೊಳ್ಳಲು ಸಿದ್ಧರಾಗಿರುವವರಿಗೆ ಇವು ಉತ್ತಮ ಆಯ್ಕೆ.

ಸ್ವಿಚಿಂಗ್ ಆಯ್ಕೆ ನಿಮಗೆ ಅನೇಕ ಲಾಭ ಕೊಡುತ್ತದೆ. ಆದರೆ ಇದಕ್ಕೆ ತುಸು ವಿಶ್ಲೇಷಣೆ ಮಾಡಬೇಕು ಹಾಗೂ ಸಮಯ ಕೊಡಬೇಕು. ಮಧ್ಯಂತರ ಅವಧಿಗೆ ಮಾರುಕಟ್ಟೆ ಕುಸಿಯುವ ನಿರೀಕ್ಷೆಯಲ್ಲಿದ್ದರೆ ಅಥವಾ ಒಂದು ಹಂತದ ನಂತರ ಫಂಡ್‌ಗಳಲ್ಲಿನ ವೃದ್ಧಿಯು ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲವೆಂದು ಕಂಡುಬಂದಲ್ಲಿ ಸ್ವಿಚಿಂಗ್ ಆಯ್ಕೆ ಪರಿಗಣಿಸಬಹುದು. ನೀವು ತೀರಾ ರಿಸ್ಕ್ ಇರುವ ಯೋಜನೆಗಳಿಂದ ಒಂದು ಹಂತ ಕೆಳಕ್ಕೆ, ತುಸು ಕಡಿಮೆ ರಿಸ್ಕ್ ಇರುವ ಯೋಜನೆಗೆ ನಿಮ್ಮ ಹೂಡಿಕೆಯನ್ನು ವರ್ಗಾಯಿಸಬಹುದು. ಮಾರುಕಟ್ಟೆಯಲ್ಲಾಗುವ ಭಾರೀ ಕುಸಿತದ ಪರಿಣಾಮಗಳನ್ನು ತುಸು ನಿವಾರಿಸಿಕೊಳ್ಳಬಹುದು. ●

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್:businessdesk@prajavani.co.in

ಸ್ತಬ್ಧವಾಯಿತು ಸಂತೂರ್ ನಾದನದಿ

● ಉಮಾ ಅನಂತ್

ನುಡಿ ನಮನ

ಹೇಳಿ ಕೇಳಿ ಸಂತೂರ್ ಜಮ್ಮು ಕಾಶ್ಮೀರದಲ್ಲಿ ಒಂದು ಜಾನಪದ ವಾದ್ಯ. ಈ ತಂತಿ ವಾದ್ಯಕ್ಕೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಅಳವಡಿಸಿ, ನಾದದ ಘಮಲನ್ನು ವಿಶ್ವದುದ್ದಕ್ಕೂ ಪಸರಿಸಿದ ಅಪರೂಪದ ವಾದಕ ಪಂ. ಶಿವಕುಮಾರ್ ಶರ್ಮಾ. ತಂದೆ ಪಂ. ಉಮಾದತ್ತ ಶರ್ಮಾ ಅವರ ಬಳಿಯೇ ಸಂತೂರ್ ವಾದನ ಕಲಿತ ಪಂ. ಶರ್ಮಾ, ಸಾಧನೆಯ ಶಿಖರ; ಸಂಗೀತ ಲೋಕ ಕಂಡ ಅನರ್ಘ್ಯ ರತ್ನ! ನಿರ್ಮಲವಾದ ನದಿಯ ಜುಳು ಜುಳು ನಾದದಂತೆಯೇ ಸಂತೂರ್ ವಾದ್ಯದ ನಿನಾದವೂ ಕೂಡ. ಕೇಳಲು ಬಹಳ ಇಂಪು.

ಸಂತೂರ್‌ನಲ್ಲಿ ಎಲ್ಲ ರಾಗಗನ್ನು ನುಡಿಸುವುದು ಕಷ್ಟ. ಅತ್ಯಂತ ಪ್ರಚಲಿತ ರಾಗಗಳನ್ನು ಲೀಲಾಜಾಲವಾಗಿ ನುಡಿಸಬಹುದು. ಪಂ. ಶಿವಕುಮಾರ್ ಶರ್ಮಾ, ಕಷ್ಟಕರ ರಾಗಗಳನ್ನೂ ನುಡಿಸುತ್ತಿದ್ದರು. ಪ್ರಹರ ರಾಗಗಳಿಗೆ ಆದ್ಯತೆ ನೀಡುತ್ತಿದ್ದರು. ಶಾಸ್ತ್ರೀಯ ಗಾಯನ ಬಲ್ಲವರಾಗಿದ್ದರಿಂದ ವಾದನದಲ್ಲಿ ರಾಗದ ಛಾಯೆ



ಶಿವಕುಮಾರ್ ಶರ್ಮಾ

ವಿಶಿಷ್ಟ ಛಾಪು ಮೂಡಿಸುತ್ತಿತ್ತು.

ಸಂತೂರ್ ವಾದನ ಮಾತ್ರವಲ್ಲದೆ ಬಾಲಿವುಡ್‌ನಲ್ಲೂ ಹೆಸರುವಾಸಿಯಾಗಿದ್ದರು. ಹಿಂದಿ ಸಿನಿಮಾಗಳಾದ ಚಾಂದನಿ, ಸಿಲ್‌ಸಿಲಾ, ಡರ್ ಮುಂತಾದವುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದು, ಇವೆಲ್ಲವೂ ಸೂಪರ್ ಹಿಟ್ ಸಿನಿಮಾಗಳಾಗಿದ್ದವು. ಅಲ್ಲದೆ ಬಾನ್ಸುರಿ ಮಾಂತ್ರಿಕ ಪಂ. ಹರಿಪ್ರಸಾದ್ ಚೌರಾಸಿಯ ಜೊತೆಗೂಡಿ ನೀಡಿದ 'ಸಂತೂರ್– ಬಾನ್ಸುರಿ' ಜುಗಲ್‌ಬಂದಿ ಜಗದ್ವಿಖ್ಯಾತ. ಇವರಿಬ್ಬರೂ 'ಶಿವ-ಹರಿ' ಹೆಸರಿನಲ್ಲಿ ಅನೇಕ ಹಿಂದಿ ಚಲನಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದರು. 'ಫಾಸ್ಲೆ, ವಿಜಯ್, ಲಮ್ಹೆ, ಪರಂಪರಾ, ಸಾಹಿಬಾನ್ ಚಿತ್ರಗಳು ಪ್ರಮುಖವಾದವು.

ಪ್ರಯೋಗಶೀಲ ಗುಣ

ಸಂತೂರ್ ವಾದ್ಯಕ್ಕೆ ಹೆಚ್ಚಿನ ಇತಿಹಾಸವಿಲ್ಲ. ಸುಮಾರು 60 ವರ್ಷಗಳ ಹಿಂದೆ ಪಂ. ಶಿವಕುಮಾರ್ ಶರ್ಮಾ ಅವರ ತಂದೆ ಪಂ. ಉಮಾದತ್ತ ಶರ್ಮಾ ಸಂತೂರ್ ವಾದನವನ್ನು ಮೊದಲ ಬಾರಿಗೆ ಹಿಂದೂಸ್ತಾನಿ ಸಂಗೀತಲೋಕಕ್ಕೆ ಪರಿಚಯಿಸಿದವರು. ಮೊದಲು ಈ ವಾದ್ಯಕ್ಕೆ 100 ತಂತಿ ಇತ್ತು. ಪಂ. ಶಿವಕುಮಾರ್ ಶರ್ಮಾ ಇದನ್ನು ಸ್ವಲ್ಪ ಮಾರ್ಪಾಡು ಮಾಡಿ 90 ತಂತಿಗಳನ್ನು ಮಾತ್ರ ಉಳಿಸಿಕೊಂಡು ನುಡಿಸಾಣಿಕೆಯಲ್ಲಿ ಮಾದಕತೆ ತರುತ್ತಿದ್ದರು.

ಬಹುತೇಕ ಕಛೇರಿಗಳಲ್ಲಿ 'ಪ್ರಹರ ರಾಗ'ಗಳಿಗೇ ಮೊದಲ ಆದ್ಯತೆ. ಭೈರಾಗಿ ಬೈರವ್, ತೋಡಿ, ಗುರ್ಜರಿ ತೋಡಿ, ಮಧುವಂತಿ, ಭೂಪಾಲಿ, ಹಂಸಧ್ವನಿ, ಕೀರವಾಣಿ, ಪೂರ್ಯಕಲ್ಯಾಣ್, ಭಾಗೇಶ್ರೀ, ದುರ್ಗಾ.. ಮುಂತಾದ ಜನಪ್ರಿಯ ರಾಗಗಳನ್ನೇ ನುಡಿಸುತ್ತಿದ್ದರು.

'ಸಂತೂರ್ ನುಡಿಸಾಣಿಕೆಯ ತಂತ್ರಕಾರಿ ಅಂಶಗಳಾದ ಗಮಕ, ಮೀಂಡ್, ಆಂದೋಲನ್‌ಗಳಲ್ಲಿ ಪ್ರಯೋಗ ಕೂಡ ಕೇಳುಗರಲ್ಲಿ ವಿಶಿಷ್ಟ ಅನುಭೂತಿ ಮೂಡಿಸುತ್ತಿತ್ತು. ಒಮ್ಮೆ ಮುಂಬೈಯಲ್ಲಿ (1966ರಲ್ಲಿ) ಪಂ. ಶಿವಕುಮಾರ್ ಶರ್ಮಾ ಅವರ ಸಂತೂರ್ ಕಛೇರಿಗೆ ನನ್ನ ತಂದೆ ಕರೆದುಕೊಂಡು ಹೋಗಿದ್ದರು. ಅವರ ವಾದನ ನನ್ನನ್ನು ಅಕ್ಷರಶಃ ಕಟ್ಟಿಹಾಕಿತ್ತು. ಆಗಿನ್ನು ನನಗೆ 12 ವರ್ಷ. ಹಾಡುಗಾರಿಕೆ ಕಲಿಯುತ್ತಿದ್ದ ನಾನು ಅವರ ಸಂತೂರ್ ವಾದನಕ್ಕೆ ಮನಸೋತು ಅವರಲ್ಲಿಯೇ ಶಿಷ್ಯತ್ವ ಪಡೆದೆ' ಎಂದು ನೆನಪಿಸಿಕೊಳ್ಳುತ್ತಾರೆ ದೇಶದ ಮತ್ತೊಬ್ಬ ಹೆಸರಾಂತ ಸಂತೂರ್ ವಾದಕ ಪಂ. ಸತೀಶ್ ವ್ಯಾಸ್. ದೇಶದ ಅತ್ಯುನ್ನತ ಗೌರವ ಪದ್ಮವಿಭೂಷಣ ಪುರಸ್ಕೃತರಾದ ಈ ಅಪ್ರತಿಮ ವಾದಕ ಇನ್ನು ಬರೀ ನೆನಪಷ್ಟೇ.



ರಶೀದ್ ಖಾನ್ ಸ್ಪಿನ್ ಮೋಡಿ, ಮಧ್ಯಮವೇಗಿ ಯಶ್ ದಯಾಳ್ ಬೌಲಿಂಗ್‌ಗೆ ಕುಸಿದ ಲಖನೌ

ಪ್ಲೇ ಆಫ್‌ಗೆ ಗುಜರಾತ್ ಟೈಟನ್ಸ್

ಪುಣೆ: ಸ್ಪಿನ್ ಮೋಡಿಗಾರ ರಶೀದ್ ಖಾನ್ ಮತ್ತು ಯುವ ಮಧ್ಯಮವೇಗಿ ಯಶ್ ದಯಾಳ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಗುಜರಾತ್ ಟೈಟನ್ಸ್ ತಂಡ ಜಯಭೇರಿ ಬಾರಿಸಿತು. ಇದೇ ಮೊದಲ ಬಾರಿ ಐಪಿಎಲ್‌ನಲ್ಲಿ ಆಡುತ್ತಿರುವ ಗುಜರಾತ್ ತಂಡವು ಪ್ಲೇ ಆಫ್‌ಗೆ ಲಗ್ಗೆ ಇಟ್ಟಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂಸಿಎ) ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಗುಜರಾತ್ 62 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಿಸಿತು. 12 ಪಂದ್ಯಗಳನ್ನು ಆಡಿರುವ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್‌ಗೆ ಇದು ಒಂಬತ್ತನೇ ಜಯ. ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವು ಎಂಟು ಪಂದ್ಯಗಳನ್ನು ಜಯಿಸಿದ್ದು ಅಂಕಪಟ್ಟಿಯ 2ನೇ ಸ್ಥಾನದಲ್ಲಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 144 ರನ್ ಗಳಿಸಿತು. ಗಿಲ್ (ಔಟಾಗದೆ 63; 49ಎಸೆತ, 4X7) ಅರ್ಧಶತಕ ಗಳಿಸಿ, ತಂಡವು ಅಲ್ಪಮೊತ್ತಕ್ಕೆ ಕುಸಿಯವುದನ್ನು ತಪ್ಪಿಸಿದರು. ಈ ಸಾಧಾರಣ ಗುರಿಯನ್ನು ಬೆನ್ನಟ್ಟಿದ ರಾಹುಲ್ ಬಳಗಕ್ಕೆ ರಶೀದ್ (24ಕ್ಕೆ4) ಮತ್ತು ಯಶ್ (24ಕ್ಕೆ2) ಅಡ್ಡಿಯಾದರು. ಇದರಿಂದಾಗಿ ಲಖನೌ ತಂಡವು 13.5 ಓವರ್‌ಗಳಲ್ಲಿ 82 ರನ್ ಗಳಿಸಲಷ್ಟೇ ಶಕ್ತವಾಯಿತು.

ಲಖನೌ ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಯಶ್ ದಯಾಳ್ ಎಸೆತದಲ್ಲಿ ಕ್ವಿಂಟನ್ ಡಿಕಾಕ್ ಔಟಾದರು. ಅನುಭವಿ ಬೌಲರ್ ಶಮಿ, ಲಖನೌ ನಾಯಕ ರಾಹುಲ್ ವಿಕೆಟ್ ಕಬಳಿಸಿದರು. ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದ ದೀಪಕ್ ಹೂಡಾ, ಆಲ್‌ರೌಂಡರ್ ಕೃಣಲ್ ಪಾಂಡ್ಯ, ಜೇಸನ್ ಹೋಲ್ಡರ್ ಮತ್ತು ಕೊನೆಯ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ಎರಡು ಸಿಕ್ಸರ್ ಸಿಡಿಸಿದ ಆವೇಶ್ ಖಾನ್ ವಿಕೆಟ್‌ಗಳನ್ನು ರಶೀದ್ ಗಳಿಸಿದರು. ಇದರಿಂದಾಗಿ ಲಖನೌ ತಂಡವು ಕುಸಿಯಿತು.

ಗಿಲ್ ಹೋರಾಟ: ಗುಜರಾತ್ ತಂಡದ ಆರಂಭ ಕೂಡ ಚೆನ್ನಾಗಿರಲಿಲ್ಲ. ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿದ್ದ ತಂಡಕ್ಕೆ ಯುವ ಬ್ಯಾಟರ್ ಶುಭಮನ್ ಗಿಲ್ ಆಸರೆಯಾದರು. ತಂಡವು 51 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಹಂತದಲ್ಲಿ ಗಿಲ್ ಮತ್ತು ಡೇವಿಡ್ ಮಿಲ್ಲರ್ (26; 24ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ಜೇಸನ್ ಹೋಲ್ಡರ್ 16ನೇ ಓವರ್‌ನಲ್ಲಿ ಡೇವಿಡ್ ಮಿಲ್ಲರ್ ವಿಕೆಟ್ ಗಳಿಸಿ ಜೊತೆಯಾಟವನ್ನು ಮುರಿದರು.

ಕ್ರೀಸ್‌ಗೆ ಬಂದ ರಾಹುಲ್ ತೆವಾಟಿಯಾಗೆ ಒಂದೂ ಸಿಕ್ಸರ್ ಹೊಡೆಯುವ ಅವಕಾಶವನ್ನು ಲಖನೌ ಬೌಲರ್‌ಗಳು ಕೊಡಲಿಲ್ಲ. ಇದರ ನಡುವೆಯೂ ಗಿಲ್ ಮತ್ತು ತೆವಾಟಿಯಾ ಸೇರಿ ಕೊನೆಯ ನಾಲ್ಕು ಓವರ್‌ಗಳಲ್ಲಿ ಕೇವಲ 41 ರನ್ ಗಳಿಸುವಲ್ಲಿ ಯಶಸ್ವಿಯಾದರು.



ರಶೀದ್ ಖಾನ್ ಸಂಭ್ರಮ– ಪಿಟಿಐ ಚಿತ್ರ

ಇಂದಿನ ಪಂದ್ಯ
ರಾಜಸ್ಥಾನ ರಾಯಲ್ಸ್– ಡೆಲ್ಲಿ ಕ್ಯಾಪಿಟಲ್ಸ್
ಸ್ಥಳ: ಡಿ.ವೈ.ಪಾಟೀಲ್ ಕ್ರೀಡಾಂಗಣ, ಮುಂಬೈ
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್
ರಾತ್ರಿ 7.30

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 4ಕ್ಕೆ 144 (20 ಓವರ್)
ಸಹಾ ಸಿ ಆವೇಶ್ ಬಿ ಮೊಹಸಿನ್ 5 (11ಎ, 4X1), ಶುಭಮನ್ ಔಟಾಗದೆ 63 (49ಎ, 4X7), ವೇಡ್ ಸಿ ಡಿಕಾಕ್ ಬಿ ಆವೇಶ್ 10 (7ಎ, 4X2), ಹಾರ್ದಿಕ್ ಸಿ ಡಿಕಾಕ್ ಬಿ ಆವೇಶ್ 11 (13ಎ), ಮಿಲ್ಲರ್ ಸಿ ಬದೋನಿ ಬಿ ಹೋಲ್ಡರ್ 26 (24ಎ, 4X1, 6X1), ತೆವಾಟಿಯಾ ಔಟಾಗದೆ 22 (16ಎ, 4X4)
ಇತರೆ (ಲೆಗ್‌ಬೈ 1, ವೈಡ್ 6) 7
ವಿಕೆಟ್ ಪತನ: 1-8 (ವೃದ್ಧಿಮಾನ್ ಸಹಾ, 2.4), 2-24 (ಮ್ಯಾಥ್ಯು ವೇಡ್, 4.2), 3-51 (ಹಾರ್ದಿಕ್ ಪಾಂಡ್ಯ, 9.1), 4-103 (ಡೇವಿಡ್ ಮಿಲ್ಲರ್)
ಬೌಲಿಂಗ್: ಮೊಹಸಿನ್ ಖಾನ್ 4-0-18-1, ದುಷ್ಮಂತ ಚಮೀರ 4-0-34-0, ಆವೇಶ್ ಖಾನ್ 4-0-26-2, ಕೃಣಾಲ್ ಪಾಂಡ್ಯ 4-0-24-0, ಜೇಸನ್ ಹೋಲ್ಡರ್ 4-0-41-1

ಲಖನೌ ಸೂಪರ್ ಜೈಂಟ್ಸ್ 82 (13.5 ಓವರ್)
ಡಿಕಾಕ್ ಸಿ ಸಾಯಿ ಕಿಶೋರ್ ಬಿ ಯಶ್ 11 (10ಎ, 6X1), ರಾಹುಲ್ ಸಿ ಸಹಾ ಬಿ ಶಮಿ 8 (16ಎ, 4X1), ದೀಪಕ್ ಸಿ ಶಮಿ ಬಿ ರಶೀದ್ 27 (26ಎ, 4X3), ಕರಣ್ ಸಿ ಮಿಲ್ಲರ್ ಬಿ ಯಶ್ 4 (4ಎ, 4X1), ಕೃಣಾಲ್ ಸಿ ಸಹಾ ಬಿ ರಶೀದ್ 5 (5ಎ, 4X1), ಬದೋನಿ ಸ್ಟಂಪ್ಡ್ ಸಹಾ ಬಿ ಸಾಯಿ ಕಿಶೋರ್ 8 (11ಎ, 4X1), ಸ್ಟೋಯಿನಿಸ್ ರನೌಟ್ (ಮಿಲ್ಲರ್/ಸಹಾ) 2 (2ಎ), ಹೋಲ್ಡರ್ ಎಲ್‌ಬಿಡಬ್ಲ್ಯು ಬಿ ರಶೀದ್ 1 (2ಎ) ಮೊಹಸಿನ್ ಸಿ ರಶೀದ್ ಬಿ ಸಾಯಿ ಕಿಶೋರ್ 1 (3ಎ), ದುಷ್ಮಂತ್ ಔಟಾಗದೆ 0(0ಎ), ಆವೇಶ್ ಸಿ ಸಹಾ ಬಿ ರಶೀದ್ 12 (4ಎ, 6X2)
ಇತರೆ (ವೈಡ್ 3) 3
ವಿಕೆಟ್ ಪತನ: 1-19 (ಕ್ವಿಂಟನ್ ಡಿಕಾಕ್, 3.3), 2-24 (ಕೆ.ಎಲ್. ರಾಹುಲ್, 4.5), 3-33 (ಕರಣ್ ಶರ್ಮಾ, 5.5), 4-45 (ಕೃಣಾಲ್ ಪಾಂಡ್ಯ, 7.3), 5-61 (ಆಯುಷ್ ಬದೋನಿ, 10.5), 6-65 (ಮಾರ್ಕಸ್ ಸ್ಟೋಯಿನಿಸ್, 11.2), 7-67 (ಜೇಸನ್ ಹೋಲ್ಡರ್, 11.6), 8-70 (ಮೊಹಸಿನ್ ಖಾನ್, 12.6), 9-70 (ದೀಪಕ್ ಹೂಡಾ, 13.1), 10-82 (ಆವೇಶ್ ಖಾನ್, 13.5)
ಬೌಲಿಂಗ್: ಮೊಹಮ್ಮದ್ ಶಮಿ 3-0-5-1, ಹಾರ್ದಿಕ್ ಪಾಂಡ್ಯ 1-0-8-0, ಯಶ್ ದಯಾಳ್ 2-0-24-2, ಅಲ್ಜರಿ ಜೋಸೆಫ್ 2-0-14-0, ರಶೀದ್ ಖಾನ್ 3.5-0-24-4, ಆರ್. ಸಾಯಿ ಕಿಶೋರ್ 2-0-7-2

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 62 ರನ್‌ಗಳ ಗೆಲುವು

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	618
ರಾಹುಲ್	ಲಖನೌ	459
ಡುಪ್ಲೆಸಿ	ಬೆಂಗಳೂರು	389

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	22
ಹಸರಂಗ	ಬೆಂಗಳೂರು	21
ರಬಾಡ	ಪಂಜಾಬ್	18

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	12	9	3	0	0	18	0.376
ಲಖನೌ	12	8	4	0	0	16	0.385
ರಾಜಸ್ಥಾನ	11	7	4	0	0	14	0.326
ಬೆಂಗಳೂರು	12	7	5	0	0	14	-0.115
ಡೆಲ್ಲಿ	11	5	6	0	0	10	0.150
ಹೈದರಾಬಾದ್	11	5	6	0	0	10	-0.031
ಕೋಲ್ಕತ್ತ	12	5	7	0	0	10	-0.057
ಪಂಜಾಬ್	11	5	6	0	0	10	-0.231
ಚೆನ್ನೈ	11	4	7	0	0	8	0.028
ಮುಂಬೈ	11	2	9	0	0	4	-0.894

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ತೀವ್ರ ಅನಾರೋಗ್ಯ: ಆಸ್ಪತ್ರೆಗೆ ಥೋರ್ಪ್

ಲಂಡನ್ (ಎಪಿ): ಇಂಗ್ಲೆಂಡ್ ತಂಡದ ಮಾಜಿ ಬ್ಯಾಟರ್ ಮತ್ತು ಕೋಚ್ ಗ್ರಹಾಂ ಥೋರ್ಪ್ ಅವರನ್ನು ತೀವ್ರ ಅನಾರೋಗ್ಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಂಗ್ಲೆಂಡ್‌ನ ಆಟಗಾರರ ಒಕ್ಕೂಟ ಮಂಗಳವಾರ ಈ ವಿಷಯ ತಿಳಿಸಿದೆ.

52 ವರ್ಷದ ಥೋರ್ಪ್ ಅವರು ಜನವರಿಯಲ್ಲಿ ನಡೆದ ಆ್ಯಷಸ್ ಸರಣಿಯ ಬಳಿಕ ಇಂಗ್ಲೆಂಡ್ ತಂಡದ ಸಹಾಯಕ ತರಬೇತುದಾರ ಹುದ್ದೆಯಿಂದ ನಿರ್ಗಮಿಸಿದ್ದರು. ಬಳಿಕ ಅಫ್ಗಾನಿಸ್ತಾನದ ಮುಖ್ಯ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

ಕೊಕ್ಕೊ: ಬೆಂಗಳೂರು ನಗರ, ಮಂಡ್ಯ ಪ್ರಥಮ

ಮೂಡಲಗಿ (ಬೆಳಗಾವಿ): ಬೆಂಗಳೂರು ನಗರ ಜಿಲ್ಲೆ ಹಾಗೂ ಮಂಡ್ಯ ಜಿಲ್ಲಾ ತಂಡಗಳು ನಾಗನೂರ ಮಹಾಲಿಂಗೇಶ್ವರ ಸ್ಪೋರ್ಟ್ಸ್ ಕ್ಲಬ್ ಆತಿಥ್ಯ ದಲ್ಲಿ ನಡೆದ ರಾಜ್ಯಮಟ್ಟದ 18 ವರ್ಷದ ಒಳಗಿನ ಬಾಲಕ ಹಾಗೂ ಬಾಲಕಿಯರ ಹೊನಲು ಬೆಳಕಿನ ಕೊಕ್ಕೊ ಟೂರ್ನಿಯಲ್ಲಿ ಪ್ರಶಸ್ತಿ ಗಳಿಸಿದವು.

ಬಾಲಕರ ವಿಭಾಗದಲ್ಲಿ ದಾವಣಗೆರೆ ಜಿಲ್ಲೆ 2ನೇ, ನಾಗನೂರ ಮಹಾಲಿಂಗೇಶ್ವರ ತಂಡ 3ನೇ, ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ನಗರ 2ನೇ ರಾಯಚೂರ 3ನೇ ಸ್ಥಾನ ಗಳಿಸಿದವು. ಭಾರತ ಕೊಕ್ಕೊ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಂ.ಎಸ್. ತ್ಯಾಗಿ ಪ್ರಶಸ್ತಿ ಪ್ರದಾನ ಮಾಡಿದರು.

ಇಟಾಲಿಯನ್ ಓಪನ್: ಜೊಕೊವಿಚ್ ಮುನ್ನಡೆ

ರೋಮ್ (ರಾಯಿಟರ್ಸ್): ಆರನೇ ಬಾರಿ ಇಟಾಲಿಯನ್ ಓಪನ್ ಗೆಲ್ಲುವ ಛಲದಲ್ಲಿರುವ ನೊವಾಕ್ ಜೊಕೊವಿಚ್ ಅವರು ಮಂಗಳವಾರ ಟೂರ್ನಿಯ ಮೂರನೇ ಸುತ್ತಿಗೆ ತಲುಪಿದ್ದಾರೆ.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸರ್ಬಿಯಾದ ಆಟಗಾರ 6-3, 6-2ರಿಂದ ರಷ್ಯಾದ ಅಸ್ಲಾನ್ ಕರಾತ್ಸೆವ್ ಅವರನ್ನು ಸೋಲಿಸಿದರು.

ಇದಕ್ಕೂ ಮೊದಲು ಅರ್ಜೆಂಟೀನಾದ ಡಿಗೊ ಸ್ವಾರ್ಜ್‌ಮನ್ 6-2, 3-6, 7-6(3) ರಿಂದ ಸರ್ಬಿಯಾದ ಮಿಯೊಮಿರ್ ಕೆಸ್ಮೊನೊವಿಚ್ ಅವರನ್ನು ಮಣಿಸಿದ್ದರು.

ಕ್ಯಾನ್ಸರ್: ಎವರ್ಟ್ ಕೀಮೊಥೆರಪಿ ಪೂರ್ಣ

ಲಾಸ್ ಏಂಜಲೀಸ್ (ರಾಯಿಟರ್ಸ್): ಟೆನಿಸ್ ಆಟಗಾರ್ತಿ, ಅಮೆರಿಕದ ಕ್ರಿಸ್ ಎವರ್ಟ್ ಅವರು ಅಂಡಾಶಯದ ಕ್ಯಾನ್ಸರ್‌ಗಾಗಿ ಪಡೆಯುತ್ತಿದ್ದ ಕೀಮೊಥೆರಪಿ ಚಿಕಿತ್ಸೆ ಪೂರ್ಣಗೊಳಿಸಿದ್ದಾರೆ. ಕಾಯಿಲೆಯ ಅಂತಿಮ ಮತ್ತು ಆರನೇ ಬಾರಿಯ ಚಿಕಿತ್ಸೆ ಕೊನೆಗೊಂಡಿದೆ ಎಂದು ಎವರ್ಟ್ ಸೋಮವಾರ ಹೇಳಿದ್ದಾರೆ. 18 ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ಎವರ್ಟ್, ತಮಗೆ ಕ್ಯಾನ್ಸರ್ ಇರುವುದನ್ನು ಜನವರಿಯಲ್ಲಿ ಹೇಳಿಕೊಂಡಿದ್ದರು.

ಶ್ರೀಲಂಕಾ ಹಿಂಸಾಚಾರ: ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಮಾಡುವವರ ಮೇಲೆ ಗುಂಡು ಹಾರಿಸಲು ಆದೇಶ

ನೌಕಾನೆಲೆಯಲ್ಲಿ ಆಶ್ರಯ ಪಡೆದ ಮಹಿಂದಾ ಕುಟುಂಬ

ಕೊಲಂಬೊ (ಪಿಟಿಐ/ಎಪಿ/ರಾಯಿಟರ್ಸ್): ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಹಾಗೂ ಕುಟುಂಬದ ಕೆಲ ಸದಸ್ಯರು ಟ್ರಿಂಕಾಮಲೈನಲ್ಲಿರುವ ನೌಕಾನೆಲೆಯಲ್ಲಿ ಆಶ್ರಯ ಪಡೆದಿರುವ ಸುದ್ದಿ ಹಬ್ಬುತ್ತಿದ್ದಂತೆಯೇ, ನೌಕಾನೆಲೆಯ ಮುಂದೆ ಮಂಗಳವಾರ ಭಾರಿ ಪ್ರತಿಭಟನೆ ನಡೆಯಿತು.

ಸೋಮವಾರ ಮಹಿಂದಾ ರಾಜಪಕ್ಸ ಬೆಂಬಲಿಗರು ಹಾಗೂ ಪ್ರತಿಭಟನಕಾರರ ನಡುವೆ ಘರ್ಷಣೆ ಹಿಂಸಾಚಾರಕ್ಕೆ ತಿರುಗಿತ್ತು. ಇದರ ಬೆನ್ನಲ್ಲೇ, ರಾಜಪಕ್ಸ ಹಾಗೂ ಕುಟುಂಬದ ಸದಸ್ಯರು ಕೊಲೊಂಬೊದಲ್ಲಿನ ಅಧಿಕೃತ ನಿವಾಸವನ್ನು ತೊರೆದು, ನೌಕಾನೆಲೆಯಲ್ಲಿ ಆಶ್ರಯ ಪಡೆದಿದ್ದಾರೆ.

ಈ ನಡುವೆ, ಎಎಫ್‌ಪಿ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿರುವ ರಾಜಪಕ್ಸ ಅವರ ಮಗ ನಮಲ್, 'ತಮ್ಮ ತಂದೆ ಹಾಗೂ ಕುಟುಂಬದ ಯಾವ ಸದಸ್ಯರೂ ದೇಶ ತೊರೆಯುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ರಾಜಪಕ್ಸ ಕುಟುಂಬ ದೇಶ ತೊರೆಯದಂತೆ ತಡೆಯುವ ಸಲುವಾಗಿ ಬಂಡಾರನಾಯಿಕೆ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಪ್ರತಿಭಟನಕಾರರು ಚೆಕ್‌ಪೋಸ್ಟ್ ಸ್ಥಾಪಿಸಿದ್ದಾರೆ.

ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಮಾಡುವ ಅಥವಾ ಜನರಿಗೆ ಬೆದರಿಕೆವೊಡ್ಡುವ ಯಾವುದೇ ವ್ಯಕ್ತಿಯತ್ತ ಗುಂಡು ಹಾರಿಸುವಂತೆ ಸಶಸ್ತ್ರಪಡೆಗಳಿಗೆ ಆದೇಶಿಸಲಾಗಿದೆ' ಎಂದು ರಕ್ಷಣಾ ಸಚಿವಾಲಯದ ವಕ್ತಾರ ನಳಿನ್ ಹೇರತ್ ತಿಳಿಸಿದ್ದಾರೆ. ದೇಶದಾದ್ಯಂತ ಕರ್ಫ್ಯೂ ಹೇರಲಾಗಿದೆ.

ಮಾಜಿ ಪ್ರಧಾನಿ ರಾಜಪಕ್ಸ ಬೆಂಬಲಿಗರು ಹಾಗೂ ಪ್ರತಿಭಟನಕಾರರ ನಡುವಿನ ಸಂಘರ್ಷದಿಂದಾಗಿ ಮೃತಪಟ್ಟವರ ಸಂಖ್ಯೆ ಮಂಗಳವಾರ 8ಕ್ಕೆ ಏರಿದೆ.

ಪ್ರತಿಭಟನೆ ನಡುವೆಯೇ ರಾಜಪಕ್ಸ ಅವರು ಮಂಗಳವಾರ ನಸುಕಿನಲ್ಲಿ ತಮ್ಮ ನಿವಾಸ ತೊರೆದು, ಟ್ರಿಂಕಾಮಲೈನಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಡೈಲಿ ಮಿರರ್ ವರದಿ ಮಾಡಿದೆ.

ಆರ್ಥಿಕ ಬಿಕ್ಕಟ್ಟಿಗೆ ನಲುಗಿರುವ ದ್ವೀಪರಾಷ್ಟ್ರದಲ್ಲಿ ಪ್ರತಿಭಟನೆ ತೀವ್ರಸ್ವರೂಪ ಪಡೆಯುತ್ತಿದೆ. ಪ್ರತಿಭಟನಕಾರರು ಹಾಗೂ ಮಹಿಂದಾ ರಾಜಪಕ್ಸ ಬೆಂಬಲಿಗರ ನಡುವೆ ಸೋಮವಾರ ನಡೆದ ಘರ್ಷಣೆಯಲ್ಲಿ 200ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಇದರ ಬೆನ್ನಲ್ಲೇ, ರಾಜಪಕ್ಸ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.


ಕೊಲಂಬೊದಲ್ಲಿ ಸರ್ಕಾರದ ಬೆಂಬಲಿಗರು ಹಾಗೂ ಪ್ರತಿಭಟನಕಾರರ ನಡುವೆ ಘರ್ಷಣೆ ನಡೆದಿದ್ದ ಸ್ಥಳದಲ್ಲಿ ಪೊಲೀಸರು ಮಂಗಳವಾರ ಪರಿಶೀಲನೆ ನಡೆಸಿದರು —ಎಎಫ್‌ಪಿ ಚಿತ್ರ

ಪ್ರಮುಖ ಬೆಳವಣಿಗೆಗಳು
- ಸರ್ಕಾರ ರಚನೆ: ಎಲ್ಲ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಅಧ್ಯಕ್ಷ ಗೊಟಬಯ ರಾಜಪಕ್ಸ ಸಭೆ
- ಹಿಂಸಾಚಾರ ಕುರಿತು ತನಿಖೆ: ಐಜಿಪಿ ಅವರಿಗೆ ಅಟಾರ್ನಿ ಜನರಲ್ ಸಂಜಯ ರಾಜರತ್ನಂ ಸೂಚನೆ

ಅಧಿವೇಶನಕ್ಕೆ ಸ್ಪೀಕರ್ ಮನವಿ
ನಿಲ್ಲದ ಪ್ರತಿಭಟನೆಗಳ, ವ್ಯಾಪಕ ಹಿಂಸಾಚಾರ ಸೇರಿದಂತೆ ದೇಶದಲ್ಲಿನ ಪರಿಸ್ಥಿತಿ ಕುರಿತು ಚರ್ಚಿಸಲು ಕೂಡಲೇ ಸಂಸತ್ ಅಧಿವೇಶನ ಕರೆಯುವಂತೆ ಸ್ಪೀಕರ್ ಮಹಿಂದಾ ಯಪಾ ಅಬೇವರ್ದನೆ ಅವರು ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಮನವಿ ಮಾಡಿದ್ದಾರೆ.
ಭಾರತಕ್ಕೆ ಪಲಾಯನ?: ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಮತ್ತು ಅವರ ಕುಟುಂಬದ ಸದಸ್ಯರು ಭಾರತಕ್ಕೆ ಪಲಾಯನ ಮಾಡಿದ್ದಾರೆ ಎಂಬ ವದಂತಿಗಳು ಸ್ಥಳೀಯ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ. ಆದರೆ ಶ್ರೀಲಂಕಾದಲ್ಲಿರುವ ಭಾರತೀಯ ಹೈಕಮಿಷನ್ ಇದನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದು, ಸುಳ್ಳು ಸುದ್ದಿ ಎಂದು ತಿಳಿಸಿದೆ.

ಮಹಿಂದಾ ಬಂಧನಕ್ಕೆ ಹೆಚ್ಚಿದ ಒತ್ತಡ
ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ವಿರುದ್ಧ ಹಿಂಸೆ ನಡೆಸಲು ಪ್ರಚೋದನೆ ನೀಡಿದ ಆರೋಪವನ್ನು ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಎದುರಿಸುತ್ತಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

ಮಹಿಂದಾ ಹಾಗೂ ಅವರ ಸಂಪುಟದಲ್ಲಿ ಸಚಿವರಾಗಿದ್ದವರನ್ನು ಬಂಧಿಸುವಂತೆ ಒತ್ತಾಯಿಸಿ ವಕೀಲರ ಗುಂಪೊಂದು ಪೊಲೀಸ್ ಮುಖ್ಯಸ್ಥರಿಗೆ ದೂರು ನೀಡಿದೆ.

ದಾನಿಶ್ ಸಿದ್ದಿಕಿ ಸೇರಿ ನಾಲ್ವರಿಗೆ ಪುಲಿಟ್ಜರ್ ಪ್ರಶಸ್ತಿ

ನ್ಯೂಯಾರ್ಕ್ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಹತ್ಯೆಗೀಡಾಗಿದ್ದ ದಾನಿಶ್ ಸಿದ್ದಿಕಿ ಸೇರಿದಂತೆ ನಾಲ್ವರು ಭಾರತೀಯ ಛಾಯಾಗ್ರಾಹಕರು 2022ನೇ ಸಾಲಿನ 'ಪುಲಿಟ್ಜರ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. 'ಫೀಚರ್ ಫೋಟೊಗ್ರಫಿ' ವಿಭಾಗದಲ್ಲಿ ಇವರಿಗೆ ಪ್ರಶಸ್ತಿ ದೊರೆತಿದೆ.


ಅದ್ನಾನ್ ಅಬಿದಿ, ಸನಾ ಇರ್ಷಾದ್ ಮಟ್ಟೂ ಹಾಗೂ ಅಮಿತ್ ದವೆ ಅವರು 'ಪುಲಿಟ್ಜರ್' ಪ್ರಶಸ್ತಿಗೆ ಭಾಜನರಾದ ಇತರ ಭಾರತೀಯ ಛಾಯಾಗ್ರಾಹಕರು.


'ಭಾರತದಲ್ಲಿ ಕೋವಿಡ್‌ಗೆ ಸಂಬಂಧಿಸಿ ಇವರು ತೆಗೆದ ಚಿತ್ರಗಳು ಅನ್ಯೋನ್ಯತೆ ಮತ್ತು ವಿನಾಶವನ್ನು ಸಮತೋಲನದಿಂದ ಬಿಂಬಿಸಿವೆ' ಎಂದು 'ಪುಲಿಟ್ಜರ್' ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಈ ನಾಲ್ವರು ಛಾಯಾಗ್ರಾಹಕರು ತೆಗೆದ ಛಾಯಾಚಿತ್ರಗಳನ್ನು ಬ್ರೇಕಿಂಗ್ ನ್ಯೂಸ್ ಫೋಟೊಗ್ರಫಿ ವಿಭಾಗದಿಂದ 'ಫೀಚರ್ ಫೋಟೊಗ್ರಫಿ'ಗೆ ತೀರ್ಪುಗಾರರು ವರ್ಗಾಯಿಸಿದ್ದರು.

ಅಫ್ಗಾನಿಸ್ತಾನದ ಸೇನೆ ಮತ್ತು ತಾಲಿಬಾನಿಗಳ ನಡುವೆ ಸಂಘರ್ಷ ನಡೆಯುತ್ತಿರುವ ಪ್ರದೇಶಗಳ ಸ್ಥಿತಿಗತಿ ಕುರಿತು ವರದಿ ಮಾಡಲು ತೆರಳಿದ್ದ ಸಿದ್ದಿಕಿ 2021ರ ಜುಲೈಯಲ್ಲಿ ಹತ್ಯೆಯಾಗಿದ್ದರು. ಇವರಿಗೆ 'ಫೀಚರ್ ಫೋಟೊಗ್ರಫಿ' ವಿಭಾಗದಲ್ಲಿ 2018ರಲ್ಲಿಯೂ 'ಪುಲಿಟ್ಜರ್' ದೊರೆತಿತ್ತು.


ದಾನಿಶ್ ಸಿದ್ದಿಕಿ


ಸನಾ ಇರ್ಷಾದ್ ಮಟ್ಟೂ


ಅದ್ನಾನ್ ಅಬಿದಿ


ಅಮಿತ್ ದವೆ

'ಉಕ್ರೇನ್ ಮೇಲಿನ ಸೈಬರ್ ದಾಳಿಯ ಹಿಂದೆ ರಷ್ಯಾ'

ಲಂಡನ್ (ರಾಯಿಟರ್ಸ್): ಉಕ್ರೇನ್ ಯುದ್ಧದ ಆರಂಭದಲ್ಲಿ ಸಾವಿರಾರು ಜಾಲತಾಣಗಳನ್ನು ಬಂದ್ ಮಾಡಲು ನಡೆಸಿದ ಸ್ಯಾಟಲೈಟ್ ಇಂಟರ್ನೆಟ್ ಜಾಲದ ಮೇಲಿನ ದೊಡ್ಡ ಸೈಬರ್ ದಾಳಿಯ ಹಿಂದೆ ರಷ್ಯಾ ಕೈವಾಡ ಇದೆ ಎಂದು ಐರೋಪ್ಯ ಒಕ್ಕೂಟವು ಸೋಮವಾರ ತಿಳಿಸಿದೆ.

ರಷ್ಯಾ ಸೇನೆಯು ಉಕ್ರೇನ್ ಮೇಲೆ ಆಕ್ರಮಣ ನಡೆಸಿದಂತೆಯೇ ಫೆಬ್ರುವರಿ ಅಂತ್ಯದಲ್ಲಿ ವಿಯಾಸಾಟ್‌ನ ಕೆಎ-ಎಸ್‌ಎಟಿ ಜಾಲದ ಮೇಲೆ ಸೈಬರ್ ದಾಳಿ ನಡೆಸಿತು ಎಂದು ಅದು ಹೇಳಿದೆ.

'ಸಾವಿನ ಸಂಖ್ಯೆ ಹೆಚ್ಚು': ದಾಳಿಯಲ್ಲಿ ಮೃತಪಟ್ಟವರ ಅಧಿಕೃತ ಸಂಖ್ಯೆ 3,381 ಆಗಿದ್ದು, ವಾಸ್ತವವಾಗಿ ಮೃತರ ಪ್ರಮಾಣ ಸಾವಿರಾರು ಸಂಖ್ಯೆಯಲ್ಲಿ ಹೆಚ್ಚಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

ಫುಟ್‌ಬಾಲ್: ಸಂತೋಷ್ ಮಿಂಚು

ಬೆಂಗಳೂರು: ಸಂತೋಷ್ ಕುಮಾರ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಎಚ್‌ಎಎಲ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಎಚ್‌ಎಎಲ್ 2–0ಯಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು. ಸಂತೋಷ್ ಕುಮಾರ್ 5 ಮತ್ತು 34ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಜಿಒಆರ್‌ಸಿ ಎಫ್‌ಸಿ 2–0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ತಂಡವನ್ನು ಮಣಿಸಿತು. ಜೋನ್ಸ್ ಆ್ಯಂಟನಿ ಬೆಥ್‌ಸಲೇಲ್ (24ನೇ ನಿ.) ಮತ್ತು ಪ್ರದೀಪ್‌ಕುಮಾರ್ (36ನೇ ನಿ.) ವಿಜೇತ ತಂಡದ ಪರ ಗೋಲು ಹೊಡೆದರು.

ಇನ್ನೊಂದು ಹಣಾಹಣಿಯಲ್ಲಿ ಪರಿಕ್ರಮ ಎಫ್‌ಸಿ 1–0ರಿಂದ ಬೆಂಗಳೂರು ಗನ್ನರ್ಸ್ ಎದುರು ಜಯಿಸಿತು.

ಬುಧವಾರ ನಡೆಯಲಿರುವ ಸಿ ಡಿವಿಷನ್ ಪಂದ್ಯದಲ್ಲಿ ರೆಡ್ಸ್ ಯುನೈಟೆಡ್ ಎಫ್‌ಸಿ– ಯಂಗ್ ಜೆಮ್ಸ್, ಎ ಡಿವಿಷನ್ ಪಂದ್ಯಗಳಲ್ಲಿ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ– ರೆಬೆಲ್ಸ್ ಎಫ್‌ಸಿ, ಫ್ರೆಂಡ್ಸ್ ಯುನೈಟೆಡ್– ಬ್ಲಿಟ್ಜ್ ಎಫ್‌ಸಿ ಮುಖಾಮುಖಿಯಾಗಲಿವೆ.

ಅಂತರರಾಜ್ಯ ಆಹ್ವಾನಿತ ಹಾಕಿ ಟೂರ್ನಿ: ಆರ್ಟಿಲರಿ ರನ್ನರ್ಸ್ ಅಪ್

ಹನುಮಾನ್ ಬ್ಲೆಸಿಂಗ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಿಖರ ಪಾಸ್‌ಗಳು ಹಾಗೂ ತಂತ್ರಗಾರಿಕೆಯ ಆಟಕ್ಕೆ ಒತ್ತುಕೊಟ್ಟ ಗದುಗಿನ ಹನುಮಾನ್ ಬ್ಲೆಸಿಂಗ್ ತಂಡ, ಯಂಗ್ ಸ್ಟಾರ್ಸ್ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿದ್ದ ಅಂತರ ರಾಜ್ಯಗಳ ಆಹ್ವಾನಿತ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಇಲ್ಲಿನ ಸೆಟ್ಲಮೆಂಟ್‌ನ ಮಣ್ಣಿನ ಅಂಗಳದಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ ಬ್ಲೆಸಿಂಗ್ ತಂಡ 2–1 ಗೋಲುಗಳಿಂದ ಹೈದರಾಬಾದ್‌ನ ಆರ್ಟಿಲರಿ ಸೆಂಟರ್ ಎದುರು ಗೆದ್ದು ಟ್ರೋಫಿ ಹಾಗೂ ₹30 ಸಾವಿರ ಬಹುಮಾನ ಪಡೆದುಕೊಂಡಿತು. ರನ್ನರ್ಸ್ ಅಪ್ ತಂಡಕ್ಕೆ ಟ್ರೋಫಿ ಹಾಗೂ ₹20 ಸಾವಿರ ಲಭಿಸಿತು.

ಉಭಯ ತಂಡಗಳು ಗೋಲು ಗಳಿಸಲು ಮೊದಲ ಕ್ವಾರ್ಟರ್‌ನಲ್ಲಿ ಉತ್ತಮ ಪ್ರಯತ್ನ ಮಾಡಿದರೂ ಫಲ ಲಭಿಸಲಿಲ್ಲ. ಎರಡನೇ ಕ್ವಾರ್ಟರ್‌ನ ಮೊದಲ ನಿಮಿಷದಲ್ಲಿಯೇ ಆರ್ಟಿಲರಿ ಸೆಂಟರ್ ತಂಡದ ಸಚಿನ್ ರಾಠೋಡ್ (16ನೇ ನಿಮಿಷ) ಪೆನಾಲ್ಟಿ ಸ್ಟ್ರೋಕ್ ಮೂಲಕ ಗೋಲು ಗಳಿಸಿದರು. ಗದಗ ತಂಡದ ಚಿರಂತ್ (23ನೇ ನಿಮಿಷ) ಚೆಂಡನ್ನು ಗುರಿ ಸೇರಿಸಿ ಸಮಬಲ ಸಾಧಿಸಿದರು.

ಗದಗ ತಂಡದ ಆಟಗಾರರು ಎರಡು ಮತ್ತು ಮೂರನೇ ಕ್ವಾರ್ಟರ್‌ಗಳಲ್ಲಿ ಚೆಂಡಿನ ಮೇಲೆ ಹೆಚ್ಚು ಹೊತ್ತು ನಿಯಂತ್ರಣ ಸಾಧಿಸಿ ಗೋಲು ಗಳಿಸುವ ಪ್ರಯತ್ನ ಮಾಡಿದರು. ಇದಕ್ಕೆ ಎದುರಾಳಿ ತಂಡದ ರಕ್ಷಣಾ ವಿಭಾಗದ ಆಟಗಾರರು ಅವಕಾಶ ಕೊಡಲಿಲ್ಲ. ಆರ್ಟಿಲರಿ ಸೆಂಟರ್ ತಂಡ ತನಗೆ ಸಿಕ್ಕ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ವಿಫಲವಾಯಿತು. ಹೀಗಾಗಿ ಕೊನೆಯ ಕ್ವಾರ್ಟರ್ ಅವಧಿಯ ಆಟ ಕ್ಷಣಕ್ಷಣಕ್ಕೂ ಕುತೂಹಲ ಮೂಡಿಸಿತು. ಈ ಅವಧಿಯಲ್ಲಿ ಗದಗ ತಂಡದ ಹರೀಶ್ ಮುತಗಾರ ಸಹ ಆಟಗಾರರು ನೀಡಿದ ಪಾಸ್‌ಗಳ ನೆರವಿನಿಂದ 50ನೇ ನಿಮಿಷದಲ್ಲಿ ಗೋಲು ದಾಖಲಿಸಿ ಮುನ್ನಡೆ ತಂದುಕೊಟ್ಟರು. ಕೊನೆಯ ಹತ್ತು ನಿಮಿಷ 'ಟೈಮ್ ಪಾಸ್' ತಂತ್ರ ಮಾಡಿ ಗೆಲುವಿನ ಖುಷಿ ತನ್ನದಾಗಿಸಿಕೊಂಡಿತು.


ಅಂತರ ರಾಜ್ಯಗಳ ಆಹ್ವಾನಿತ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆದ ಗದುಗಿನ ಹನುಮಾನ್ ಬ್ಲೆಸಿಂಗ್ ತಂಡ. ನಿಂತವರು; ಎಡದಿಂದ: ಲೋಕೇಶ, ಲಖನ್, ಚಿರಂತ್, ಸಾತ್ವಿಕ್, ಸಂತೋಷ ಗೋಕಾಕ (ತಂಡದ ವ್ಯವಸ್ಥಾಪಕ), ನವೀನಕುಮಾರ (ತರಬೇತುದಾರ), ಎ.ಬಿ. ಸುಬ್ಬಯ್ಯ (ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ), ಹರೀಶ್ ಮುತಗಾರ, ಮಹೇಶ (ಸಹಾಯಕ ತರಬೇತುದಾರ), ಚೇತನ್, ನಿಕೇತ್, ವಸಂತ, ನಿಲೇಶ. ಕುಳಿತವರು: ಪ್ರಸನ್ನ, ಪ್ರವೀಣ ಕೊರಸ್, ನಾಗೇಶ, ಪ್ರವೀಣ ಸಿ., ಕೃಷ್ಣ ಹಾಗೂ ರವಿಕಿರಣ –ಪ್ರಜಾವಾಣಿ ಚಿತ್ರ

> **ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಥಳೀಯ ಆಡಳಿತವು ಜಾಗ ಒದಗಿಸಿದರೆ ಸರ್ಕಾರದಿಂದ ಹಾಕಿ ಟರ್ಫ್ ನಿರ್ಮಿಸಲು ಹಾಕಿ ಕರ್ನಾಟಕ ಸಂಸ್ಥೆಯು ನೆರವಾಗಲಿದೆ.**
>
> **ಎ.ಬಿ. ಸುಬ್ಬಯ್ಯ,**
> ಪ್ರಧಾನ ಕಾರ್ಯದರ್ಶಿ, ಹಾಕಿ ಕರ್ನಾಟಕ

ಫೆಡರೇಷನ್ ಕಪ್ ಚಿನ್ನ ವಿಜೇತ ಅಥ್ಲೀಟ್ ಅನುಮಾನಾಸ್ಪದ 'ಓಟ'

ಐಶ್ವರ್ಯಾ ಪತ್ತೆಗಾಗಿ ನಾಡಾ ಓಡಾಟ!

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಪರೀಕ್ಷೆಯಿಂದ ತಪ್ಪಿಸಿಕೊಂಡು ಕಣ್ಮರೆಯಾಗಿರುವ ಮಹಾರಾಷ್ಟ್ರದ ಅಥ್ಲೀಟ್ ಐಶ್ವರ್ಯಾ ಮಿಶ್ರಾ ಅವರನ್ನು ಈಗ ಉದ್ದೀಪನ ಮದ್ದು ತಡೆ ಘಟಕದ ಅಧಿಕಾರಿಗಳು ಹುಡುಕಾಡುತ್ತಿದ್ದಾರೆ.

ಹೋದ ತಿಂಗಳು ಕೊಯಿಕ್ಕೋಡ್‌ನಲ್ಲಿ ನಡೆದಿದ್ದ ಫೆಡರೇಷನ್ ಕಪ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಐಶ್ವರ್ಯಾ 400 ಮೀಟರ್ಸ್ ಓಟದಲ್ಲಿ 51.18 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದಿದ್ದರು. ಆದರೆ ಅವರು ಉದ್ದೀಪನ ಮದ್ದು ಪರೀಕ್ಷೆಗಾಗಿ ಮಾದರಿಯನ್ನು ನೀಡಿರಲಿಲ್ಲ. ಅವರಿಂದ ಮಾದರಿ ಸಂಗ್ರಹಿಸಲು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ) ಮತ್ತು ವಿಶ್ವ ಅಥ್ಲೆಟಿಕ್ಸ್ ನೇಮಕ ಮಾಡಿರುವ ಅಥ್ಲೆಟಿಕ್ಸ್ ಸಮನ್ವಯ ಘಟಕ (ಎಐಯು)ದ ಪರೀಕ್ಷಕರು ಐಶ್ವರ್ಯಾ ಅವರ ಶೋಧದಲ್ಲಿ ತೊಡಗಿದ್ದಾರೆ.

ಮಧ್ಯಮ ಅಂತರದ ಓಟದಲ್ಲಿ ಅತಿ ವೇಗದ ದಾಖಲೆ ಹೊಂದಿರುವ ದೇಶದ ಮೂರನೇ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಐಶ್ವರ್ಯಾ ಪಾತ್ರರಾಗಿದ್ದಾರೆ. ಹಿಮಾದಾಸ್ (50.79ಸೆ) ಮತ್ತು ಮಂಜಿತ್ ಕೌರ್ (51.05ಸೆ) ಅವರ ನಂತರದ ಸ್ಥಾನವನ್ನು ಐಶ್ವರ್ಯಾ ಪಡೆದಿದ್ದಾರೆ. ಫೆಡರೇಷನ್ ಕಪ್‌ನಲ್ಲಿ ಅವರ ಸಾಧನೆಯನ್ನು ಪರಿಗಣಿಸಿರುವ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಟರ್ಕಿಯಲ್ಲಿ ನಡೆಯುವ ವಿಶೇಷ ತರಬೇತಿ ಶಿಬಿರಕ್ಕೆ ಆಯ್ಕೆ ಮಾಡಿದೆ. ಕಾಮನ್‌ವೆಲ್ತ್ ಕೂಟದ ಸಿದ್ಧತೆಗಾಗಿ ಅಲ್ಲಿ ತರಬೇತಿ ನಡೆಯಲಿದೆ.

'ಐಶ್ವರ್ಯಾ ಅವರು ಬೇಕೆಂತಲೇ ಉದ್ದೀಪನ ಮದ್ದು ಪರೀಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ನಾಡಾ ಮತ್ತು ಎಎಫ್‌ಐನಿಂದ ಅವರನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತಿಲ್ಲ. ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ ನಂತರ ಅವರು ಕಣ್ಮರೆಯಾಗಿದ್ದಾರೆ' ಎಂದು ರಾಷ್ಟ್ರೀಯ ಶಿಬಿರದ ಮೂಲಗಳು ತಿಳಿಸಿವೆ.

ಐಶ್ವರ್ಯಾ ಅವರು ಎಎಫ್‌ಐನಲ್ಲಿ ನೋಂದಾಯಿಸಿರುವ ಫೋನ್ ಸಂಖ್ಯೆಯಿಂದ 'ರಾಂಗ್ ನಂಬರ್' ಪ್ರತಿಕ್ರಿಯೆಗಳು ಬರುತ್ತಿವೆ. ಎಎಫ್‌ಐನ ಮಹಾರಾಷ್ಟ್ರ ಘಟಕದ ಅಧಿಕಾರಿಗಳು ಅವರನ್ನು ಪತ್ತೆ ಮಾಡಲು ಪ್ರಯತ್ನಿಸುತ್ತಿದ್ದಾರೆ.

2020ರಲ್ಲಿ ರಾಷ್ಟ್ರೀಯ ಶಿಬಿರಕ್ಕೂ ಅವರು ಅರ್ಹತೆ ಪಡೆದಿರಲಿಲ್ಲ. 2021ರ ಅಂತರರಾಜ್ಯ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದರು. ಆದರೆ ಒಂದೇ ವರ್ಷದಲ್ಲಿ ಅವರ ಸಾಮರ್ಥ್ಯವು ದೊಡ್ಡಮಟ್ಟದಲ್ಲಿ ವೃದ್ಧಿಯಾಗಿರುವುದು ಬಹಳಷ್ಟು ಜನರ ಹುಬ್ಬೇರಿಸಿದೆ.

ವಿಶ್ವ 10ಕೆ: ₹ 1.50 ಕೋಟಿ ನಿಧಿ ಸಂಗ್ರಹ

ಬೆಂಗಳೂರು: ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ (ಟಿಸಿಎಸ್) ಬೆಂಗಳೂರು ವಿಶ್ವ 10ಕೆ ಮೂರು ವರ್ಷಗಳ ಬಳಿಕ ನಡೆಯಲಿದ್ದು, ಸ್ಪರ್ಧೆಯ ಅಂಗವಾಗಿ ಇಂಡಿಯಾ ಕೇರ್ ಫೌಂಡೇಷನ್ ನೇತೃತ್ವದಲ್ಲಿ ಮಾನವೀಯ ಕಾರ್ಯಗಳಿಗಾಗಿ ₹ 1.50 ಕೋಟಿ ನಿಧಿ ಸಂಗ್ರಹಿಸಲಾಗಿದೆ.

ಸೋಮವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ಪರ್ಧೆಯ ಪ್ರಾಯೋಜಕರು ಈ ಕುರಿತು ಮಾಹಿತಿ ನೀಡಿದರು.

ಇದೇ 15ರಂದು ಸ್ಪರ್ಧೆ ಬೆಂಗಳೂರಿನಲ್ಲಿ ನಡೆಯಲಿದೆ. ಐದು ವಾರಗಳ ಅವಧಿಯಲ್ಲಿ ₹ 1.50 ಕೋಟಿ ನಿಧಿ ಸಂಗ್ರಹಿಸಲಾಗಿದೆ. ಮಕ್ಕಳು, ಮಹಿಳೆಯರು, ತೃತೀಯ ಲಿಂಗಿಗಳು ಮತ್ತು ಅಂಗವಿಕಲರ ಕಲ್ಯಾಣಕ್ಕೆ ಈ ಹಣವನ್ನು ವಿನಿಯೋಜಿಸಲಾಗುತ್ತದೆ.

ಸೆಮಿಗೆ ದೀಕ್ಷಾ ಡಾಗರ್

ಕ್ಯಾಕ್ಸಿಯಸ್ ಡು ಸುಲ್, ಬ್ರೆಜಿಲ್ (ಪಿಟಿಐ): ಭಾರತದ ದೀಕ್ಷಾ ಡಾಗರ್ ಇಲ್ಲಿ ನಡೆಯುತ್ತಿರುವ ಡೆಫ್ಲಿಂಪಿಕ್ಸ್‌ನ ಮಹಿಳೆಯರ ಗಾಲ್ಫ್ ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು. 2017ರಲ್ಲಿ ಕಂಚಿನ ಪದಕವಿಜೇತ ಆಟಗಾರ್ತಿ ನಾರ್ವೆಯ ಆ್ಯಂಡ್ರಿಯಾ ಹಾವೆಸ್ಟೀನ್ ಹೆಲ್ಗ್ರರ್ಡ್ ಅವರನ್ನು ನಾಲ್ಕರಘಟ್ಟದಲ್ಲಿ ದೀಕ್ಷಾ ಎದುರಿಸುವರು.


ಪಿ.ವಿ.ಸಿಂಧು ಆಟದ ವೈಖರಿ– ಪಿಟಿಐ ಚಿತ್ರ

ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿ

ಎಂಟರಘಟ್ಟಕ್ಕೆ ಭಾರತ

ಬ್ಯಾಂಕಾಕ್ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ನಾಯಕತ್ವದ ಭಾರತ ಮಹಿಳಾ ತಂಡವು ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಮೆರಿಕ ತಂಡವನ್ನು ಮಣಿಸಿ ಕ್ವಾರ್ಟರ್‌ಫೈನಲ್ ತಲುಪಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಡಿ ಗುಂಪಿನ ಪಂದ್ಯದಲ್ಲಿ ಮಂಗಳವಾರ ಭಾರತ 4–1ರಿಂದ ಎದುರಾಳಿ ವಿರುದ್ಧ ಜಯಿಸಿತು. ಇದರೊಂದಿಗೆ ಭಾರತದ ಆಟಗಾರ್ತಿಯರು, ಗುಂಪಿನ ಅಗ್ರ ಎರಡು ತಂಡಗಳಲ್ಲಿ ಸ್ಥಾನ ಖಚಿತಪಡಿಸಿದರು.

ಅಮೆರಿಕದ ವಿರುದ್ಧ ಮೊದಲ ಸಿಂಗಲ್ಸ್ ಹಣಾಹಣಿಯಲ್ಲಿ ಸಿಂಧು 21–10, 21–11ರಿಂದ ಜೆನ್ನಿ ಗಯ್ ಅವರನ್ನು ಪರಾಭವಗೊಳಿಸಿದರು.

ಡಬಲ್ಸ್ ವಿಭಾಗದಲ್ಲಿ ತನಿಶಾ ಕ್ರಾಸ್ತೊ–ತ್ರೀಶಾ ಜೋಲಿ 21–19, 21–10ರಿಂದ ಫ್ರಾನ್ಸೆಸ್ಕಾ ಕಾರ್ಬೆಟ್ ಮತ್ತು ಅಲಿಸನ್ ಲೀ ಅವರನ್ನು ಸೋಲಿಸಿದರು.

ಎರಡನೇ ಸಿಂಗಲ್ಸ್ ಪಂದ್ಯದಲ್ಲಿ ಆಕರ್ಷಿ ಕಶ್ಯಪ್ 21–18, 21–11ರಿಂದ ಈಸ್ತರ್ ಶಿ ಎದುರು ಜಯ ಸಾಧಿಸಿದರು. ಮತ್ತೊಂದು ಡಬಲ್ಸ್ ಪಂದ್ಯದಲ್ಲಿ ತೀವ್ರ ಪೈಪೋಟಿಯ ಮಧ್ಯೆಯೂ ಸಿಮ್ರಾನ್ ಸಿಂಘಿ– ರಿತಿಕಾ ಥಕ್ಕರ್ ಜೋಡಿಯು 12–21, 21–17, 13–21ರಿಂದ ಲಾರೆನ್ ಲ್ಯಾಮ್ ಮತ್ತು ಕೊಡಿ ಥಾಂಗ್ ಲೀ ಎದುರು ಸೋತರು. ಕೊನೆಯ ಸಿಂಗಲ್ಸ್ ಸೆಣಸಾಟದಲ್ಲಿ ಅಸ್ಮಿತಾ ಚಲಿಹಾ 21–18, 21–13ರಿಂದ ನತಾಲಿ ಚಿ ಅವರನ್ನು ಮಣಿಸಿ ಭಾರತದ ಸಂಭ್ರಮ ಹೆಚ್ಚಿಸಿದರು.

ಬೆಂಗಳೂರು ಲಯನ್ಸ್‌ನಲ್ಲಿ ಸಿಂಧು ಪಾಲುದಾರಿಕೆ

ಬೆಂಗಳೂರು: ಒಲಿಂಪಿಯನ್ ಪಿ.ವಿ. ಸಿಂಧು ಬೆಂಗಳೂರು ಲಯನ್ಸ್ ಫ್ರಾಂಚೈಸಿಯಲ್ಲಿ ಪಾಲುದಾರಿಕೆ ಪಡೆದು ಸಹಮಾಲೀಕರಾಗಿದ್ದಾರೆ.

ಮಂಗಳವಾರ ತಮ್ಮ ಟ್ವಿಟರ್ ಖಾತೆಯಲ್ಲಿ ಈ ವಿಷಯವನ್ನು ಸಿಂಧು ಘೋಷಿಸಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗಳಿಸಿರುವ ಬ್ಯಾಡ್ಮಿಂಟನ್ ತಾರೆ ಸಿಂಧು, 'ಗ್ರ್ಯಾನ್‌ಪ್ರೀ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಆಡುವ ಬೆಂಗಳೂರು ಫ್ರ್ಯಾಂಚೈಸಿಯ ಸಹಮಾಲೀಕತ್ವ ವಹಿಸಲು ಸಂತಸವಾಗುತ್ತಿದೆ. ಹೊಡಿ ಮಗಾ' ಎಂದು ಹೇಳಿರುವ ವಿಡಿಯೊ ತುಣುಕನ್ನು ಟ್ವೀಟ್ ಮಾಡಿದ್ದಾರೆ.

ಜುಲೈ 1 ರಿಂದ 10ರವರೆಗೆ ಈ ಲೀಗ್ ಟೂರ್ನಿ ಆಯೋಜನೆಗೊಳ್ಳಲಿದೆ. ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಮತ್ತು ಲೆವೆಲ್ ಅಪ್ ಸ್ಪೋರ್ಟ್ಸ್ ಜಂಟಿಯಾಗಿ ನಡೆಸಲಿರುವ ಲೀಗ್ ಇದಾಗಿದೆ. ರಾಜ್ಯದ ಬೇರೆ ಬೇರೆ ಜಿಲ್ಲೆಗಳ ತಂಡಗಳು ಭಾಗವಹಿಸಲಿವೆ. 350 ಆಟಗಾರರು ಸ್ಪರ್ಧಿಸಲಿದ್ದಾರೆ.

ಒಟ್ಟು ಎಂಟು ತಂಡಗಳ ಪೈಕಿ ಆರು ತಂಡಗಳು ಭಾಗವಹಿಸುವುದಾಗಿ ಈಗಾಗಲೇ ಖಚಿತಪಡಿಸಿವೆ. ಒಟ್ಟು ₹ 60 ಲಕ್ಷ ಪ್ರಶಸ್ತಿ ಮೊತ್ತ ಈ ಟೂರ್ನಿಗೆ ಇದೆ. ಬೆಂಗಳೂರು ಲಯನ್ಸ್, ಮೈಸೂರು ಪ್ಯಾಂಥರ್ಸ್, ಕೊಡವ ಟೈಗರ್ಸ್, ಮಂಗಳೂರ್ ಶಾರ್ಕ್ಸ್, ಬಂಡಿಪುರ್ ಟಸ್ಕರ್ಸ್ ಮತ್ತು ಮಂಡ್ಯ ಬುಲ್ಸ್ ತಂಡಗಳು ತಮ್ಮ ಸ್ಪರ್ಧೆಯನ್ನು ಖಚಿತಪಡಿಸಿವೆ.

ಖ್ಯಾತನಾಮ ಆಟಗಾರರಾದ ಕಿದಂಬಿ ಶ್ರೀಕಾಂತ್, ಅಶ್ವಿನಿ ಪೊನ್ನಪ್ಪ ಮತ್ತು ಸಾಯಿ ಪ್ರಣೀತ್ ಅವರೂ ಬೇರೆ ಬೇರೆ ತಂಡಗಳಲ್ಲಿ ಮಾಲೀಕತ್ವದ ಪಾಲುದಾರಿಕೆ ಪಡೆದಿದ್ದಾರೆ.

100 ಮೀ. ಹರ್ಡಲ್ಸ್: ಜ್ಯೋತಿ ದಾಖಲೆ

ನವದೆಹಲಿ (ಪಿಟಿಐ): ಅಥ್ಲೀಟ್ ಜ್ಯೋತಿ ಯರಾಜಿ ಅವರು ಸೈಪ್ರಸ್‌ನಲ್ಲಿ ನಡೆದ 100 ಮೀಟರ್ಸ್ ಹರ್ಡಲ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದಾರೆ.

ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಅವರು 13.23 ಸೆಕೆಂಡುಗಳಲ್ಲಿ ಗುರಿ ಚಿನ್ನದ ಪದಕ ಜಯಿಸಿದರು. ಈ ಹಿಂದಿನ ದಾಖಲೆ ಅನುರಾಧಾ ಬಿಸ್ವಾಲ್ ಅವರ ಹೆಸರಿನಲ್ಲಿತ್ತು. 2002ರಲ್ಲಿ ಅವರು 13.38 ಸೆ. ಸಾಧನೆ ಮಾಡಿದ್ದರು.

ಕ್ರಿಕೆಟ್: ಭಾರತಕ್ಕೆ ಆಸ್ಟ್ರೇಲಿಯಾ ತಂಡ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಸೆಪ್ಟೆಂಬರ್‌ನಲ್ಲಿ ಭಾರತ ಪ್ರವಾಸ ಕೈಗೊಳ್ಳಲಿದ್ದು ಮೂರು ಟಿ20 ಪಂದ್ಯಗಳಲ್ಲಿ ಆಡಲಿದೆ. 'ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಈ ಸರಣಿಯು ಉಭಯ ತಂಡಗಳಿಗೂ ಪೂರ್ವಾಭ್ಯಾಸದ ವೇದಿಕೆಯಾಗಲಿವೆ' ಎಂದು ಫಾಕ್ಸ್‌ಸ್ಪೋರ್ಟ್ಸ್ ಡಾಟ್ ಕಾಮ್ ಡಾಟ್ ಎಯು ವರದಿ ಮಾಡಿದೆ.

ವಿಶ್ವ ಬಾಕ್ಸಿಂಗ್: ಪ್ರೀಕ್ವಾರ್ಟರ್‌ಗೆ ಲವ್ಲಿನಾ


ಲವ್ಲಿನಾ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಭಾರತದ ಲವ್ಲಿನಾ ಬೊರ್ಗೊಹೈನ್ ಐಬಿಎ ಮಹಿಳಾ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದಾರೆ.

ಇಸ್ತಾನ್‌ಬುಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಲೈಟ್ ಮಿಡ್ಲ್‌ವೇಟ್ ವಿಭಾಗದ (70 ಕೆಜಿ) ಬೌಟ್‌ನಲ್ಲಿ ಲವ್ಲಿನಾ 3–2ರಿಂದ ಚೀನಾ ತೈಪೆಯ ಚೆನ್ ನಿಯೆನ್ ಚಿನ್ ಅವರನ್ನು ಪರಾಭವಗೊಳಿಸಿದರು. ಟೋಕಿಯೊ ಒಲಿಂಪಿಕ್ಸ್ ಬಳಿಕ ಲವ್ಲಿನಾ ಮೊದಲ ಬಾರಿ ಕಣಕ್ಕಿಳಿದಿದ್ದಾರೆ.

ಆರ್ಚರಿ: ಭಾರತಕ್ಕೆ ಮೂರು ಚಿನ್ನ

ಸುಲೇಮಾನಿಯಾ, ಇರಾಕ್ (ಪಿಟಿಐ): ಭಾರತದ ಆರ್ಚರಿಪಟುಗಳು ಮಂಗಳವಾರ ಇಲ್ಲಿ ನಡೆದ ಏಷ್ಯಾ ಕಪ್ ಲೆಗ್ –2 ಸ್ಪರ್ಧೆಯಲ್ಲಿ ಮೂರು ಚಿನ್ನ ಮತ್ತು ಒಂದು ಕಂಚಿನ ಪದಕ ಗೆದ್ದರು.

ಪರಣೀತ್ ಕೌರ್, ಅದಿತಿ ಸ್ವಾಮಿ ಮತ್ತು ಸಾಕ್ಷಿ ಚೌಧರಿ ಅವರು ಮೊದಲ ಚಿನ್ನದ ಪದಕವನ್ನು ಜಯಿಸಿದರು. ಫೈನಲ್‌ನಲ್ಲಿ ಅವರ ಬಳಗವು 204–201ರಿಂದ ಕಜಕಸ್ತಾನ್ ವಿರುದ್ಧ ಜಯಿಸಿತು.

ಮಿಶ್ರ ತಂಡ ವಿಭಾಗದಲ್ಲಿ ಪ್ರಥಮೇಶ್ ಫ್ಯೂಗ್ ಮತ್ತು ಪರಣೀತ್ ಕೌರ್ ಜೋಡಿಯು 158–151ರಿಂದ ಗೆದ್ದು ಚಿನ್ನ ಗಳಿಸಿತು.

ಪ್ರಥಮೇಶ್ ಫ್ಯೂಗ್, ರಿಷಭ್ ಯಾದವ್ ಮತ್ತು ಜವಾಕರ್ ಸಮಾಧಾನ್ ಅವರಿದ್ದ ತಂಡವು 224–218ರಿಂದ ಬಾಂಗ್ಲಾ ವಿರುದ್ಧ ಗೆದ್ದು ಚಿನ್ನ ಗಳಿಸಿತು. ಸಮಾಧಾನ್ ಕಜಕಸ್ತಾನದ ಕ್ರಿಸ್ಟಿಚ್ ವಿರುದ್ಧ ಜಯಿಸಿ ಕಂಚಿನ ಪದಕ ಪಡೆದರು.